# ಪ್ರಸಾದ

**ಸಂಪುಟ 29 ಸಂಚಿಕೆ 1** **ಜನವರಿ-ಫೆಬ್ರವರಿ 2014**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಮಿತಿ**
ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಮ.ಗು. ಸದಾನಂದಯ್ಯ
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾ ಶೇಖರ್
ಡಾ. ಎನ್.ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

## ಪರಿವಿಡಿ


| | |
|---|---|
| ಸಂಪಾದಕೀಯ | 5 |
| ಗುರುವಾಣಿ | 8 |
| ಡಾ. ಜಿ.ಎಸ್. ಶಿವರುದ್ರಪ್ಪನವರ ಕಾವ್ಯಾನುಸಂಧಾನ<br>**ಪ್ರೊ. ಸಿ.ಪಿ. ಸಿದ್ಧಾಶ್ರಮ** | 10 |
| ಕರುಣಾಳು ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳು<br>**ತ.ಸು. ಶಾಮರಾಯ** | 22 |
| ಆಶ್ರಯ ನೀಡಿದ ಶ್ರೀಮಠ<br>**ಡಾ. ಜಿ.ಎಸ್. ಶಿವರುದ್ರಪ್ಪ** | 24 |
| ಯಾವುದೂ ಸಣ್ಣದಲ್ಲ<br>**ಡಾ. ಜಿ.ಎಸ್. ಶಿವರುದ್ರಪ್ಪ** | 28 |
| ವಿದ್ವನ್ಮಣಿ ಎನ್. ಬಸವಾರಾಧ್ಯ<br>**ಡಾ. ಎಂ. ಚಿದಾನಂದಮೂರ್ತಿ** | 34 |
| ಕಾಮನಬಿಲ್ಲಿನ ದೇಶ ಕಟ್ಟಿದ ನೆಲ್ಸನ್ ಮಂಡೇಲಾ<br>**ಈಚನೂರು ಕುಮಾರ್** | 38 |
| ಯದುವಂಶದ ಕೊನೆಯ ಕೊಂಡಿ -<br>ಶ್ರೀಕಂಠದತ್ತ ನರಸಿಂಹರಾಜ ಒಡೆಯರ್<br>**ಈಚನೂರು ಕುಮಾರ್** | 41 |
| ಕರ್ನಾಟಕ ಸಂಗೀತ ಪಿತಾಮಹ: ಭಕ್ತಿಭಂಡಾರಿ ಬಸವೇಶ್ವರರು<br>**ವಿದ್ವಾನ್ ಬಿ.ಎಸ್. ವಿಜಯರಾಘವನ್** | 44 |
| ವಾರ್ತಾವಿಹಾರ | 50 |


**ಮುಖಪುಟ ಚಿತ್ರ**

ಧಾರವಾಡದಲ್ಲಿ ಜರುಗಿದ ಅಖಿಲ ಭಾರತ 11ನೆಯ ಶರಣ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭ : ಚಿತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳು, ಆದಿಚುಂಚನಗಿರಿ ಶ್ರೀಗಳು, ಶ್ರೀ ಗೊ.ರು. ಚನ್ನಬಸಪ್ಪ, ಗದಗ-ಡಂಬಳದ ಶ್ರೀಗಳು, ಡಾ. ಅಜಯಕುಮಾರ್ ಸಿಂಗ್, ಶ್ರೀ ಎಚ್.ಕೆ. ಪಾಟೀಲ್, ಶ್ರೀ ಚಂದ್ರಕಾಂತ ಬೆಲ್ಲದ, ಶ್ರೀ ಬಸವರಾಜ್ ಹೊರಟ್ಟಿ, ಮುರುಘಾಮಠದ ಶ್ರೀಗಳು, ಡಾ. ಚನ್ನವೀರ ಕಣವಿ, ಶ್ರೀ ವಿನಯ್ ಕುಲಕರ್ಣಿ

## ಲೇಖಕರ ವಿಳಾಸ


**ಪ್ರೊ. ಸಿ.ಪಿ. ಸಿದ್ಧಾಶ್ರಮ**
ಕನ್ನಡ ಪ್ರಾಧ್ಯಾಪಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು 570 006

**ಡಾ. ಎಂ. ಚಿದಾನಂದಮೂರ್ತಿ**
ನಂ. 6/ಎ, ಮಿಂಚು, 4ನೇ ಕ್ರಾಸ್
1ನೇ ಮೈನ್, ವಿಜಯನಗರ, 2ನೇ ಹಂತ
ಬೆಂಗಳೂರು 560 040

**ಶ್ರೀ ಈಚನೂರು ಕುಮಾರ್**
ನಂ. 796, EWS M- ಬ್ಲಾಕ್
ಕುವೆಂಪುನಗರ
ಮೈಸೂರು 570 023

**ವಿದ್ವಾನ್ ಬಿ.ಎಸ್. ವಿಜಯರಾಘವನ್**
ಎಂಐಜಿ -16, 2 ನೇ ಹಂತ
ನೃಪತುಂಗ ರಸ್ತೆ, ಕುವೆಂಪುನಗರ
ಮೈಸೂರು 570 023


# ಸಂಪಾದಕೀಯ

ಶ್ರೀ ವಿಜಯ ಸಂವತ್ಸರದ ಮೊದಲನೆಯ ಸಂಚಿಕೆ ಇದು. ಕಳೆದುಹೋದ ದಿನಗಳ ಉಬ್ಬರವಿಳಿತಗಳನ್ನು ಮೆಲುಕುಹಾಕುತ್ತ ಹೊಸ ವರ್ಷದ ಆರಂಭದ ದಿನಗಳಲ್ಲಿ ಸಂಭ್ರಮಿಸಬೇಕಾಗಿದ್ದ ನಮ್ಮ ಮನಸ್ಸುಗಳನ್ನು ಹಲವಾರು ದುಃಖಕರ ಘಟನೆಗಳು ಮಸುಕಾಗಿಸಿಬಿಟ್ಟಿವೆ. ಆಫ್ರಿಕಾದ ಗಾಂಧಿ ನೆಲ್ಸನ್ ಮಂಡೇಲಾ, ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ, ಸಂಶೋಧಕರಾದ ಎನ್. ಬಸವಾರಾಧ್ಯ, ಮೈಸೂರರಸರ ಕುಟುಂಬವರ್ಗದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರುಗಳ ನಿಧನ – ಇವೆಲ್ಲವೂ ನಮ್ಮೊಳಗನ್ನು ಇನ್ನೂ ಗಾಢವಾಗಿ ಆವರಿಸಿವೆ.

ಆಫ್ರಿಕಾದ ನೆಲ್ಸನ್ ಮಂಡೇಲಾ, ತನ್ನ ನೆಲದಲ್ಲೇ ತನ್ನವರ ಬಿಡುಗಡೆಗಾಗಿ ಎರಡೂವರೆ ದಶಕಗಳ ಕಾಲ ಸೆರೆಯಲ್ಲಿದ್ದವರು. ರಕ್ತಕ್ರಾಂತಿಯನ್ನು ವಿರೋಧಿಸುತ್ತಿದ್ದ ಅವರು ಮಹಾತ್ಮ ಗಾಂಧೀಜಿಯವರ ಅಹಿಂಸಾತ್ಮಕ ಮಾರ್ಗದ ಅನುಯಾಯಿ ಯಾಗಿಯೇ ಕೊನೆತನಕ ಬದುಕಿದವರು. ಹಾಗೆ ನೋಡಿದರೆ ಜಗತ್ತಿನ ಯಾವ ಹೋರಾಟಗಾರರೂ ಸಂಪೂರ್ಣವಾಗಿ 'ಗಾಂಧಿ ಮಾರ್ಗ'ವನ್ನು ಅನುಸರಿಸಿರುವುದಕ್ಕೆ ದಾಖಲೆ ಇಲ್ಲ; ಹಾಗೇನಾದರೂ ಇದ್ದರೆ ಅದು ಕೇವಲ ನೆಲ್ಸನ್ ಮಂಡೇಲಾ ಅವರು ಮಾತ್ರ! ಜಾಗತಿಕ ಮಟ್ಟದಲ್ಲಿ ಇಂದು ಗಾಂಧಿ ಕೇವಲ ಒಂದು ಹೆಸರಾಗಿ ಉಳಿದಿಲ್ಲ; ಅಹಿಂಸೆ, ಸತ್ಯಾಗ್ರಹ, ಸತ್ಯಕ್ಕೆ ಅವರೊಂದು ರೂಪಕವಾಗಿದ್ದಾರೆ; ಪ್ರತಿಮೆಯಾಗಿದ್ದಾರೆ. ಈ ಸರಳ ಭೂಮ ವ್ಯಕ್ತಿತ್ವವನ್ನು ತಮ್ಮೊಳಗೆ ಆವಾಹಿಸಿಕೊಳ್ಳುವುದೆಂದರೆ ಅದು ಸಾಮಾನ್ಯವಾದ ಪ್ರಕ್ರಿಯೆಯಲ್ಲ. ಆದರೂ ಅದನ್ನು ಸಾಧಿಸಿ ತೋರಿಸಿದ ಮಂಡೇಲಾ ಅವರು ಇಂದಿನ ಪೀಳಿಗೆಗೆ ಮಹಾತ್ಮರ ಪ್ರತಿರೂಪವಾಗಿ ಕಂಡರೆ ಅಚ್ಚರಿಯೇನಲ್ಲ. ಅಂತಹವರ ನಿಧನ ನಿಜಕ್ಕೂ ಒಂದು ಜಾಗತಿಕ ನಷ್ಟವೇ ಸರಿ. ಇಂತಹ ಒಂದೊಂದು ಕೊಂಡಿ ಕಳಚಿದಾಗಲೂ, ನಮ್ಮ ಬದುಕಿನಲ್ಲಿ ದೊಡ್ಡ ಶೂನ್ಯವೊಂದು ಆವರಿಸುತ್ತದೆ. ತ್ಯಾಗ, ಸೇವೆಗಳ ಪ್ರತಿರೂಪಕ್ಕಾಗಿ ಎಲ್ಲಿ ಹುಡುಕಬೇಕು, ಎಷ್ಟು ಕಾಲ ಕಾಯಬೇಕು ಎನ್ನುವ ಆತಂಕ ಮನೆ ಮಾಡುತ್ತದೆ.

* * *

ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಸುತ್ತೂರು ಶ್ರೀಮಠದ ಹಿರಿಯ ವಿದ್ಯಾರ್ಥಿಯಾಗಿದ್ದವರು. ಅಂತಹ ಅವಕಾಶವನ್ನು ಅವರಿಗೆ ಕಲ್ಪಿಸಿಕೊಟ್ಟವರು ಅವರ

ಗುರುಗಳಾದ ತ.ಸು. ಶಾಮರಾಯರು. ಅವರು ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಆಶ್ರಯದ ಮಡಿಲಿಗೆ ಶಿವರುದ್ರಪ್ಪನವರನ್ನು ತಂದುಬಿಟ್ಟದ್ದು ಒಂದು ಯೋಗಾಯೋಗ. ಕುವೆಂಪು ಅವರ ಪ್ರಿಯ ಶಿಷ್ಯರಾಗಿದ್ದ ಜಿ.ಎಸ್.ಎಸ್. ಗುರುವಿನ ನಂತರ ಮುಂದೆ 'ರಾಷ್ಟ್ರಕವಿ' ಎನಿಸಿಕೊಳ್ಳುವ ಮೂಲಕ 'ಗುರುದಕ್ಷಿಣೆ'ಯನ್ನು ಸಲ್ಲಿಸಿದುದು ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿಯೇ ಅನನ್ಯವಾದ ಅಂಶ. ತಮ್ಮ ಗುರು ಶಾಮರಾಯರ ಮುಂದೆ ಎದೆ ತುಂಬಿ ಹಾಡಿ, ಬೆನ್ನು ತಟ್ಟಿಸಿಕೊಂಡ ಕವಿ. ತನ್ನ ನಿಡುಬಾಳಿನುದ್ದಕ್ಕೂ, ಇಲ್ಲದ ದೇವರನ್ನು ಕಲ್ಲುಮಣ್ಣುಗಳ ಗುಡಿಯೊಳಗೆ ಹುಡುಕದೆ, ಮನುಷ್ಯಹೃದಯದಲ್ಲಿ ಹುಡುಕಿ ಪೂಜಿಸಿದರು. ಅವರು ಒಂದು ಅರ್ಥದಲ್ಲಿ 'ಪ್ರೇಮಕವಿ'; ಅವರದ್ದು ವ್ಯಾಪಕವಾದ ಮಾನವಪ್ರೇಮ, ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ ಎನ್ನುತ್ತ ಸೃಷ್ಟಿಕ್ರಿಯೆ, ವಿಕಾಸಕ್ರಿಯೆಯಲ್ಲಿ 'ಪ್ರೀತಿ' ಎನ್ನುವ ಮಾಂತ್ರಿಕಶಕ್ತಿಯನ್ನೇ ಸತತವಾಗಿ ಧ್ಯಾನಿಸಿದ ಕವಿ; ಪ್ರೀತಿಯನ್ನು ದೇಹಸ್ತರದಿಂದ ಆತ್ಮಸ್ತರಕ್ಕೆ ಒಯ್ದ ಸಮನ್ವಯ ಕವಿ.

* * *

ಶ್ರೀ ಎನ್. ಬಸವಾರಾಧ್ಯರು ಈ ನಾಡು ಕಂಡ ಅಪರೂಪದ ವಿದ್ವಾಂಸರು. ಸಂಶೋಧನೆ ಎಂಬುದು ಜನಪ್ರಿಯತೆಯನ್ನಾಗಲೀ, ಹಣವನ್ನಾಗಲೀ ತಂದುಕೊಡದ, ಒಂದು ರೀತಿಯ ಉರಿಗದ್ದಿಗೆಯ ಮೇಲಿನ ತಪೋಭೂಮಿಯಾದರೂ ಅದರಲ್ಲಿಯೇ ಅವರು ತಮ್ಮ ಬದುಕಿನ ಸುಖಸಂತೋಷಗಳನ್ನು ಕಂಡವರು. ಶ್ರೀಮಠದ ಹಿರಿಯ ವಿದ್ಯಾರ್ಥಿಯಾಗಿ, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕೃಪೆಗೆ ಪಾತ್ರರಾಗಿದ್ದ ಪುಣ್ಯಜೀವಿ.

* * *

ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ನಿಧನದಿಂದ, ಹಳೆಯ ಮೈಸೂರು ಜನತೆಯ ಭಾವಕೋಶದೊಳಗಿನ ಪರಂಪರೆಯ ಪ್ರಜ್ಞೆಯೊಂದು ಹಠಾತ್ ಸ್ಥಗಿತಗೊಂಡಂತಾಗಿದೆ. ಸುಮಾರು 400 ವರ್ಷಗಳ ಕಾಲ, ಕನ್ನಡ ಸಂಸ್ಕೃತಿಯನ್ನು ಗರಿಷ್ಠ ಮಟ್ಟದಲ್ಲಿ ಪೋಷಿಸಿದ, ನಾಡಿನ ಸಾಮಾಜಿಕ ಬದುಕಿಗೆ ಒಂದು ಕ್ರಾಂತಿಕಾರಕ ಆಯಾಮವನ್ನು ತಂದುಕೊಟ್ಟ ನಮ್ಮ ಮೈಸೂರು ಅರಸರು ನಾಡಿನ ಜನತೆಯ ಗೌರವ, ಭಕ್ತಿಗಳಿಗೆ ನಿರಂತರವಾಗಿ ಭಾಜನರಾಗಿದ್ದವರು. ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರಂತಹವರು ತಮ್ಮ ದೂರದೃಷ್ಟಿಯ ಅನೇಕ ಜನಪರ ಕಾರ್ಯಕ್ರಮಗಳಿಂದ 'ರಾಜರ್ಷಿ' ಎಂದೇ ಪ್ರಕೀರ್ತಿತರಾದವರು. ದೊಡ್ಡದೇವರಾಜ ಒಡೆಯರು, ಮುಮ್ಮಡಿ ಕೃಷ್ಣರಾಜರು, ರಣಧೀರ ಕಂಠೀರವ ಮುಂತಾದ ದೊರೆಗಳು ಸರ್ವಧರ್ಮಸಮನ್ವಯಿಗಳಾಗಿದ್ದರು. ಜಯಚಾಮರಾಜ ಒಡೆಯರ್ ಅವರ ವ್ಯಕ್ತಿತ್ವ ನಿಜಕ್ಕೂ ಘನವಾದುದೇ



ಆಗಿತ್ತು. ಸ್ವಾತಂತ್ರ್ಯಾನಂತರದ ಕ್ಷಿಪ್ರ ರಾಜಕೀಯ ಸ್ಥಿತ್ಯಂತರಗಳಿಂದುಂಟಾದ ಏನೆಲ್ಲಾ ಕಷ್ಟನಷ್ಟಗಳನ್ನು ಸಮಚಿತ್ತದಿಂದ ಸ್ವೀಕರಿಸಿ, ಯದುವಂಶದ ಘನತೆ ಗಾಂಭೀರ್ಯವನ್ನು ಎತ್ತಿಹಿಡಿದು 'ರಾಜರ್ಷಿ'ಯಂತೆಯೆ ಬದುಕಿದವರು. ಸುತ್ತೂರು ಶ್ರೀಮಠದ ಗುರುಪರಂಪರೆಯ ಬಗ್ಗೆ ಅವರಿಗೆ ಅಪಾರವಾದ ಗೌರವ. ಅವರ ಸುಪುತ್ರ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ಸ್ವತಃ ರಾಜರಾಗದೆ ಹೋದರೂ, ರಾಜಪರಂಪರೆಯ ಎಲ್ಲ ಎತ್ತರ ಬಿತ್ತರಗಳನ್ನು ಕಾಪಾಡಿಕೊಂಡು ಬಂದ ಅಪರೂಪದ ವ್ಯಕ್ತಿತ್ವದವರು. ಆಧುನಿಕ ವಿದ್ಯಾಭ್ಯಾಸ, ಆಧುನಿಕ ವಿದ್ಯಮಾನಗಳ ಅರಿವು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗೌರವಿಸಿ, ಜನಪ್ರತಿನಿಧಿಯಾಗಿಯೂ ಅವರು ಪಡೆದ ಅಪಾರ ಪ್ರಜಾಮನ್ನಣೆ ಇವೆಲ್ಲವೂ ನಾಡಿನ ಜನಮನದಲ್ಲಿ ಹಚ್ಚಹಸಿರಾಗಿವೆ. ಆಳುವ ರಾಜರಲ್ಲದಿದ್ದರೂ, ನಾಡವರ ಹೃದಯಸಿಂಹಾಸನದಲ್ಲಿ 'ರಾಜರಾಗಿಯೇ ಪ್ರತಿಷ್ಠಾಪಿತರಾಗಿದ್ದ' ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ನಿಧನ, ನಮ್ಮ ಭಾವಸಾಮ್ರಾಜ್ಯಕ್ಕೆ ಉಂಟಾದ ಬಹು ದೊಡ್ಡ ಆಘಾತ.

ಆಳಾಗಲೀ, ಅರಸಾಗಲಿ, ಕಾಲನ ಕರೆಗೆ ತಲೆಬಾಗಲೇಬೇಕು. ಇದು ಕಾಲಾತೀತ, ದೇಶಾತೀತವಾದ ಸತ್ಯ ನಿಜ. ಆದರೆ ನಾವು ಕಾಲಬದ್ಧ, ದೇಶಬದ್ಧ ಸಾಮಾನ್ಯ ಜನ. ದಾರ್ಶನಿಕರು ಕಂಡ ಸತ್ಯದ ಅಲ್ಪಸ್ವಲ್ಪ ಅರಿವಿದ್ದರೂ, ಅವುಗಳನ್ನು ಸ್ಥಾಯಿಯನ್ನಾಗಿಸಿಕೊಂಡು ಸ್ಥಿತಪ್ರಜ್ಞರಂತೆ ಬದುಕಲು ಸಾಧ್ಯವಿಲ್ಲ. ಸಣ್ಣ ಪುಟ್ಟ ಘಟನೆಗಳಿಗೂ, ಲಾಭ-ನಷ್ಟಗಳಿಗೂ ಕುಗ್ಗುವ ಹಿಗ್ಗುವ ಮನಃಸ್ಥಿತಿಯಲ್ಲಿಯೇ ಬದುಕುವ ನಮ್ಮಂತಹ ಸಾಮಾನ್ಯರಿಗೆ ಕೆಲವೊಮ್ಮೆ ದೊಡ್ಡದು ಯಾವುದು, ಅದರ ಗೈರುಹಾಜರಿಯಲ್ಲಿ ಉಂಟಾಗಬಹುದಾದ 'ಶೂನ್ಯ' ಎಂತಹುದು, ಅದನ್ನು ತುಂಬುವ ವ್ಯಕ್ತಿಗಳನ್ನು ಸೃಷ್ಟಿಸುವ ಸಾಧ್ಯತೆಗಳು ಅಥವಾ, ನಮ್ಮ ನಡುವೆಯೇ ಅಂಥವರು ವನಸುಮದಂತೆ ಇದ್ದರೆ, ಅವರನ್ನು ಗಮನಿಸಿ ಸೂಕ್ತವಾಗಿ ಗೌರವಿಸುವುದು ಹೇಗೆ ಎನ್ನುವುದು ಸ್ಪಷ್ಟವಾಗುವತನಕ ಇಂತಹ ಘಟನೆಗಳು ನಮ್ಮ ಮನಸ್ಸಿಗೆ ಕಾರ್ಮೋಡವಾಗಿ ಕವಿಯುತ್ತವೆ. ಸಮಾಜಸೇವಕರ, ಕವಿ ಕಲಾವಿದರ, ಸಾಂಸ್ಕೃತಿಕ ನಾಯಕರ ಋಣ ಸಮಾಜದ ಮೇಲೆ ತುಂಬಾ ಇದೆ. ಅದನ್ನು ತೀರಿಸುವ ಮಾರ್ಗವೆಂದರೆ ಅವರ ಕನಸುಗಳನ್ನು ನಾವು ಸಾಕಾರಗೊಳಿಸುವುದು. ಅದು ಸಮಷ್ಟಿಯ ಕರ್ತವ್ಯ. ಅದರ ಮೊದಲ ಹೆಜ್ಜೆ, ಹೃದಯ ತುಂಬಿದ ನಾಲ್ಕು ಹನಿ ಕಣ್ಣೀರು ಮಾತ್ರ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಪ್ರತಿವರ್ಷ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಸುತ್ತೂರು ಶ್ರೀಕ್ಷೇತ್ರದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮ ನೆರವೇರುತ್ತದೆ. ಇದರಲ್ಲಿ ಜಾತಿ ಧರ್ಮ ಭೇದವಿಲ್ಲದೆ ಎಲ್ಲ ವಧೂವರರು ಸತಿಪತಿಗಳಾಗುತ್ತಾರೆ. ಈ ಬಾರಿಯ ಸಾಮೂಹಿಕ ವಿವಾಹ ನಡೆದದ್ದು ಮಂಗಳವಾರದಂದು. ಸಾಮಾನ್ಯವಾಗಿ ಮಂಗಳವಾರ ಅಶುಭ ದಿನ ಎನ್ನುವ ಕಾರಣಕ್ಕಾಗಿ ವಿವಾಹಗಳು ನಡೆಯುವುದಿಲ್ಲ. ಈ ಮನಃಸ್ಥಿತಿಯ ಹಿನ್ನೆಲೆಯಲ್ಲಿ ಕೆಲವರು ಗೊಂದಲಕ್ಕೆ ಒಳಗಾಗುವುದುಂಟು.

"ವಾರಗಳನ್ನು ಮನುಷ್ಯರು ಮಾಡಿಕೊಂಡಿರುವುದು. ಎಲ್ಲಾ ದಿನಗಳೂ ಒಳ್ಳೆಯವೇ. ಶುಭವಿವಾಹ ಕಾರ್ಯಕ್ಕೆ ಯಾವುದೇ ದಿನವಾದರೂ ಒಳ್ಳೆಯದೇ" ಆದರೂ ಅನೇಕರಲ್ಲಿ 'ವಾರದ ಅಳುಕು' ಇದ್ದೇ ಇರುತ್ತದೆ. ಎಂಟು ನೂರು ವರ್ಷಗಳ ಹಿಂದೆಯೇ ಬಸವಾದಿ ಶರಣರು ಇಂತಹ ನಂಬಿಕೆಗಳ ಬಗ್ಗೆ ಸ್ಪಷ್ಟಪಡಿಸಿ ಹೇಳಿದ್ದರೂ, ಜನಸಮೂಹ ಅದನ್ನು ಸ್ವೀಕರಿಸುವ 'ಮಾನಸಿಕ ಸ್ಥೈರ್ಯ'ವನ್ನು ಇನ್ನೂ ಪಡೆದುಕೊಂಡಿಲ್ಲ. ಶರಣರ ಚಿಂತನೆಯ ಅಂಶಗಳನ್ನು ಹಂತಹಂತವಾಗಿ ಅಳವಡಿಸಿಕೊಳ್ಳಬೇಕಾಗಿದೆ.

ಮನುಕುಲದ ಬದುಕು ನೆಮ್ಮದಿಯಿಂದ ಸಾಗುತ್ತಿರುವುದೇ ನಂಬಿಕೆಯ ಆಧಾರದ ಮೇಲೆ. ನಂಬಿಕೆ, ಶ್ರದ್ಧೆ ಇಲ್ಲದ ಕೇವಲ ಬುದ್ಧಿಗತ ತರ್ಕದ ಮೇಲೆ ಸಾಗುವ ಬದುಕು ಶುಷ್ಕ; ಭಾವಲೋಕ ವಿಸ್ತೃತವಾದಷ್ಟೂ ಬದುಕು ಸಂತೃಪ್ತಿಪಥದತ್ತ ಸಾಗುತ್ತದೆ. ಭಾವಕೋಶದ ಮೂಲದ್ರವ್ಯವೆಂದರೆ ಶ್ರದ್ಧೆ, ನಂಬಿಕೆ ಮತ್ತು ಬದ್ಧತೆ. ದೇವರಲ್ಲಿ ಭಕ್ತರಿಗೆ, ಗುರುವಿನಲ್ಲಿ ಶಿಷ್ಯರಿಗೆ, ಕುಟುಂಬದಲ್ಲಿ ಪತಿ-ಪತ್ನಿ, ತಂದೆ-ತಾಯಿ, ಅಣ್ಣ-ತಮ್ಮಂದಿರಿಗೆ; ಸಮಾಜದಲ್ಲಿ ಒಬ್ಬರೊಬ್ಬರಿಗೆ - ಹೀಗೆ ನಂಬಿಕೆಯ ವ್ಯಾಪ್ತಿ ವಿಶಾಲ. ನಿಸರ್ಗಕ್ಕೊಂದು ಸಹಜ ಧರ್ಮವಿದೆ; ಗಾಳಿ, ನೀರು, ಬೆಂಕಿ, ಮರ, ಗಿಡಗಳು - ಇವಾವುವೂ ತಮ್ಮ ಸಹಜ ಗುಣಗಳಿಂದ ಯಾವುದೇ ಕಾರಣಕ್ಕೂ ವಿಮುಖವಾಗುವುದಿಲ್ಲ. ಹಾಗೆಯೇ ಪ್ರಜ್ಞಾವಂತ ಮನುಷ್ಯನೂ ಮಾನವೀಯವೆನಿಸುವ ನಂಬಿಕೆ ನಡಾವಳಿಗಳ ಸಹಜ ಧರ್ಮದ ಆಧಾರದ ಮೇಲೆ ತನ್ನ ಬದುಕನ್ನು ಶ್ರೀಮಂತಗೊಳಿಸಿಕೊಳ್ಳುವುದರಿಂದ ಆತ್ಮೋದ್ಧಾರ ಹಾಗೂ ಸಮಾಜೋದ್ಧಾರ ಸಾಧ್ಯ.

ಆದರೆ ಮನುಷ್ಯನ ಅತಿ ಆಸೆ, ಭಯಭೀತಿಗಳು ಅತಾರ್ಕಿಕವಾದ ಮೂಢನಂಬಿಕೆಗೆ ಕಾರಣವಾಗುತ್ತವೆ. ತನ್ನ ಪ್ರಯತ್ನ ಮತ್ತು ಅರ್ಹತೆಗಿಂತ ಹೆಚ್ಚಾದುದಕ್ಕೆ



ಹಪಹಪಿಸುವುದು, ಸಾವು ಮತ್ತು ಕೇಡಿಗೆ ಹೆದರುವುದು ಮುಂತಾದುವು ಆತನನ್ನು ಋಜುಮಾರ್ಗದಿಂದ ವಿಮುಖವಾಗಿಸಿ ಮೌಢ್ಯದ ಮಾರ್ಗದಲ್ಲಿ ಕರೆದೊಯ್ಯುತ್ತವೆ. ಅತಾರ್ಕಿಕವಾದದ್ದನ್ನು, ಅಸಹಜವಾದುದನ್ನು ನಂಬುವುದರಿಂದ, ಕೆಡಕನ್ನು ನಿವಾರಿಸ ಬಹುದು ಎನ್ನುವ ಭ್ರಮೆ ಆವರಿಸುತ್ತದೆ; ಅಂಧಶ್ರದ್ಧೆಗೆ ದಾರಿಮಾಡಿಕೊಡುತ್ತದೆ. ತಾರೆ ನೀಹಾರಿಕೆಗಳಂತಹ ಬ್ರಹ್ಮಾಂಡದ ವಸ್ತುಗಳ ಚಲನವಲನಗಳಿಗೂ, ವೈಯಕ್ತಿಕ ಬದುಕಿಗೂ ಇಲ್ಲದ ಸಂಬಂಧವನ್ನು ಕಲ್ಪಿಸಿಕೊಂಡಾಗ ಮುಜುಗರ ಉಂಟಾಗುತ್ತದೆ. ವ್ಯಕ್ತಿ ತನ್ನ ಸುಖಸಂತೋಷಕ್ಕಾಗಿ ಪ್ರಾಣಿಗಳನ್ನು ಬಲಿಕೊಡುತ್ತಾನೆ.; ಅಷ್ಟೇ ಏಕೆ, ಹೆತ್ತ ಮಕ್ಕಳನ್ನೇ ಬಲಿಕೊಡುವ ಮಟ್ಟಕ್ಕೂ ಇಳಿಯುತ್ತಾನೆ. ಖಗೋಳವಿಜ್ಞಾನಕ್ಕೂ, ಫಲಜ್ಯೋತಿಷ್ಯಕ್ಕೂ ಅಸಂಬದ್ಧ ಸಂಬಂಧ ಕಲ್ಪಿಸಿಕೊಂಡು ಚಡಪಡಿಸುತ್ತಾನೆ. ಈ ಚಡಪಡಿಕೆಯ ಫಲವೇ 'ಮೌಢ್ಯದ' ತಳಹದಿ. ಎಲ್ಲ ಕಾಲದಲ್ಲಿಯೂ, ಎಲ್ಲ ಸಮಾಜಗಳಲ್ಲಿಯೂ ಈ ತೆರನ ನಂಬಿಕೆ ನಡಾವಳಿಗಳು ತಲೆದೋರುತ್ತಿರುತ್ತವೆ. ಅವರವರ ವಿದ್ಯಾಭ್ಯಾಸದ ಮಟ್ಟ, ಭೌಗೋಳಿಕ ಪರಿಸರ, ಧಾರ್ಮಿಕ ನಂಬಿಕೆ ಮುಂತಾದುವುಗಳ ಹಿನ್ನೆಲೆಯಲ್ಲಿ ಆ ಅಂಶಗಳು ಸ್ವಲ್ಪ ಹೆಚ್ಚುಕಡಿಮೆಯಾಗಬಹುದು, ಅಷ್ಟೆ. ಈ ಬಗೆಯ ಭಾವಕೋಶಸಂಬಂಧಿಯಾದ ಅಂಶಗಳನ್ನು ಕಾನೂನುಗಳ ಮೂಲಕ ಪರಿಹರಿಸಲು ಎಂದಿಗೂ ಸಾಧ್ಯವಿಲ್ಲ. ಶಿಕ್ಷೆಯ ಭಯದ ವಾತಾವರಣ ನಿರ್ಮಾಣಗೊಂಡರೆ ಬಹಿರಂಗವಾಗಿ ಮಾಡುವುದನ್ನು ತ್ಯಜಿಸಿ, ಜನರು ಗುಪ್ತವಾಗಿ ಆಚರಿಸುವ ಮಾರ್ಗೋಪಾಯಗಳನ್ನು ಹುಡುಕಿಕೊಳ್ಳುತ್ತಾರೆ. ಆದ್ದರಿಂದ ಪ್ರಜ್ಞಾವಂತರು ಇಂಥವುಗಳ ಬಗ್ಗೆ ಸದಾ ಕಾಲ ಅರಿವು ಮೂಡಿಸುತ್ತ ಧೈರ್ಯವಾಗಿ ಮುಂದೆ ಬಂದು ತಾವೇ ಮಾದರಿಯಾಗಬೇಕು. ಸಂಘಸಂಸ್ಥೆಗಳೂ ಅದನ್ನು ಪ್ರೋತ್ಸಾಹಿಸಬೇಕು.

ಇಂತಹ ಕಾರ್ಯಗಳನ್ನು ಹಮ್ಮಿಕೊಳ್ಳಲು "ನಾಳಿನ ದಿನಕ್ಕಿಂತ ಇಂದಿನ ದಿನವೇ ಲೇಸು" ಎನ್ನುವ ಕ್ರಿಯಾಶೀಲತೆ, ಬೌದ್ಧಿಕ ಬದ್ಧತೆ ಸಮಾಜದ ವಿವಿಧ ಸ್ತರಗಳಲ್ಲಿ ಮೂಡಲಿ, ಮೂಢನಂಬಿಕೆಗಳು ಅಳಿಯುತ್ತ ನಿಜದ ನಂಬಿಕೆಗಳು ಎಲ್ಲರ ಒಳಗನ್ನೂ ಬೆಳಗಲೆಂದು ಹಾರೈಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಡಾ. ಜಿ.ಎಸ್. ಶಿವರುದ್ರಪ್ಪನವರ ಕಾವ್ಯಾನುಸಂಧಾನ

**ಪ್ರೊ. ಸಿ.ಪಿ. ಸಿದ್ಧಾಶ್ರಮ**

ಜಿ.ಎಸ್. ಶಿವರುದ್ರಪ್ಪನವರು ಉತ್ತಮ ಕವಿಯಾಗಿ, ಶ್ರೇಷ್ಠ ವಿಮರ್ಶಕರಾಗಿ, ಒಳ್ಳೆಯ ಚಿಂತಕರಾಗಿ, ವಿದ್ಯಾರ್ಥಿಪ್ರಿಯ ಅಧ್ಯಾಪಕರಾಗಿ, ಉತ್ತಮ ಆಡಳಿತಗಾರರಾಗಿ, ನಾಡಿನ ಜನಮನದಲ್ಲಿ ನಾಟಿಹೋಗಿದ್ದಾರೆ. ಕುವೆಂಪು ಶಿಷ್ಯರಾದ ಇವರು ಕುವೆಂಪು ಅವರ ತತ್ವಾದರ್ಶಗಳನ್ನು ಜೀವನ ಮತ್ತು ಕಾವ್ಯಜೀವನದಲ್ಲಿ ಅಳವಡಿಸಿಕೊಂಡು ಮುಂದುವರೆದವರು; ಗುರುವಿನ ಎತ್ತರಕ್ಕೆ ಏರಿದವರು. ಇವರ ಆರಂಭದ ಕವನಗಳಲ್ಲಿ ಕುವೆಂಪು ಪ್ರಭಾವ ದಟ್ಟವಾಗಿಯೇ ಆಗಿರುವುದನ್ನು ಕಾಣಬಹುದು. ತದನಂತರ ನಿಧಾನವಾಗಿ ಕುವೆಂಪು ಪ್ರಭಾವದಿಂದ ಬಿಡಿಸಿಕೊಂಡು ತಮ್ಮದೇ ಆದ ಕಾವ್ಯ ಮಾರ್ಗವನ್ನು ಕಂಡುಕೊಂಡು ಕಾವ್ಯಕೃಷಿ ನಡೆಸಿರುವುದು ಗಮನಾರ್ಹ ಸಂಗತಿಯಾಗಿದೆ.

ಜಿಎಸ್‌ಎಸ್ ಅವರ 'ಚದುರಿದ ಚಿಂತನೆಗಳು' ಎಂಬ ಕೃತಿಯಲ್ಲಿ 'ಕೊಟ್ಟ ಕುದುರೆ' ಎಂಬ ಲೇಖನವೊಂದಿದೆ. ಅದು ಅಲ್ಲಮನ ವಚನವೊಂದರ "ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ" ಎಂಬ ನುಡಿಯ ಆಶಯದ ನೆರಳಿನಲ್ಲಿ ಬದುಕಿನ ವಾಸ್ತವತೆಯನ್ನು ಗ್ರಹಿಸುವ ಸಂಗತಿಯನ್ನು ಒಳಗೊಂಡಿರುವಂಥದ್ದು. ನಮ್ಮ ಕಣ್ಣಿಗೆ ಕಾಣುವ ಮತ್ತು ಬದುಕುತ್ತಿರುವ ಈ ಬದುಕಿನ ವಾಸ್ತವತೆಯನ್ನು, ಅದರ ಆಗುಹೋಗುಗಳನ್ನು ಹಾಗೂ ಸತ್ಯದ ಸ್ವರೂಪವನ್ನು ಅದರ ಭೌತಿಕ ಸ್ವರೂಪದಲ್ಲೇ ಅರಿಯುವ ಪ್ರಯತ್ನದ ಹುಡುಕಾಟ ಇಲ್ಲಿ ಕಂಡುಬರುತ್ತದೆ. ಇಹದ ಬದುಕನ್ನು ಅದು ಒಡ್ಡುವ ಸವಾಲುಗಳನ್ನು, ಸುಖ-ದುಃಖದ ಕಟುವಾಸ್ತವಸತ್ಯವನ್ನು ಮನುಷ್ಯ ಧೈರ್ಯದಿಂದ ಎದುರಿಸಿ ಸ್ವೀಕರಿಸಬೇಕಾದ ಅನಿವಾರ್ಯತೆ ಮತ್ತು ಆ ಮೂಲಕ ಬದುಕಿನ ಮೂಷೆಯಲ್ಲಿ ಗಟ್ಟಿಗೊಳ್ಳಬೇಕಾದ ಸಂಗತಿಯನ್ನು ತಿಳಿಸುತ್ತದೆ, ಈ ಲೇಖನ. ಅಲ್ಲದೆ ಇಹದ ಬದುಕನ್ನು ದೂರುತ್ತಾ ಕಾಣದ, ಅನುಭವಗ್ರಾಹ್ಯವಲ್ಲದ 'ಪರ'ದ ಹಂಬಲ ಹೊಂದುವುದು ಉಚಿತವಲ್ಲ, ಸಾಧುವಲ್ಲ ಎಂಬ ಅಭಿಪ್ರಾಯವನ್ನು ಜಿಎಸ್‌ಎಸ್ ಇಲ್ಲಿ ತಾಳಿರುವುದು ಕಂಡುಬರುತ್ತದೆ. ಅವರ ದೃಷ್ಟಿಯಲ್ಲಿ ಈ ಬದುಕೇ ನಿಸರ್ಗ ನೀಡಿದ ಕೊಟ್ಟ ಕುದುರೆ. ಇಂಥ ಅಮೂಲ್ಯವಾದ ಬದುಕೆಂಬ ಕೊಟ್ಟ ಕುದುರೆಯನ್ನು ಪಳಗಿಸಿ ಸವಾರಿಮಾಡಿ ಬದುಕನ್ನು ಸಹ್ಯ ಮಾಡಿಕೊಳ್ಳಬೇಕು, ಸಾರ್ಥಕ ಮಾಡಿಕೊಳ್ಳಬೇಕೆಂಬುದು ಜಿಎಸ್‌ಎಸ್ ಅವರ



ಖಚಿತ ನಿಲುವು. ಬದುಕನ್ನು ಕುರಿತ ಜಿಎಸ್‌ಎಸ್ ಅವರ ಈ ನಿಲುವು ಅತ್ಯಂತ ಸಮಂಜಸವಾದುದು ಮತ್ತು ಮೌಲಿಕವಾದುದು. ಇವರ ಬದುಕು ಮತ್ತು ಕಾವ್ಯ ಬದುಕು ಈ ಸ್ಪಷ್ಟ ತಿಳಿವಿನಲ್ಲೆ ಸಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಜಿಎಸ್‌ಎಸ್ ಅವರ ಕಾವ್ಯದಲ್ಲಿ ದೇವರು-ಧರ್ಮದ ವಿಷಯ ಅಷ್ಟಾಗಿ ಚರ್ಚೆಗೆ ಬರುವುದಿಲ್ಲ. ಅವರು ಬದುಕನ್ನು ಮಾನವಕೇಂದ್ರಿತ ನೆಲೆಯಲ್ಲಿ ಅರ್ಥೈಸಿದವರು ಮತ್ತು ಬದುಕಿದವರು.

ಇವರನ್ನು ಸಮನ್ವಯ ಕವಿಗಳೆಂದು ಕರೆಯುವುದು ಒಂದು ವಾಡಿಕೆಯಾಗಿದೆ. ಆದರೆ ಇದು ಸರಿಯಾದ ಗ್ರಹಿಕೆ ಅಲ್ಲ. ಶಿವರುದ್ರಪ್ಪನವರು ಯಾವುದೇ ಒಂದು ಸಾಹಿತ್ಯಪಂಥಕ್ಕೆ ಬದ್ಧರಾದವರಲ್ಲ. ನವೋದಯ, ನವ್ಯ, ನವ್ಯೋತ್ತರ ಸಾಹಿತ್ಯ ಪಂಥಗಳ ಸಂವೇದನೆಗಳನ್ನು ತಮ್ಮ ಕಾವ್ಯದಲ್ಲಿ ಸಮರ್ಥವಾಗಿ ತಂದವರು; ಆ ಮೂಲಕ ಸಮಕಾಲೀನವಾಗುತ್ತ ಬೆಳೆಯುತ್ತ ಹೋದವರು; ಸಮಕಾಲೀನ ಸಾಹಿತ್ಯ ಪಂಥಗಳ ಮೇಲೆ ತಮ್ಮ ಪ್ರಭಾವದ ಛಾಪನ್ನು ಒತ್ತಿದವರು. ಹಾಗಾಗಿ ಶಿವರುದ್ರಪ್ಪನವರ ಕಾವ್ಯದ ಅಧ್ಯಯನವೆಂದರೆ ಆಧುನಿಕ ಕನ್ನಡ ಕಾವ್ಯದ ಎಲ್ಲ ಪಂಥಗಳ ವಿವಿಧ ಸಂವೇದನೆ ಮತ್ತು ಗ್ರಹಿಕೆಯ ಅಧ್ಯಯನವೆಂದು ಪರಿಭಾವಿಸಬೇಕಾಗುತ್ತದೆ.

### ಜಿಎಸ್‌ಎಸ್ ಕಾವ್ಯದಲ್ಲಿ ನಿಸರ್ಗ ದರ್ಶನ

ನಿಸರ್ಗದ ಕೂಸಾದ ಮಾನವ ನಿಸರ್ಗ ಸೌಂದರ್ಯವನ್ನು ಸವಿಯುತ್ತಲೇ ಬೆಳೆದವನು. ಮಾನವ ಬದುಕಿಗೆ ನಿಸರ್ಗ ಒಂದು ಬಗೆಯಲ್ಲಿ ಸಂಜೀವಿನಿ ಇದ್ದ ಹಾಗೆ. ನಿಸರ್ಗದ ನೂರಾರು ವಸ್ತು, ದೃಶ್ಯಗಳು ಮಾನವನ ಹೃದಯವನ್ನು ಅರಳಿಸಿ ಅವನ ಮನಸ್ಸಿಗೆ ಉಲ್ಲಾಸವನ್ನು ನೀಡುತ್ತವೆ; ಬಾಡಿದ ಬದುಕಿಗೆ ಉತ್ಸಾಹದ ಮೆರಗನ್ನು ನೀಡುತ್ತವೆ. ಆದರೆ ಇಂದಿನ ಅತೀ ನಾಗರಿಕತೆಯ ಜಾಗತೀಕರಣದ ಸಂದರ್ಭದಲ್ಲಿ ಮಾನವ ತನ್ನ ಸ್ವಾರ್ಥಸಾಧನೆಗಾಗಿ ಪ್ರಕೃತಿಯನ್ನು ಇನ್ನಿಲ್ಲದಂತೆ ನಾಶಮಾಡುತ್ತಿದ್ದಾನೆ; ಧ್ವಂಸಮಾಡುತ್ತಿದ್ದಾನೆ. ಮಾನವನ ದುರಾಸೆಯಿಂದಾಗಿ ಕಾಡು ನಾಶವಾಗಿ ಮರುಭೂಮಿಗಳು ಸೃಷ್ಟಿಯಾಗತೊಡಗಿವೆ. ಹಾಗಾಗಿ ಇಂದು ಪ್ರಕೃತಿಯ, ಕಾಡಿನ ಉಳಿವು ಅತಿ ಮುಖ್ಯವಾದ ಸಂಗತಿಯಾಗಿದೆ. ಕಾಡಿನ ಉಳಿವು ಮತ್ತು ಏಳ್ಗೆಯಲ್ಲಿ ನಾಡಿನ ಉಳಿವು ಮತ್ತು ಏಳ್ಗೆ ಅಡಗಿದೆ. ಇದರ ಮಹತ್ವ ಅರಿತಿದ್ದ ಬೇಂದ್ರೆ, ಕುವೆಂಪು, ಪುತಿನ ಮುಂತಾದ ನಮ್ಮ ಕನ್ನಡದ ನವೋದಯ ಕವಿಗಳು ಪ್ರಕೃತಿಗೆ ತಮ್ಮ ಕಾವ್ಯದಲ್ಲಿ ಮಹತ್ವದ ಸ್ಥಾನ ನೀಡಿದರು. ಹಾಗಾಗಿಯೇ ಇವರನ್ನು ಪ್ರಕೃತಿಯ ಆರಾಧಕರೆಂದು ನವ್ಯ ಸಾಹಿತಿಗಳು ಕರೆದರು ಮತ್ತು ಈ ಕಾರಣಕ್ಕಾಗಿಯೇ ಇವರಿಗೆ ಬದುಕಿನ ಕಟುವಾಸ್ತವದ ಅರಿವು ಅಷ್ಟಾಗಿ ಇರಲಿಲ್ಲವೆಂಬ ಟೀಕೆಯನ್ನು ಮಾಡಿದರು. ಆದರೆ ನವ್ಯರ ಇಂಥ ಟೀಕೆಗಳಿಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲವೆಂಬ ಸತ್ಯ ಅರಿವಾಗಲು

ಬಹಳ ಕಾಲ ಬೇಕಾಗಲಿಲ್ಲ. ನವ್ಯರದು ಅತೀ ವಾಸ್ತವತೆಯ, ವೈಯಕ್ತಿಕ ನೆಲೆಯ, ವಿದೇಶಿ ಮೂಲದ ಕಡತಂದ ಸಂವೇದನೆ ಎಂಬುದನ್ನು ನಮ್ಮ ಲೇಖಕರು ಬೇಗನೇ ಅರ್ಥಮಾಡಿಕೊಂಡರು.

ನವೋದಯ ಕಾವ್ಯದ ಅದರಲ್ಲೂ ಕುವೆಂಪು ಕಾವ್ಯದ ಪ್ರಭಾವವನ್ನು ಆರಂಭದಲ್ಲಿ ಸ್ವಲ್ಪ ಹೆಚ್ಚಿನ ಮಟ್ಟದಲ್ಲೆ ಹೊಂದಿದ್ದ ಶಿವರುದ್ರಪ್ಪನವರು ನಂತರದ ದಿನಗಳಲ್ಲಿ ಅದರಿಂದ ಬಿಡಿಸಿಕೊಂಡು ಸ್ವತಂತ್ರ ಆಲೋಚನೆ, ಸಂವೇದನೆಗಳ ನೆಲೆಯಲ್ಲಿ ಕಾವ್ಯ ಕೃಷಿಗೆ ತೊಡಗಿದ ಒಬ್ಬ ಚಿಂತನಶೀಲ ಕವಿ. ಇವರ 'ಸಾಮಗಾನ' 'ಚೆಲುವು-ಒಲವು' ಮೊದಲಾದ ಆರಂಭಿಕ ಕವನ ಸಂಕಲನಗಳಲ್ಲಿ ನಿಸರ್ಗ ಪ್ರೀತಿಯ ಕವನಗಳು ಅಧಿಕವಾಗಿರುವುದನ್ನು ಕಾಣುತ್ತೇವೆ.

ನಿಸರ್ಗದ ನೂರಾರು ವಸ್ತು, ದೃಶ್ಯಗಳು ಇವರ ಕಾವ್ಯದ ವಸ್ತುವಾದರೂ ಇವರು ಕೇವಲ ಸಾಂಪ್ರದಾಯಿಕ ನೆಲೆಯಲ್ಲಿ ಸೌಂದರ್ಯಾನ್ವೇಷಣೆಯ ದೃಷ್ಟಿಯಿಂದ ಮಾತ್ರ ಪ್ರಕೃತಿಯನ್ನು ಕಂಡವರಲ್ಲ. ಬದಲಾಗಿ ತಮ್ಮ ಗ್ರಹಿಕೆಗೆ ಬಂದ ನಿಸರ್ಗದ ವಸ್ತು, ದೃಶ್ಯಗಳನ್ನು ಜಿಜ್ಞಾಸುಮನೋಭಾವದಿಂದ ಪರಿಶೀಲಿಸಿದವರು. ನಿಸರ್ಗ ಸೌಂದರ್ಯದ ಚೈತನ್ಯದ ಹೊಂಬೆಳಕಿನಲ್ಲಿ ಮಾನವನ ಅಂತರಂಗದಲ್ಲಿನ ಅಹಂಕಾರ, ಕೆಡುಕು, ದುರ್ಗುಣಗಳು ನಿರ್ಮೂಲನೆ ಆಗುತ್ತವೆ ಎಂದು ಬಗೆದವರು. ಹಾಗಾಗಿ ಇವರ ನಿಸರ್ಗ ಕವಿತೆಗಳ ಅಧ್ಯಯನ ವಿಶಿಷ್ಟ ಬಗೆಯದು ಎಂದು ಹೇಳಬೇಕಾಗುತ್ತದೆ.

ಪ್ರಕೃತಿ ಪೂಜೆಗೆ ಬನ್ನಿರೆಲ್ಲರು
ಪ್ರಕೃತಿ ಪೂಜೆಗೆ ಬನ್ನಿರಿ
ಕಣ್ಣು ಹೃದಯಗಳೆಂಬ ಎರಡನು
ಮಾತ್ರ ಇಲ್ಲಿಗೆ ತನ್ನಿರಿ
ಸಗ್ಗದೊಲವೀ ಬುವಿಯ ಲೋಕಕೆ
ದಿನವುದಿನವೂ ಇಳಿದಿದೆ (ಪ್ರಕೃತಿ ಪೂಜೆ-ಸಾಮಗಾನ)

ಇಲ್ಲಿ ಕವಿ ಸಮಸ್ತ ಮಾನವಕುಲವನ್ನು ಪ್ರಕೃತಿ ಪೂಜೆಗೆ ಆಹ್ವಾನಿಸುತ್ತಿದ್ದಾರೆ. ಹಾಗೆ ಪ್ರಕೃತಿ ಪೂಜೆಗೆ ಬರುವಾಗ ಕಣ್ಣು ಹೃದಯಗಳನ್ನು ಮಾತ್ರ ತರಬೇಕೆಂದು ಹೇಳುತ್ತಿದ್ದಾರೆ. ಈ ಪ್ರಕೃತಿ ಮತ್ತು ಅದರ ಅಪರಿಮಿತ ಸೌಂದರ್ಯ ಸಗ್ಗದೊಲವಾಗಿ ಪ್ರತಿದಿನವೂ ಈ ಲೋಕಕ್ಕೆ ತಾನೆ ತಾನಾಗಿ ಇಳಿದು ಬರುತ್ತಿರಲು ಮಾನವ ಅದನ್ನು ನೋಡದೆ ಕುರುಡನಂತೆ ಸುಮ್ಮನಿರುವುದು ಉಚಿತವಲ್ಲವೆಂಬ ಆಶಯ ಇಲ್ಲಿದೆ. ಯಾಕೆಂದರೆ ನೊಂದ ಹೃದಯಕ್ಕೆ ಪ್ರಕೃತಿಯ ಸೊಬಗು ಒಂದು ಬಗೆಯ ಸಾಂತ್ವನ ನೀಡುತ್ತದೆ. ಇಂಥ ನಿಸರ್ಗದ ಸೊಬಗನ್ನು ಸವಿಯಲು ಕಣ್ಣು ಹೃದಯಗಳು ಮಾತ್ರ ಸಾಕೆಂದು ಹೇಳುವುದು ಗಮನಿಸತಕ್ಕ ಸಂಗತಿಯಾಗಿದೆ. ಒಂದು ವೇಳೆ ಬುದ್ಧಿಯೂ ಬಂದರೆ ಪ್ರಕೃತಿಯ ಆ ಸೌಂದರ್ಯವನ್ನು ಸವಿಯಲು ಸಾಧ್ಯವಾಗದೆ ಇರಬಹುದೆಂಬ ಅನುಮಾನವೂ ಕವಿಗೆ ಇದ್ದಂತಿದೆ.



ಇರಲಿ ಬಾ ಆ ಜಗದ ಜಂಜಡ
ಬರಿಯ ಮಣ್ಣಿನ ಗಡಿಬಿಡಿ
ಇಲ್ಲಿ ಸುಂದರ ಶಿವನದರ್ಶನ
ಭವ್ಯವಾಗಿದೆ ಈ ಗುಡಿ (ಪ್ರಕೃತಿ ಪೂಜೆ-ಸಾಮಗಾನ)

ಮಾನವಬದುಕನ್ನು ನಿತ್ಯವೂ ಆವರಿಸಿಕೊಂಡು ಅವನನ್ನು ಕಾಡುತ್ತಿರುವ ಸಾಂಸಾರಿಕ ಸಂಕಷ್ಟ ಸಮಸ್ಯೆಗಳು, ಅವನು ನಿಸರ್ಗಸೌಂದರ್ಯವನ್ನು ಸವಿದು ಮನಸ್ಸನ್ನು ಹಗುರ ಮಾಡಿಕೊಳ್ಳಲು ಉಲ್ಲಾಸಗೊಳಿಸಿಕೊಳ್ಳಲು ಅಡೆತಡೆಯನ್ನುಂಟು ಮಾಡುವುದರಿಂದ ಕ್ಷಣಹೊತ್ತು ಅವುಗಳಿಂದ ಬಿಡಿಸಿಕೊಂಡು ಪ್ರಕೃತಿಸೌಂದರ್ಯವನ್ನು ಸವಿಯಲು ಬರಬೇಕೆಂದು ಕರೆಕೊಡುವ ಕವಿ, ಪ್ರಕೃತಿಯೆ ಶಿವಮಂದಿರವೆಂದು ಪ್ರಕೃತಿಸೌಂದರ್ಯವೇ ಶಿವನ ಸುಂದರದರ್ಶನವೆಂದು ತಿಳಿಸಿ ಅದನ್ನು ನೋಡಲು ಮುಂದಾಗಬೇಕೆಂದು ಆಶಿಸುವುದು ಮುಖ್ಯ ಸಂಗತಿಯಾಗುತ್ತದೆ. ಪ್ರಕೃತಿಯ ಸೊಬಗು ಅಮೃತಸೇಚನವಾಗಿ ದಿನದ ಕೊಳೆಯನ್ನು ತೊಳೆಯುತ್ತದೆಂದೂ ಈ ಪ್ರಕೃತಿಮಾತೆಯ ಸ್ತನ್ಯಪಾನದಿಂದ ಮಾನವ ಹೃದಯ ನವಚೇತನ ಪಡೆಯುತ್ತದೆಂದು ಪರಿಭಾವಿಸಿರುವುದು ಅನನ್ಯವಾದುದಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೇನೆಂದರೆ ಕವಿ ನಿಸರ್ಗದಲ್ಲಿ ದೈವವನ್ನು ಕಂಡಿರುವುದು. ನಿಸರ್ಗದಲ್ಲಿ ದೈವವನ್ನು ಕಾಣುವ ಕವಿ, ಗುಡಿ-ಗುಂಡಾರಗಳಲ್ಲಿನ ಸ್ಥಾವರದೈವವನ್ನು ನಿರಾಕರಣೆ ಮಾಡಿರುವ ಅಂಶವೂ ವೇದ್ಯವಾಗುತ್ತದೆ. ಜಡದ ಸ್ಥಾವರದೈವವನ್ನು ನಿರಾಕರಿಸಿ ಚಲನಶೀಲ ಪ್ರಕೃತಿ ಸೊಬಗಿನ ಜಂಗಮದೈವವನ್ನು ಒಪ್ಪಿರುವುದು ಕವಿಯ ಪ್ರಗತಿಪರ ಆಲೋಚನೆಯನ್ನು ತಿಳಿಸುತ್ತದೆ. 'ಹೂಮಳೆ' ಎಂಬ ಕವನದಲ್ಲೂ ಇದೇ ಭಾವ ಇರುವುದನ್ನೂ ಕಾಣಬಹುದು.'ಮಲ್ಲಿಗೆ' ಎಂಬ ಕವನದಲ್ಲಿ:

ನೋಡು ಇದೊ ಇಲ್ಲರಳಿ ನಗುತಿದೆ
ಏಳು ಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರ ಗಿಡದಿಂ
ದೆಂತು ಮೂಡಿತೊ ಬೆಳ್ಳಗೆ (ಮಲ್ಲಿಗೆ-ಚೆಲುವು ಒಲವು)

ಹಚ್ಚಹಸುರಾದ ಮಲ್ಲಿಗೆಬಳ್ಳಿಯಲ್ಲಿ ಅರಳಿ ನಿಂತಿರುವ ಮಲ್ಲಿಗೆಹೂವಿನ ಅನುಪಮ ಸೌಂದರ್ಯವನ್ನು ಕಂಡ ಕವಿಮನ ಆನಂದಾಶ್ಚರ್ಯದಲ್ಲಿ ಮುಳುಗಿಬಿಡುತ್ತದೆ.

ಅರಳಿದ ಮಲ್ಲಿಗೆಹೂವಿನ ಈ ಮಂದಹಾಸ ಸತ್ವಶೀಲನ ಅಂದರೆ ಮಹಾಯೋಗಿ ಯೊಬ್ಬನ ಧ್ಯಾನಮೌನವೆ ಅರಳಿ ನಿಂತಂತೆ, ಒಲವು ತುಂಬಿದ ಮುಗುದೆಯ ಎದೆಯಿಂದ ಬಂದ ನಲ್ನುಡಿಯಂತೆ ಕವಿಹೃದಯದಿಂದ ಮೆಲ್ಲಗೆ ಅರಳಿ ಬರುವ ಸುಂದರ ಕಲ್ಪನೆಯಂತೆ ಕಾಣುತ್ತದೆ, ಕವಿಗೆ. ಇದರ ನವುರಾದ ದಳಗಳು ಹಸುಳೆ ಕಾಣುವ ಕನಸಿನಂತೆ, ಇಂಪಿನ ಕಂಪಿನ ಮಹಾತ್ಮರ ಮನದಂತೆ ಕಾಣುತ್ತದೆ. ಒಟ್ಟಿನಲ್ಲಿ ಅರಳಿದ ಮಲ್ಲಿಗೆಹೂವು ಬಾಳನ್ನು ಹಸನುಗೊಳಿಸುವ ಸೌಂದರ್ಯದ ದಿವ್ಯಶಕ್ತಿಯಾಗಿ ಕವಿಗೆ

ಕಾಣುತ್ತದೆ. ಇಲ್ಲಿ ಬಂದಿರುವ ಎಲ್ಲ ಉಪಮೆಗಳೂ ಕವಿಯ ಭಾವಸೌಂದರ್ಯ ವನ್ನು ಹಿಡಿದಿಡುವಲ್ಲಿ ಸಾರ್ಥಕವಾಗಿವೆ.

'ಪ್ರಕೃತಿ–ಕವಿ' ಎನ್ನುವ ಕವನದಲ್ಲಿ ನಿಸರ್ಗಕ್ಕೂ ಕವಿಗೂ ಇರುವ ಅವಿನಾಭಾವ ಸಂಬಂಧವನ್ನು ತುಂಬ ಮಧುರವಾಗಿ ಕಟ್ಟಿಕೊಡಲಾಗಿದೆ. 'ವ್ಯೋಮಕೇಶನಿಂದ ಗಂಗೆ ಭಗೀರಥನ ಹತ್ತಿರ ಇಳಿದು ಬಂದಹಾಗೆ ಪ್ರಕೃತಿ ಬಂತು ಕವಿಯ ಹತ್ತಿರ' ಎಂದು ಹೇಳುವಲ್ಲಿ ಇದು ವ್ಯಕ್ತವಾಗುತ್ತದೆ. ಪ್ರತಿದಿನವೂ ನಿಸರ್ಗವು ನೂರಾರು ಸುಂದರ ಮತ್ತು ಗಂಭೀರ ದೃಶ್ಯಗಳಲ್ಲಿ, ಹಲವಾರು ದನಿಗಳಲ್ಲಿ ಪ್ರಕಟಗೊಳ್ಳುತ್ತಲೇ ಇರುತ್ತದೆ. ಆದರೆ ಅದನ್ನು ಗಮನಿಸುವ ವ್ಯವಧಾನ ಮತ್ತು ಸೂಕ್ಷ್ಮತೆ ಎಷ್ಟು ಜನಕ್ಕೆ ಇರುತ್ತದೆ! ಆದರೆ ಕವಿಹೃದಯ ಯಾವಾಗಲೂ ಇಂತಹ ಪ್ರಕೃತಿಸೌಂದರ್ಯವನ್ನು ಸವಿಯಲು ಕಾತರವಾಗಿರುತ್ತದೆ. ಪ್ರಕೃತಿ ಬರುವ ರೀತಿಯನ್ನು ಗಮನಿಸಿ:

ಮಿಂಚಿನಲ್ಲಿ ನಗೆಯ ಬೀರಿ
ಗುಡುಗಿನಲ್ಲಿ ದನಿಯ ತೋರಿ
ಮಳೆಯ ನೂಲನೇಣಿಯಿಂದ
ತಿರೆಯ ಎದೆಗೆ ಇಳಿಯಿತು
ನೆಲದೊಳಿದ ಮುಗಿಲ ಮನಸು
ಹಸುರಿನಲ್ಲಿ ಹೊಮ್ಮಿತು
ಅದರ ಎದೆಯ ಹೊನ್ನ ಕನಸು
ಚಿಗುರು ಹೂಗಳಾಯಿತು
ಹಣ್ಣು ಹಂಪಲಾಯಿತು
ಜಗಕ್ಕೆ ಅನ್ನವಾಯಿತು (ಪ್ರಕೃತಿ–ಕವಿ–ಚೆಲುವು–ಒಲವು)

ಇಲ್ಲಿ ಮಿಂಚಿನಲ್ಲಿ ನಗೆಯ ಬೀರುವ, ಗುಡುಗಿನಲ್ಲಿ ದನಿಯ ತೋರುವ, ಮಳೆಯ ನೂಲ ಏಣಿಯಿಂದ ಭೂಮಿ ಎದೆಗೆ ಇಳಿಯುವ ಪ್ರಕೃತಿಸೌಂದರ್ಯದ ಹಲವು ಮಜಲುಗಳನ್ನು ತಿಳಿಸುವ ಕವಿ, ಮಳೆ ಇಳೆಯ ಎದೆಗೆ ಇಳಿದಾದ ಮೇಲೆ ಇಳೆ ಹಸುರಿನಿಂದ ಕಂಗೊಳಿಸಿ ಚಿಗುರು, ಹೂವು, ಹಣ್ಣು–ಹಂಪಲುಗಳು ಸೃಷ್ಟಿಗೊಂಡು ಜಗಕ್ಕೆ ಅನ್ನವಾಗುವ ಪರಿಯನ್ನು ಹೇಳಿರುವುದು ಕವಿಯ ನಿಸರ್ಗ ಸೌಂದರ್ಯಾನುಭೂತಿಯ ಜೊತೆಜೊತೆಗೇ ವಾಸ್ತವಪ್ರಜ್ಞೆಯ ಅರಿವನ್ನೂ ಕಾಣುತ್ತೇವೆ. ಕವಿ ಪ್ರಕೃತಿಸೌಂದರ್ಯದಲ್ಲಿ ಕಳೆದುಹೋಗದೆ ವಾಸ್ತವದ ಕಡೆಗೆ ದೃಷ್ಟಿನೆಟ್ಟಿರುವುದೂ ಮುಖ್ಯವಾಗುತ್ತದೆ. ಯಾಕೆಂದರೆ ಪ್ರಕೃತಿಯನ್ನು, ಪರಿಸರವನ್ನು ಕಾಪಾಡಿಕೊಳ್ಳುವುದರಲ್ಲಿ ಸಂರಕ್ಷಿಸಿಕೊಳ್ಳುವುದರಲ್ಲಿ ಮಾನವನ ಭವಿಷ್ಯ ಬದುಕಿನ ಹಿತವೂ ಅಡಗಿದೆ ಎಂಬ ಅರಿವು ಕವಿಗಿರುವುದು ಗಮನಾರ್ಹ ಸಂಗತಿಯಾಗುತ್ತದೆ.

ತನ್ನ ಹಸಿರು, ಹೂವುಗಳ ಅನಂತ ಸೌಂದರ್ಯವನ್ನು ಜಗಕೆ ನೀಡುವ, ಹಕ್ಕಿಗಳ ಮಧುರ ಕಂಠದಲ್ಲಿ ವಿವಿಧ ಮಧುರ ರಾಗವಾಗಿ ಹೊಮ್ಮುವ ಪ್ರಕೃತಿ, ತನ್ನ ಸೌಂದರ್ಯ ಮತ್ತು ಪ್ರಯೋಜನವನ್ನು ನುಡಿಯಬೆಡಗಿನಲ್ಲಿ ಸೆರೆಹಿಡಿಯುವ ವ್ಯಕ್ತಿಗಾಗಿ



ತಪವನ್ನು ಆಚರಿಸಲು, ಬಡವನೂ ಕಣ್ಣೀರಿನಲ್ಲಿ ಕೈತೊಳೆಯುವವನೂ ಆದ ಕವಿ, ಆ ಕೆಲಸವನ್ನು ಸಾರ್ಥಕವಾಗಿ ಮಾಡಿದನೆಂದೂ ಇದು ಪ್ರಕೃತಿ ಮತ್ತು ಕವಿಗಳಿಬ್ಬರ ಬಿಡುಗಡೆಯಾಗಿದೆ ಎಂದೂ ಶಿವರುದ್ರಪ್ಪನವರು ನುಡಿಯುವುದು ಅವರ ಧನ್ಯತಾಭಾವ ವನ್ನು ಪ್ರಕಟಪಡಿಸುತ್ತದೆ ಮತ್ತು ಅವರ ಕಾವ್ಯದ ಸಾರ್ಥಕ್ಯವನ್ನು ಸೂಚಿಸುತ್ತದೆ.

ಮಾಗಿಯ ಮಂಜಿನ ಲೀಲೆಯನ್ನು 'ಮಂಜಿನ ಲೀಲೆ' ಎಂಬ ಕವನ ತುಂಬ ಸಾರ್ಥಕವಾಗಿ ಕಟ್ಟಿಕೊಟ್ಟಿದೆ. ಈ ಮಂಜು, ಭೂಲೋಕದ ಜಡತೆಯನ್ನು ತೊಳೆಯುವ, ಭೂವ್ಯೋಮರ ಅಂತರವನ್ನು ಅಳಿಸುವ ಸುರಲೋಕದ ಅಮೃತ ರಸವಾಗಿ ಕಂಡಿದೆ; ಕವಿಯ ಬಗೆಗಣ್ಣಿಗೆ. ಸೂರ್ಯೋದಯವನ್ನು ಕುರಿತು ಹಲವಾರು ಉತ್ತಮ ಕವನಗಳನ್ನು ಕವಿ ಶಿವರುದ್ರಪ್ಪನವರು ರಚಿಸಿದ್ದಾರೆ. ಅವುಗಳಲ್ಲಿ 'ಉದಯರಾಗ' ಮತ್ತು 'ನವೋದಯ' ಎಂಬವು ವಿಶಿಷ್ಟವಾದ ರಚನೆಗಳೆನ್ನಬೇಕು. ಸೂರ್ಯೋದಯ ಕವಿಯ ದೃಷ್ಟಿಯಲ್ಲಿ ಸೂರ್ಯ ಪೂರ್ವದಿಗಂತದಲ್ಲಿ ಹುಟ್ಟುವ ಸುಂದರ ಸನ್ನಿವೇಶ ಮಾತ್ರವಲ್ಲ. ಮನುಷ್ಯ ತನ್ನ ಹಿಂದಿನ ದಿನದ, ಹಳೆಬದುಕಿನ ಆಲಸ್ಯ, ಕಹಿ, ಕೊಳೆಯನ್ನು ಕಳೆದುಕೊಂಡು ನವಚೈತನ್ಯದಿಂದ ಸಂಭ್ರಮದಿಂದ ನವಜೀವನಕ್ಕೆ ಸಜ್ಜಾಗುವ ಒಂದು ಅರ್ಥಪೂರ್ಣ ಸುಂದರ ಸಂದರ್ಭವೆಂದು, 'ಉದಯರಾಗ' ಕವನದ ಮೂಲಕ ಧ್ವನಿಸುತ್ತಿದ್ದಾರೆ. 'ನವೋದಯ' ಕವನದಲ್ಲೂ ಇದೇ ಭಾವ ಇರುವುದನ್ನು ಕಾಣಬಹುದಾಗಿದೆ. 'ಒಂದು ಬೆಳಗು' ಕವಿತೆ ಕೂಡ ವಿಶಿಷ್ಟ ಸಂವೇದನೆ ಮತ್ತು ರಚನಾವಿನ್ಯಾಸದಲ್ಲಿ ಅರಳಿದ ಒಂದು ಉತ್ತಮ ಕವನವಾಗಿದೆ ಎಂಬುದನ್ನು ಇಲ್ಲಿಯೇ ನೆನೆಯಬೇಕಾಗಿದೆ. ಬೆಳದಿಂಗಳ ಲೀಲೆಯನ್ನು 'ಹಾಲು ಹೊಳೆ' ಎಂಬ ಕವನ ಸಶಕ್ತವಾಗಿ ಕಟ್ಟಿಕೊಟ್ಟಿದೆ. ಊರು ಕೇರಿಗಳೆಲ್ಲ ಹಗಲಿನ ದಣಿವನ್ನು ನಿವಾರಿಸಿಕೊಳ್ಳಲು ರಾತ್ರಿ ಮಲಗಿ ನಿದ್ರಿಸುತ್ತಿರಲು ಬೆಳದಿಂಗಳು ಮಾತ್ರ ತನ್ನ ಬೆಳ್ಳನೆಯ ಹಾಲು ಹೊಳೆಯಿಂದ ಜಗವನ್ನು ಸ್ನಾನಮಾಡಿಸುತ್ತಿದೆ. ಆದರೆ ಜಗದ ಜನರಿಗೆ ಇದರ ಅರಿವೇ ಇಲ್ಲ. ಕವಿ ಮಾತ್ರ ಮಧ್ಯರಾತ್ರಿಯಂದು ಜಾಗೃತನಾಗಿ ಈ ಅನುಪಮವಾದ ಅಮೃತಸ್ವರೂಪಿಯಾದ ಬೆಳದಿಂಗಳ ಹೊಳೆಯಲ್ಲಿ ಮಿಂದು ತನ್ನ ಪಾಪವನ್ನು ಕಳೆದುಕೊಂಡು ಪಾವನ ನಾಗುತ್ತಿದ್ದಾನೆ. ಈ ಬೆಳದಿಂಗಳು:

ತಾರೆಯೂರ ನಾಕದಿಂದ
ಮರ್ತ್ಯದೂರ ಮನೆಯ ಮೇಲೆ
ಅಮೃತ ಭವ್ಯಹರಕೆಯಂತೆ
ಹರಿದು ಬಂದಿದೆ
ವ್ಯೋಮ ತಪೋರೂಪದಂತೆ
ಹರಹಿ ನಿಂದಿದೆ. (ಹಾಲುಹೊಳೆ–ಸಾಮಗಾನ)

ಎಂದು ಹೇಳುವಲ್ಲಿ ಬೆಳದಿಂಗಳಿನ ಮಹತ್ವವು ಧ್ವನಿತವಾಗಿದೆ.

ಜೊನ್ನದಲ್ಲಿ ಮಿಂದ ನನ್ನ
ಪಾಪವೆಲ್ಲ ಹರಿದ ಹಾಗೆ

ನನ್ನ ನೆರಳು ಕಾಲಬದಿಗೆ
ಹೊರಳಿ ಹೋಗಿದೆ
ನಷ್ಟಪಾಪ, ನಷ್ಟರೂಪ
ಜೊನ್ನದಲ್ಲಿ ಜೊನ್ನರೂಪ
ನಿತ್ಯಶಾಂತಿ ಸ್ವಸ್ವರೂಪ
ಎಂಬ ಬೋಧೆಯುದಯವಾಗಿ
ಹೃದಯವರಳಿದೆ (ಹಾಲುಹೊಳೆ–ಸಾಮಗಾನ)

ಪೌರ್ಣಿಮೆಯ ಪ್ರಶಾಂತವಾದ ಬೆಳದಿಂಗಳಿನ ಹಾಲಹೊಳೆಯಲ್ಲಿ ಮಿಂದ ಕವಿಹೃದಯ ಬೆಳದಿಂಗಳಿನಲ್ಲಿ ಬೆಳದಿಂಗಳೇ ಆಗಿ ತನ್ನ ಬಾಹ್ಯರೂಪ, ಪಾಪಗಳು ಕರಗಿಹೋಗಿ ನಿತ್ಯಶಾಂತಿಯ ಸ್ವಸ್ವರೂಪದ ಬೋಧೆಯಾಯಿತೆಂದು ಹೇಳುವುದು ಮಹತ್ವದ ಸಂಗತಿಯಾಗುತ್ತದೆ. ಬೆಳದಿಂಗಳಿನ ಪ್ರಶಾಂತ ವಾತಾವರಣದಲ್ಲಿ ಮನುಷ್ಯನಿಗೆ ತನ್ನ ಸ್ವಸ್ವರೂಪದ ಬೋಧೆಯಾಗದಿದ್ದರೆ ಇನ್ನೆಲ್ಲಿ ಆಗಲು ಸಾಧ್ಯ! ಮಾಗಿದ ಮಾನವ ಹೃದಯಕ್ಕೆ ಬೆಳದಿಂಗಳಿನ ಆ ಹಾಲುಹೊಳೆಯ ದಿವ್ಯ ಪ್ರಶಾಂತ ವಾತಾವರಣ ಅರಿವಿನ ಉದಯಕ್ಕೆ ನಾಂದಿ ಹಾಡದಿದ್ದರೆ ಪ್ರಯೋಜನವೇನು? ಬುದ್ಧನಿಗೆ ಜ್ಞಾನೋದಯ ವಾದದ್ದು ಪೌರ್ಣಿಮೆಯ ಬೆಳದಿಂಗಳಿನ ಪ್ರಶಾಂತ ವಾತಾವರಣದಲ್ಲಲ್ಲವೇ! ಹೀಗೆ ಜಿಎಸ್‌ಎಸ್ ಅವರಿಗೆ ಬೆಳದಿಂಗಳು ಕೇವಲ ಸೊಬಗಿನ ಸಂದರ್ಭವಾಗಿ ಕಾಣದೆ ಅರಿವಿನ ಸೆಲೆಯಾಗಿ ಕಂಡಿರುವುದು ಮುಖ್ಯ ಸಂಗತಿಯಾಗುತ್ತದೆ.

'ತಂತು ಕೃತಿ' ಕವನ ತುಂಬ ಮುಖ್ಯವಾದ ಕವಿತೆ ಎಂಬುದು ನನ್ನ ಭಾವನೆ. ಕವನದ ಪೂರ್ವಾರ್ಧದಲ್ಲಿ ಸುಂದರ ಪ್ರಾತಃಕಾಲದ ಚೆಲುವಿನ ವರ್ಣನೆಯಿದ್ದರೆ ಉತ್ತರಾರ್ಧದಲ್ಲಿ ಆ ಸೌಂದರ್ಯವನ್ನು, ಸೌಂದರ್ಯಾನುಭೂತಿಯನ್ನು ಛಿದ್ರಗೊಳಿಸುವ ಬದುಕಿನ ಕಟುವಾಸ್ತವದ ಚಿತ್ರಣವಿದೆ. ಇಂಥ ಕವನಗಳು ಕನ್ನಡ ಸಾಹಿತ್ಯದಲ್ಲೇ ಅಪರೂಪವೆನ್ನಬಹುದು.

ಮುಂಬೆಳಗಿನ ಹೊಂಬಿಸಿಲಿನ ಮಳೆ ಹೊಯ್ದಿತ್ತು
ಇಳೆಯೆಲ್ಲವು ಆ ಸ್ವರ್ಣಸಲಿಲದಲಿ ಮಿಂದಿತ್ತು
ಭೂಮಿಯೆ ಸ್ವರ್ಗದ ತೆರನಿತ್ತು
ಹೂವಿನ ಎದೆಗಳ ಮಧುಮಕರಂದಕೆ
ದುಂಬಿಗಳೊಲವಿನ ಸಂಗೀತ
ಬೆಳಗಿನ ಲೋಕದ ನಿರ್ಭರಮೌನಕೆ
ಓಂಕಾರದ ಝೇಂಕಾರವ ತುಂಬಿತ್ತು
ಗಗನ ಸೀಮೆಯಲಿ ಹಕ್ಕಿಗಳಿಂಚರ
ನಾನಾ ಸುಮಧುರ ಸ್ವರದಲ್ಲಿ
ಚಿಮ್ಮಿರೆ, ಪ್ರಭಾತ ವಿಹಾರ ಸಮೀರ
ಹಾಡನು ತೇಲಿಸಿ ಒಯ್ದಿತ್ತು



ಸ್ವರ ಸೋಪಾನವ ಕಟ್ಟಿತ್ತು (ತಂತು ಕೃತಿ–ಸಾಮಗಾನ)

ಹೀಗೆ ಕವಿ ಪ್ರಾತಃಕಾಲದ ಸೊಬಗನ್ನು ತನ್ಮಯವಾಗಿ ಸವಿಯುವಲ್ಲಿ ತಕ್ಷಣ ಇನ್ನೊಂದು ಅದ್ಭುತವನ್ನು ಕಂಡು ಬೆರಗಾಗುತ್ತಾರೆ. ಪಕ್ಕದ ಹೊದರಿನ ಮೇಲೆ ಜೇಡವೊಂದು ಬೇಲೂರಿನ ಶಿಲ್ಪಕಲೆಯನ್ನೂ ಮೀರಿಸುವ ಸೂಕ್ಷ್ಮಾತಿಸೂಕ್ಷ್ಮವಾದ ಚಕ್ರಾಕಾರದ ಬಲೆಯನ್ನು ನಾಜೂಕಾಗಿ ರಚಿಸಿರುವುದನ್ನು ನೋಡಿ ಕವಿಮನ ವಿಸ್ಮಯಕ್ಕೆ ಒಳಗಾಗುತ್ತದೆ. ಆ ತಂತುಬಲೆಯಲ್ಲಿ ಅಲ್ಲಲ್ಲಿ ಬಿದ್ದ ಹಿಮಬಿಂದುಗಳು ಪ್ರಾತಃಕಾಲದ ಸೂರ್ಯಕಿರಣಗಳ ಸ್ಪರ್ಶದಿಂದಾಗಿ ಇನ್ನೂ ಅಧಿಕ ಸೊಬಗು ಅಲ್ಲಿ ಸೃಷ್ಟಿಯಾಗಿ ಕವಿಮನ ಬೆರಗಿನಲ್ಲಿ ಆ ಅನುಪಮ ಸೌಂದರ್ಯವನ್ನು ಸವಿಯುತ್ತಿರಬೇಕಾದರೆ ಬಲೆಯ ಮಧ್ಯೆ ಅದರ ಯಜಮಾನ ಜೇಡ, ಠೀವಿಯಿಂದ ಕುಳಿತಿರುವುದನ್ನು ಕಂಡು ಕವಿ ಚಕಿತಗೊಳ್ಳುತ್ತಾರೆ. ಅಂಥ ಅದ್ವಿತೀಯವಾದ ಬಲೆಯನ್ನು ಹೆಣದದ್ದಾಕ್ಕಾಗಿ ಜೇಡನನ್ನು ಕವಿ ಪ್ರಶಂಸಿಸುತ್ತಿರಬೇಕಾದರೆ ಆ ವಿಕಟಾಕಾರದ ಜೇಡ, ಬಲೆಯ ಮೂಲೆಯಲ್ಲಿ ಬಿದ್ದು ಒದ್ದಾಡುತ್ತಿದ್ದ ಹುಳುವೊಂದನ್ನು ನೋಡಿ ಮುಂದಕ್ಕೆ ಸಾಗಿ ನುಂಗಿನೊಣೆದುಬಿಡುತ್ತದೆ. ಆಗ ಕವಿ:

ಮೈ ನಡುಗಿಡು; ಸಿಡಿದೊಡೆಯಿತು ಸೌಂದರ್ಯ
ಸಾವು ಬದುಕಿನ ಹೋರಾಟದ ಕ್ರೌರ್ಯ (ತಂತು ಕೃತಿ–ಸಾಮಗಾನ)

ಎಂದು ಪ್ರತಿಕ್ರಿಯಿಸುತ್ತಾರೆ. ಹೀಗೆ ಬೆಳಗಿನ ಜಾವದ ಪ್ರಕೃತಿ ಸೌಂದರ್ಯ ಮತ್ತು ಜೇಡನ ಬಲೆಯ ಕಲಾತ್ಮಕತೆ ಮತ್ತದರ ಚೆಲುವನ್ನು ಸವಿಯುತ್ತಿದ್ದ ಕವಿಗೆ ಹಠಾತ್ತಾಗಿ ಜೇಡನ ಬೇಟೆಯನ್ನು ಕಂಡಾಗ ಬದುಕಿನ ಕಟುವಾಸ್ತವದ ಅರಿವು ಆಗುತ್ತದೆ. ಜೇಡ ಕಲಾತ್ಮಕವಾದ ಸುಂದರವಾದ ಬಲೆಯನ್ನು ಹೆಣೆದಿರುವುದು ಮನುಷ್ಯರು ಬಂದು ನೋಡಿ ಸಂತೋಷಪಡಲಿ, ತನ್ನ ಶಿಲ್ಪಜ್ಞಾನವನ್ನು ಕಂಡು ಹೊಗಳಲಿ ಎಂದಲ್ಲ. ಅನ್ಯ ಕೀಟಗಳು, ಹುಳುಗಳು ಬಂದು ಆ ಬಲೆಯಲ್ಲಿ ಬಿದ್ದು ತನಗೆ ಆಹಾರವಾಗಲೆಂದು. ಹೀಗೆ ಸೌಂದರ್ಯದಲ್ಲಿ ಸಾವಿನ ವಾಸನೆ ಇದೆ ಎಂಬ ಸತ್ಯವನ್ನು ಜಿಎಸ್‌ಎಸ್ ಗ್ರಹಿಸಿ ನಿರೂಪಿಸಿರುವುದು ಅವರ ಕಾವ್ಯ ಬದುಕಿನ ಅನ್ವೇಷಣೆಯ ಬಗೆಯನ್ನು ತಿಳಿಸುತ್ತದೆ. ಈ ರೀತಿ ಎರಡು ವಿಭಿನ್ನ ಅನುಭವಗಳನ್ನು ಮುಖಾಮುಖಿ ಯಾಗಿಸಿ ಬದುಕಿನ ಶೋಧನೆಗೆ ತೊಡಗುವ ಶಿವರುದ್ರಪ್ಪನವರ ಕಾವ್ಯಗ್ರಹಿಕೆ ವಿಶಿಷ್ಟವಾದುದೆಂದು ಹೇಳಬೇಕಾಗುತ್ತದೆ.

'ಕಾಮನ ಬಿಲ್ಲು' ಎಂಬ ಕವಿತೆಯಲ್ಲಿ ನಿಸರ್ಗದ ಸುಂದರ ದೃಶ್ಯಗಳಲ್ಲಿ ಒಂದಾದ ಕಾಮನ ಬಿಲ್ಲಿನ ಬೆಡಗನ್ನು ತುಂಬ ಸೊಗಸಾಗಿ ಚಿತ್ರಿಸಲಾಗಿದೆ. ಏಳು ಬಣ್ಣಗಳ ಕಾಮನಬಿಲ್ಲು ಆಕಾಶವೆಂಬ ಹೆಣ್ಣಿನ ಕೊರಳಿನ ಸುಂದರ ಹಾರದಂತೆ, ವಿಶ್ವಮಯೂರ ತನ್ನ ಗರಿಬಿಚ್ಚಿ ಕುಣಿದಂತೆ, ಕಾಮನ ಕೈಯಲ್ಲಿನ ಬಿಲ್ಲಿನಂತೆ ಕಾಣಿಸುತ್ತದೆ, ಕವಿಯ ಕಣ್ಣಿಗೆ. ಆಕಾಶದಲ್ಲಿ ಮೋಡಗಳು ಹಿಂಡುಹಿಂಡಾಗಿ ಕಾಣಿಸಿಕೊಂಡು ಮಿಂಚು–

ಗುಡುಗುಗಳನ್ನು ಮಾತ್ರ ಕರುಣಿಸಿ ಮಳೆಸುರಿಸದೆ ಹಾಗೆಯೇ ಮುಂದುಹೋಗುವ ಮೋಡಗಳ ಆಟ ಮತ್ತು ಅದರಿಂದ ತೊಂದರೆಗೆ ಈಡಾದ ಧರೆ, ಜನ, ಜಾನುವಾರುಗಳ ಸ್ಥಿತಿಯನ್ನು 'ಮಳೆಯ ಮೋಡಕ್ಕೆ' ಎಂಬ ಕವನದಲ್ಲಿ ಕಟ್ಟಿಕೊಟ್ಟರೆ, ಅದೇ ಮಳೆ ಕಾಡಿಸಿ ಬೇಡಿಸಿ ತಡವಾಗಿಯಾದರೂ ಬಂದು ಭೂಮಿಯನ್ನು ತಂಪಾಗಿಸುವ ಅದರ ಪರೋಪಕಾರ ಗುಣವನ್ನು 'ಮಳೆ' ಎಂಬ ಕವಿತೆಯಲ್ಲಿ ಸಶಕ್ತವಾಗಿ ನಿರೂಪಿಸಲಾಗಿದೆ.

ನೆಲಮುಗಿಲುಗಳ ಸಮ್ಮಿಲನ, ಸಂಬಂಧದಿಂದ ಈ ಬುವಿಯ ಬದುಕು ಸುಂದರವಾಗಿ ಅರಳುವ ಬಗೆಯನ್ನು 'ಪ್ರಣಯ' ಎಂಬ ಕವನ ತುಂಬ ಮಾರ್ಮಿಕವಾಗಿ ತಿಳಿಸಿಕೊಡುತ್ತದೆ. ಆಕಾಶದಲ್ಲಿನ ನಕ್ಷತ್ರಲೋಕವನ್ನು ಗಮನಿಸುತ್ತ, ಧ್ಯಾನಿಸುತ್ತ ಬಯಲಾಗಬೇಕಾದ, ನಿರ್ವಿಕಲ್ಪವಾಗಬೇಕಾದ ಅಗತ್ಯವನ್ನು ಧ್ವನಿಸುತ್ತದೆ 'ನಕ್ಷತ್ರಲೋಕ' ಎಂಬ ಕವಿತೆ.

ಧೂಳುತುಂಬಿದ ರಸ್ತೆಯಲ್ಲಿ ಬಿದ್ದಿರುವ ಬಿಳಿ ಹೂವೊಂದನ್ನು ಮತ್ತದರ ಚೆಲುವು ಒಲವನ್ನು ಬಣ್ಣಿಸುವ ಕವಿತೆ 'ಹೂವು' ಎಂಬುದು.

ಇರುಳತಾರೆಯ ಕಿಡಿಯು
ಇಳೆಗುರುಳಿ ಬಿದ್ದಂತೆ
ಶ್ರಾವಣದ ಬೆಳ್ಮುಗಿಲ
ಕಿರಿದಾದ ತುಣಕಂತೆ
ಶೈಶವದ ಮುಗ್ಧತೆಯೆ
ಹೂವಾಗಿ ಇಳಿದಂತೆ
ನಗುತಲಿದೆ ಹೂವು
ಇನಿತಿಲ್ಲ ನೋವು (ಹೂವು–ಸಾಮಗಾನ)

ಎಂದು ಮುಂತಾಗಿ ಕವಿ ಈ ಹೂವನ್ನು ಬಣ್ಣಿಸಿರುವುದು ಔಚಿತ್ಯಪೂರ್ಣವಾಗಿದೆ. ಆದರೆ ಹೂವಿನ ಈ ಸೌಂದರ್ಯ, ಸುವಾಸನೆ, ಮುಗ್ಧತೆ ಬಹಳ ಹೊತ್ತು ಇರಲಾರದೆಂಬ ಅರಿವೂ ಕವಿಗಿದೆ. ಯಾಕಂದರೆ ದಾರಿಹೋಕರು ರಸ್ತೆಯಲ್ಲಿ ಬಿದ್ದಿರುವ ಈ ಚೆಲುವಾದ ಹೂವನ್ನು ತಮ್ಮ ಪಾದಗಳಿಂದ ತುಳಿದು ಅದರ ಬೆಡಗು–ಸೌಂದರ್ಯವನ್ನು, ಅಸ್ತಿತ್ವವನ್ನು ನಾಶಮಾಡುತ್ತಾರೆಂಬ ಭಯ ಆತಂಕಗಳು ಕವಿಯನ್ನು ಆವರಿಸಿವೆ. ಆದರೆ ಸಾವಿಗೆ ಅಂಜದೆ ತನ್ನ ಸೌಂದರ್ಯವನ್ನು ಜಗ ಸವಿಯಲೆಂದು ಎಳೆನಗೆಯನ್ನು ಬೀರುತ್ತಿರುವ ಹೂವಿನ ಸ್ಥಿತಪ್ರಜ್ಞತ್ವವನ್ನು ಕಂಡು ಕವಿ ಬೆರಗುಗೊಳ್ಳುತ್ತಾರೆ. ಹೀಗೆ ಈ ಕವನ ಒಂದು ಅನಾಥ ಹೂವಿನ ಸ್ಥಿತಿಯನ್ನು ತಿಳಿಸಿಕೊಡುವುದರ ಜೊತೆಗೆ ಅಲಕ್ಷ್ಯಕ್ಕೆ ಒಳಗಾದ ದೀನದಲಿತರ ಸ್ಥಿತಿಯನ್ನೂ ತಿಳಿಸುತ್ತದೆಂದು ಪರಿಭಾವಿಸಲು ಸಾಧ್ಯವಿದೆ ಎಂಬ ಅಂಶವನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುವುದು ಗಮನಾರ್ಹ ಸಂಗತಿಯಾಗುತ್ತದೆ.

ದಿನದ ಇಪ್ಪತ್ತುನಾಲ್ಕು ಗಂಟೆ ಮೋಡಗಳೇ ಆವರಿಸಿಕೊಂಡು, ಸೂರ್ಯ ಚಂದ್ರರ



ಮುಖವನ್ನು ನೋಡಲು ಸಾಧ್ಯವಾಗದೆ ಸುರಿವ ಸೋನೆಯಲ್ಲಿ ಚಳಿವೊಂದೆ ನರ್ತನಗೈವ ಆಷಾಢ ಮಾಸದ ಜಡಗಟ್ಟಿದ ನಿರ್ಭಾವ ಸ್ಥಿತಿಯನ್ನು 'ಆಷಾಢ' ಎಂಬ ಕವನ ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದೆ.

ನೂರು ಕೊರಗಿನ ಜಿನುಗಿನೊಲು
ತಟಪಟನೆ ತಟಪಟನೆ
ಒಂದೇ ಸಮನೆ ಕೊರೆವ ಸೋನೆಯ ಮೇಳ
ದಲಿ ಜಗ ಮೂಕ
ಬೇಸರದ ಗೋರಿಯಾಗಿದೆ ಲೋಕ (ಆಷಾಢ–ಚೆಲುವು–ಒಲವು)

ಎಂದು ಒಂದೇ ಸಮನೆ ಕೊರೆವ ಸೋನೆಯ ಮೇಳದಲ್ಲಿ ಜಗತ್ತು ಮೂಕವಾಗಿ ಬೇಸರದ ಗೋರಿಯಾಗಿದೆ ಎಂದು ಆಷಾಢಮಾಸದ ಜಡಗಟ್ಟಿದ ಸ್ಥಿತಿಯನ್ನು ಕವಿ ತುಂಬ ಅರ್ಥಗರ್ಭಿತವಾಗಿ ಹಿಡಿದಿಟ್ಟಿದ್ದಾರೆನ್ನಬೇಕು.

ಹಾದಿಯ ಬದಿಯಲ್ಲಿದ್ದುಕೊಂಡು ಯಾರಿಗೂ ಕಾಣದೆ ಮೌನವಾಗಿದ್ದು ತನ್ನ ಬೆಡಗಿನ ಅಸ್ತಿತ್ವವನ್ನು ನವುರಾಗಿ ಜಗಕ್ಕೆ ಕಾಣಿಸುವ ತವಕದಲ್ಲಿರುವ ಒಂದು ಹೂವಿನ ಬಳ್ಳಿಯನ್ನು ಕುರಿತ ಸುಂದರ ಕವನವೇ 'ಹೂಬಳ್ಳಿ' ಎಂಬುದು. ಜಗದ ಎಷ್ಟೋ ಜನ ಹೀಗೆ ಪ್ರದರ್ಶನಗೊಳ್ಳದೆ ತಮ್ಮ ಪಾಡಿಗೆ ತಾವು ತಮ್ಮ ಕರ್ತವ್ಯವನ್ನು ಮೌನವಾಗಿ ನಿರ್ವಹಿಸಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳುವ ಬಗೆಯನ್ನು ಈ ಕವನ ಧ್ವನಿಸುತ್ತದೆ. ಚಳಿಗಾಲದ ಕೊರೆವ ಚಳಿಗೆ ಮರದ ಎಲೆಗಳು ಉದುರಿ ತರಗೆಲೆಗಳಾಗುತ್ತವೆ. ನಾವು ಆ ತರಗೆಲೆಗಳನ್ನು ಗೂಡಿಸಿ, ಬೆಂಕಿಹಾಕಿ ಸುಟ್ಟುಬಿಡುತ್ತೇವೆ. ಮನುಷ್ಯನಿಗೆ ಇಲ್ಲಿ ಕರುಣೆ, ಪಾಪಪ್ರಜ್ಞೆಗೆ ಕೆಲಸವಿರುವುದಿಲ್ಲ. ನಾವು ಈ ಸಂದರ್ಭದಲ್ಲಿ ತುಂಬ ಸಹಜವೆಂಬಂತೆ ನಿರ್ದಯವಾಗಿ ವರ್ತಿಸುತ್ತೇವೆ. ಆದರೆ ಕವಿಯ ಕಣ್ಣಿಗೆ ಪ್ರಕೃತಿ ಕಣ್ಣೀರು ಮಿಡಿಯುತ್ತಿರುವ ದೃಶ್ಯ ಕಂಡುಬರುತ್ತದೆ. ಅದನ್ನು ಕವಿ :

ತಳಿರ ತುದಿಯಿಂದುದುರಿ ಮಂಜುಹನಿ ಬೀಳುತಿದೆ
ತರಗೆಲೆಯ ಸ್ಮೃತಿಗಾಗಿ ಕಂಬನಿಗಳಂತೆ
ತಳಿರ ಮರೆಯೊಳಗೊಂದು ಮರಿಹಕ್ಕಿ ಚೀರುತಿದೆ
ನಮ್ಮ ನಿಷ್ಕರುಣೆಯನು ಶಪಿಸುವಂತೆ (ತರಗೆಲೆ–ಚೆಲುವು–ಒಲವು)

ಎಂದು ತುಂಬ ಸಾರ್ಥಕವಾಗಿ ಕಟ್ಟಿಕೊಟ್ಟಿದ್ದಾರೆ 'ತರಗೆಲೆ' ಎಂಬೀ ಕವನದಲ್ಲಿ. ಇರುಳಿನ ಮೌನ ಕರಾಳತೆಯನ್ನು 'ಸಂಜೆ' ಎಂಬ ಕವನದಲ್ಲಿ ಕವಿ ಹಿಡಿದಿಡಲು ಯತ್ನಿಸಿ ಯಶಸ್ವಿಯಾಗಿದ್ದಾರೆ. ಹಾಗೆಯೇ ನಾಳೆಯ ಮುಂಜಾವಿನ ಬೆಳಕಿನ ಬೆಣ್ಣೆಯನು ಕಡೆದು ತೆಗೆಯಲು ರಾತ್ರಿಯೆಂಬ ಕಪ್ಪಿಗೆ ಜೀರುಂಡೆಯ ಜಿರ್ರನೆಯ ಜೀರ್ ದನಿಯು ಹೆಪ್ಪಾಗಿ ಬೆರತು ಬರುತ್ತಿದೆಯೆಂದು ಕವಿ 'ಜೀರುಂಡೆ' ಎಂಬ ಕವಿತೆಯಲ್ಲಿ ಹೇಳಿರುವುದು ಮನೋಜ್ಞವಾಗಿದೆ.

'ಕಡಲನ್ನು ಕಂಡಾಗ' ಎಂಬ ಕವನ ಶಿವರುದ್ರಪ್ಪನವರ ಒಂದು ಉತ್ತಮ ಕವಿತೆಯೆಂದು ಹೇಳಬೇಕು. ಕಡಲನ್ನು ಕಾಣಬೇಕೆಂಬ ಕವಿಮನದ ಬಯಕೆ ಈಡೇರಿ ಒಂದು ಸಲ ಕವಿ ಕಡಲನ್ನು ಕಂಡು ಅದರ ಭೂಮತೆಯ ಭವ್ಯ ಚಿತ್ರವನ್ನು ನೋಡಿ ಆನಂದಾಶ್ಚರ್ಯದಿಂದ ಚಕಿತರಾಗುತ್ತಾರೆ. ಎತ್ತ ನೋಡಿದರೂ ಕವಿ ಕಣ್ಣಿಗೆ ನೀಲಜಲದ ನೀಲಜಗ ಕಾಣಿಸುವುದರಿಂದ ಕಡಲು ಕವಿಗೆ ನೀಲಬೊಮ್ಮನಂತೆ ಕಾಣುವುದು ಸಹಜವಾದುದಾಗಿದೆ.

ಕಡಲನ್ನು 'ನೀಲಬೊಮ್ಮ'ನೆಂದು ಕರೆದಿರುವುದು ಹೊಸ ದೃಷ್ಟಿಕೋನದ ಕುರುಹು ಆಗಿದೆ.

ಏನು ಅಬ್ಬರವೊ ಏನು ಉಬ್ಬರವೊ ನಿನ್ನ ಗರ್ಭದಲ್ಲಿ!
ರುದ್ರವೀಣೆಗಳ ತುಮುಲ ನಾದವೋ ನಿನ್ನ ಮೊರೆವ ರಾಗ
ಪ್ರಳಯ ಭೈರವನು ಲೋಕಲೋಕಗಳ ಮೆಟ್ಟಿ ಕುಣಿಯುವಾಗ
ಅವನ ತಾಂಡವಕೆ ತಾಳ ಹಾಕುವೆಯ ತೆರೆಯ ತಾಳದಲ್ಲಿ?

(ಕಡಲನ್ನು ಕಂಡಾಗ–ಚೆಲುವು–ಒಲವು)

ಎಂದು ಕಡಲಿನ ಅಬ್ಬರ, ಉಬ್ಬರ, ಆಳ, ವಿಸ್ತಾರ, ಸಂಕೀರ್ಣತೆ, ಭೀಕರತೆಗಳನ್ನು ಹಲವು ನೆಲೆಗಳಲ್ಲಿ ಸಶಕ್ತವಾಗಿ ಕಟ್ಟಿಕೊಡುವ ಕವಿ,

ತೆರೆಯ ಚವರಿಗಳೊ ವಾದ್ಯಘೋಷಗಳೊ ನಿಜಕು ರಾಜ ನೀನು
ನಿನ್ನ ಗಾಂಭೀರ್ಯ ನಿನ್ನ ವಿಸ್ತಾರ ಮತ್ತೆ ಯಾರಿಗಿಹುದು!
ಋವಿಯ ತೆರದಲ್ಲಿ ಋವಿಯ ದೊರೆಗಳಿಗೆ ದಾಸನಲ್ಲ ನೀನು
ನಿನ್ನ ರಾಜತನ ನಿನ್ನ ವೈಭವವು ನಿನಗೆ ಮೀಸಲಹುದು!

(ಕಡಲನ್ನು ಕಂಡಾಗ–ಚೆಲುವು–ಒಲವು)

ಎಂದು ಕಡಲಿನ ಹಿರಿಮೆ–ಗರಿಮೆಗಳನ್ನು ವಿವಿಧ ಆಯಾಮಗಳಲ್ಲಿ ಚಿತ್ರಿಸುತ್ತಾರೆ. ಮುಂದೆ ಕವಿ ಕಡಲಿನ ದಡದ ಮರಳಿನಲ್ಲಿ ತನ್ನ ಹೆಸರು ಬರೆದಾಗ ಕಡಲಿನ ತೆರೆಗಳು ಅಪ್ಪಳಿಸಿ ಅದನ್ನು ಅಳಿಸಿಬಿಡುತ್ತವೆ. ಇದು ಕವಿಗೆ ಅಹಂಕಾರನಿರಶನದ ಸಂಗತಿಯಾಗಿ ಬೋಧೆಯಾಗುತ್ತದೆ. ಬಂಡೆಯ ಮೇಲೋ ಮರಳಿನ ಮೇಲೋ ಹೆಸರು ಬರೆಯುವುದು ಬರೆಸುವುದು ವ್ಯಕ್ತಿಗತ ಅಹಮಿಕೆಯ ಸಣ್ಣತನದ ಸಂಕೇತ. ಹೆಸರಿಲ್ಲದಿರುವುದು ಆ ಅಹಮಿಕೆ ಲಯವಾದುದರ ಸಂಕೇತ. ಕಡಲಿನ ಈ ನೋಟ, ಸಹವಾಸದಲ್ಲಿ ಕವಿ ಕೊನೆಗೆ ಈ ತತ್ವವನ್ನು ಅರಿಯುವುದು ಮುಖ್ಯವಾಗುತ್ತದೆ.

ಹೀಗೆ ನಿಸರ್ಗವನ್ನು ಕುರಿತ ಶಿವರುದ್ರಪ್ಪನವರ ಕವಿತೆಗಳಲ್ಲಿ ಕೇವಲ ಸೌಂದರ್ಯಾರಾಧನೆ ಮಾತ್ರ ಕಂಡುಬರದೆ ಸೌಂದರ್ಯಾನುಭೂತಿ ಮತ್ತು ಚಿಂತನಶೀಲ ಗುಣವಿರುವುದನ್ನು ಕಾಣುತ್ತೇವೆ. ಜಿಜ್ಞಾಸು ಮನೋಧರ್ಮದ ಕವಿ, ನಿಸರ್ಗದ ವಸ್ತು, ದೃಶ್ಯಗಳನ್ನು ಕುತೂಹಲ ದೃಷ್ಟಿಯಿಂದ ವೀಕ್ಷಿಸುತ್ತ ಸೌಂದರ್ಯಾನುಭೂತಿಯನ್ನು ಪಡೆಯುತ್ತ ಬದುಕಿನ ಕಟುವಾಸ್ತವತೆಯನ್ನು ಕಾಣುತ್ತ, ಕಾಣಿಸುತ್ತ ಸಾಗುವ ಪ್ರಕ್ರಿಯೆ ಶಿವರುದ್ರಪ್ಪನವರ ಕಾವ್ಯದ ಬೆಳವಣಿಗೆ ಮತ್ತು ಸತ್ವವನ್ನು ಸೂಚಿಸುತ್ತದೆ.



**ಜಿಎಸ್ಎಸ್ ಕಾವ್ಯದಲ್ಲಿ ಸಮಾಜ ದರ್ಶನ**

ಸಂಘಜೀವಿಯಾದ ಮನುಷ್ಯ ಸಮಾಜದ ಒಂದು ಘಟಕವಾಗಿದ್ದಾನೆ, ಭಾಗವಾಗಿದ್ದಾನೆ. ಸಮಾಜವನ್ನುಳಿದ ಮಾನವ ಬದುಕಿಗೆ ಅರ್ಥವೆಂಬುದು ಇರುವುದಿಲ್ಲ. ಸಮಾಜದ ಆಗುಹೋಗುಗಳನ್ನು ಒಳಿತು ಕೆಡಕುಗಳನ್ನು ಸಮನಿಸುತ್ತಿರುವ ಮನುಷ್ಯ ತನ್ನ ಬದುಕನ್ನು ರೂಪಿಸಿಕೊಳ್ಳುತ್ತ ಸಮಾಜ ಬದುಕಿನ ರೂವಾರಿಯೂ ಆಗಿರುತ್ತಾನೆ. ಹಾಗಾಗಿ ಕವಿ ಕೇವಲ ಸಾಮಾನ್ಯ ಮನುಷ್ಯನಾಗಿರದೆ ದ್ರಷ್ಟಾರನೂ ಋಷಿಸದೃಶನೂ, ಸೂಕ್ಷ್ಮಾತಿಸೂಕ್ಷ್ಮ ಸಂವೇದನಾಶಿಲನೂ ಆಗಿರಬೇಕಾದರೆ ಅವನ ಜವಾಬ್ದಾರಿ ಇನ್ನೂ ಅಧಿಕವಾಗಿರುತ್ತದೆ. ಸಾಮಾನ್ಯ ಮನುಷ್ಯನ ಕಣ್ಣಿಗೆ ಕಾಣದ, ಅರಿವಿಗೆ ಬಾರದ ಎಷ್ಟೋ ವಿಷಯಸಂಗತಿಗಳು ದ್ರಷ್ಟಾರನಾದ ಕವಿಯ ಬಗೆಗಣ್ಣಿಗೆ ಗೋಚರವಾಗುತ್ತವೆ. ಭವಿಷ್ಯದಲ್ಲಿ ಒದಗಬಹುದಾದ ಒಳಿತು–ಕೆಡಕುಗಳ ಅರಿವು ಅವನ ಸೂಕ್ಷ್ಮಮತಿಗೆ ಬೇಗನೆ ಹೊಳೆಯುತ್ತದೆ. ಆದುದರಿಂದ ಸಮಾಜದ ಅರೆಕೊರೆಗಳನ್ನು ತಿದ್ದಿತೀಡುವ ಅವಕಾಶ ಇತರರಿಗಿಂತ ಕವಿಗೆ ಹೆಚ್ಚಿಗೆ ಇರುವುದು ಸಹಜವಾದುದಾಗಿದೆ.

ಸಮಾಜದಲ್ಲಿನ ಅನ್ಯಾಯ, ಅಸಮಾನತೆ, ಸ್ವಾರ್ಥಪರತೆ, ಶೋಷಣೆ, ಭ್ರಷ್ಟಾಚಾರಗಳಂತ ಸಮಾಜವಿರೋಧಿ, ಮಾನವಿರೋಧಿ ಅನಿಷ್ಠಗಳು ಸಮಾಜ ಬದುಕಿನ ನೆಮ್ಮದಿಯನ್ನು, ಆರೋಗ್ಯವನ್ನು ಹಾಳುಮಾಡಿವೆ; ಮಾಡುತ್ತಿವೆ. ಭ್ರಷ್ಟರು, ದುಷ್ಟರು, ಜಾತಿವಾದಿಗಳು, ಕಳ್ಳರು, ಸುಳ್ಳರು, ಮೋಸಗಾರರು, ಅನ್ಯಾಯಕೋರರು ಒಳ್ಳೆಯವರ, ಸಮಾಜವಾದಿಗಳ ಮುಖವಾಡದಲ್ಲಿ ಮುಗ್ಧರು, ದೀನದಲಿತರು ಶ್ರಮಜೀವಿಗಳು ಮತ್ತು ತಳಸಂಸ್ಕೃತಿಯ ಕಷ್ಟಜೀವಿಗಳನ್ನು ನಿರಂತರ ಶೋಷಣೆಗೆ ಗುರಿಮಾಡುತ್ತಿದ್ದಾರೆ. ಪುರೋಹಿತಶಾಹಿ ಬಿತ್ತಿದ ಹಲವಾರು ಗೊಡ್ಡುಸಂಪ್ರದಾಯ ಮೂಢನಂಬಿಕೆಗಳ ಜಾಲದಲ್ಲಿ ಸಾಮಾನ್ಯ ಜನ ಸಿಲುಕಿ ಅದರಿಂದ ಬಿಡಿಸಿಕೊಳ್ಳಲು ಸಾಧ್ಯವಾಗದೆ ವಿಲಿವಿಲಿ ಒದ್ದಾಡುತ್ತಿದ್ದಾರೆ. ಇಂಥ ವಿಷಮ ಸ್ಥಿತಿಯಲ್ಲಿ ಕವಿಯ ಹೊಣೆಗಾರಿಕೆಗೆ ಇನ್ನೂ ಅಧಿಕ ಬೆಲೆ ಇರುತ್ತದೆ.

ಶಿವರುದ್ರಪ್ಪನವರ ಆರಂಭದ ಕವನಗಳಲ್ಲಿ ನಿಸರ್ಗ ಪ್ರೀತಿ ಸ್ವಲ್ಪ ಅಧಿಕಮಟ್ಟದಲ್ಲಿ ಕಾಣಿಸಿಕೊಂಡಿದ್ದರೂ ನಂತರದ ಕವನಸಂಕಲನಗಳಲ್ಲಿ ಅವರ ಚಿಂತನೆ ಸಮಾಜಮುಖಿ ನೆಲೆಯಲ್ಲಿ ಸಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಇವರ ಕವನಗಳಲ್ಲಿ ನಗರಸಮಾಜ ಅಧಿಕಮಟ್ಟದಲ್ಲಿ ಚಿತ್ರಣಗೊಂಡಿದ್ದರೆ ಗ್ರಾಮಸಮಾಜದ ಸಂವೇದನೆ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತದೆ. ಇದಕ್ಕೆ ಕಾರಣ ಕವಿ ತನ್ನ ಬದುಕಿನ ಬಹುಭಾಗವನ್ನು ನಗರದಲ್ಲಿ ಕಳೆದದ್ದು ಇರಬಹುದು. ಇವರ ಕವಿತೆಗಳಲ್ಲಿ ಮನುಷ್ಯನ ಸಣ್ಣತನ, ಸ್ವಾರ್ಥ, ಗೊಂದಲ, ಏಕಾಕಿತನ, ಕೃತಕತೆ, ಶೋಷಣೆ, ಅನ್ಯಾಯ, ರಾಜಕಾರಣಿಗಳ ಸೋಗಲಾಡಿತನ, ಗೋಸುಂಬೆ ವ್ಯಕ್ತಿತ್ವ ಮುಂತಾದವು ಪ್ರಧಾನವಾಗಿ ಚಿತ್ರಣಗೊಂಡಿರುವುದನ್ನು ನೋಡಬಹುದಾಗಿದೆ. ಕೆಲವು ಕವಿತೆಗಳ ಪರಿಶೀಲನೆಯಿಂದ ಇದನ್ನು ಅರಿಯುತ ಪ್ರಯತ್ನವನ್ನು ಮಾಡಬಹುದು.

(ಮುಂದುವರಿಯುವುದು......)

# ಕರುಣಾಳು ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳು

**ತ.ಸು. ಶಾಮರಾಯ**

..........

ಸಜ್ಜನರು ಸಂಕಟಕ್ಕೆ ಸಿಕ್ಕಿ ದುರ್ಜನರ ಪ್ರಾಬಲ್ಯ ಹೆಚ್ಚಿದಾಗ ಅಂತಹ ಸಮಾಜದ ಪ್ರತಿನಿಧಿಯಾಗಿ ವ್ಯಕ್ತಿಯೊಬ್ಬನು ಉದಿಸುತ್ತಾನೆ. ಇಡೀ ಸಮಾಜದ ಬಾಯಾಗಿ ಅವನು ದಿವ್ಯಶಕ್ತಿಯನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಾನೆ. ವ್ಯಕ್ತಿಯ ಭಕ್ತಿ ಉನ್ನತೋನ್ನತವಾದಾಗ ದಿವ್ಯಶಕ್ತಿ ಅದರತ್ತ ಧಾವಿಸುತ್ತದೆ. ವ್ಯಕ್ತಿಯ ಭಕ್ತಿ ಮತ್ತು ದಿವ್ಯಶಕ್ತಿ ಇವೆರಡೂ ಚುಂಬನಶಕ್ತಿಯುಳ್ಳವು. ಹೀಗೆ ಪರಸ್ಪರ ಆಕರ್ಷಿಸುತ್ತಾ ಯಾವುದೋ ಒಂದು ವಲಯದಲ್ಲಿ ವ್ಯಕ್ತಿಯ ಭಕ್ತಿಯೂ ದಿವ್ಯಶಕ್ತಿಯೂ ಸಂಗಮಗೊಳ್ಳುತ್ತದೆ. ಹೀಗೆ ದಿವ್ಯಶಕ್ತಿಯನ್ನು ತನ್ನಲ್ಲಿ ಸೆಳೆದುಕೊಂಡ ವ್ಯಕ್ತಿಯೇ ಅವತಾರಪುರುಷ. ಅವನನ್ನೇ ನಾವು ಗುರು ಎಂದು ಕರೆಯುತ್ತೇವೆ. ಸುತ್ತೂರಿನ ಶ್ರೀ ಶ್ರೀಗಳವರು ಇಂತಹ ಸದ್ಗುರುಗಳು.

ನನ್ನ ಜೀವನದಲ್ಲಿ ಶ್ರೀ ಶ್ರೀಯವರು ಪ್ರವೇಶಿಸಿದ ಒಂದೆರಡು ಸನ್ನಿವೇಶಗಳನ್ನು ನೆನೆದಾಗ ನನ್ನ ಅಂತರಂಗ ಅತ್ಯಂತ ಕೃತಜ್ಞತೆಯಿಂದ ಮಣಿದು ಭಕ್ತಿಯಿಂದ ಪರವಶಗೊಳ್ಳುತ್ತದೆ.

ಶ್ರೀ ಶ್ರೀಗಳವರನ್ನು ವೈಯಕ್ತಿಕ ಕಾರಣಗಳಿಗಾಗಿ ನಾನೆಂದೂ ಭೇಟಿ ಮಾಡಿಲ್ಲ. ಒಮ್ಮೆ ಮಾತ್ರ ಅವರನ್ನು ಕೃಪಾಯಾಚನೆ ಮಾಡಬೇಕಾದ ಒಂದು ಸಂದರ್ಭವೊದಗಿತು. ಬಡ ಹುಡುಗನೊಬ್ಬನು ನನ್ನ ಶಿಷ್ಯನಾಗಿದ್ದ. ಒಮ್ಮೆ ತರಗತಿಯಲ್ಲಿ ಬಾಡಿದ ಮುಖದಿಂದ ಕುಳಿತಿದ್ದ ಆತನನ್ನು ಕಂಡು ನನ್ನ ಮನಸ್ಸು ಚುರುಗುಟ್ಟಿತು. ಪಾಠವಾಗುತ್ತಲೆ ಆತನನ್ನು ಕರೆದು 'ನಿನ್ನ ಊಟವಾಯಿತೆ?' ಎಂದು ಪ್ರಶ್ನಿಸಿದೆ. ಕಡುಬಡವನಾದರೂ ತುಂಬ ಆತ್ಮಗೌರವವುಳ್ಳ ಹುಡುಗ ಆತ. 'ಆಗಿದೆ' ಎಂದ. ನಾನು ನಂಬಲಿಲ್ಲ. ಮಾತನಾಡುತ್ತಾ ಆಡುತ್ತಾ ಆತನನ್ನು ನನ್ನ ಮನೆಯ ಬಳಿಗೆ ಕರೆದೊಯ್ದೆ. ಗೃಹಿಣಿಯನ್ನು ಕರೆದು ಅವನಿಗೆ ಊಟಕ್ಕೆ ಬಡಿಸುವಂತೆ ತಿಳಿಸಿದೆ. ಬೇಗ ಮಣಿಯದ ಆತನನ್ನು ಗದರಿಸಿ ಬೈದು ಊಟಕ್ಕೆ ಕೂರಿಸಿದೆ. ಊಟವಾದ ಮೇಲೆ ಆತನ ಇತಿಹಾಸವನ್ನೆಲ್ಲ ತಿಳಿದುಕೊಂಡೆ. ಪ್ರೈಮರಿ ಶಾಲೆಯ ಉಪಾಧ್ಯಾಯರೊಬ್ಬರ ಮಗನಾಗಿದ್ದ ಆತ ಓದಿನ ಆಶೆಯಿಂದ ಬರಿಗೈಯಲ್ಲಿ ಮೈಸೂರನ್ನು ಸೇರಿದ್ದ. ವಸತಿಗಾಗಲೀ ಊಟಕ್ಕಾಗಲೀ ಯಾವ ಅನುಕೂಲವೂ ಇರಲಿಲ್ಲ. ಒದೆರಡು

---

ಕೃಪೆ: ಅರ್ಚನ: ಸಂ: ಪ್ರೊ. ಹೆಚ್.ಪಿ. ಮಲ್ಲೇದೇವರು: (ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಅಭಿನಂದನ ಗ್ರಂಥ) 1984



ದಿನ ಆತನನ್ನು ನನ್ನ ಬಳಿಯಲ್ಲಿಯೇ ಇರಿಸಿಕೊಂಡಿದ್ದೆ. ಆದರೆ ಆತನ ಸಂಕೋಚ ಪ್ರವೃತ್ತಿಯನ್ನು ಕಂಡು ನನ್ನ ತಲೆ ಬಿಸಿಯಾಯಿತು. ಒಂದು ದಿನ ಆ ಹುಡುಗನನ್ನು ಕರೆದು ಕೊಂಡು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಬಳಿಗೆ ಹೋದೆ. ಅವರಿಗೆ ಹುಡುಗನ ಪರಿಚಯವನ್ನು ಮಾಡಿಸಿ ಅಶನ-ವಸತಿಗಳನ್ನು ನೀಡುವಂತೆ ಪ್ರಾರ್ಥಿಸಿದೆ. ಅವರೊಮ್ಮೆ ನಕ್ಕರು - "ಇವನು ಲಿಂಗಾಯತ ಹುಡುಗ ನೀವು ಬ್ರಾಹ್ಮಣರು. ಇವನಲ್ಲಿ ನಿಮಗೇಕೆ ಇಷ್ಟು ಆಸಕ್ತಿ?' ಎಂದರು. ನಾನು ಸ್ವಲ್ಪ ಕಟುವಾಗಿಯೇ ಹೇಳಿದೆ - "ನನ್ನ ವಿದ್ಯಾರ್ಥಿಗಳು ನನ್ನ ಮಕ್ಕಳು. ಅವರೆಲ್ಲ ಜಾತ್ಯತೀತರು. ಅವರ ಜಾತಿ ವಿದ್ಯಾರ್ಥಿಗಳದು. ನಾನು ಅವರ ಗುರು" ಎಂದೆ. ಸ್ವಾಮೀಜಿಯವರ ನಗುಮುಖ ಮತ್ತಷ್ಟು ಅರಳಿತು. "ನಾನು ಅದನ್ನು ಬಲ್ಲೆ, ಕೇವಲ ಹಾಸ್ಯಕ್ಕಾಗಿ ಹಾಗೆ ಹೇಳಿದೆ" ಎಂದು ಹೇಳಿ ಆಗಿಂದಾಗಲೇ ಆ ಹುಡುಗನನ್ನು ಮಠದ ವಿದ್ಯಾರ್ಥಿಮಂದಿರಕ್ಕೆ ಸೇರಿಸಿಕೊಂಡರು. ಆತನೇ ಇಂದು ಸುಪ್ರಸಿದ್ಧ ಕನ್ನಡ ಕವಿಯೆಂದು ಪ್ರಖ್ಯಾತನಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕನಾಗಿರುವ ಡಾ. ಜಿ. ಎಸ್. ಶಿವರುದ್ರಪ್ಪ.

□

**ಕೃತಜ್ಞತೆ**

ಮಾನವ ಸಂತಾನದೆಡೆಗೆ ಎನಿತು ಕರುಣೆ ನಿನ್ನದು!
ಅದ ನೆನೆದರೆ ಕಂಬನಿಯೇ ಕೋಡಿವರಿದು ಹರಿವುದು!

ಹುಟ್ಟಿದಂದಿನಿಂದ ನಾನು ನಿನ್ನಾಣೆಯ ಮೀರಿದೆ,
ಆದರು ನೀ ಅಕ್ಕರೆಯಲ್ಲಿ ತಾಯೊಲವನೆ ತೋರಿದೆ!
ಮಧುರ ವಚನದಿಂದ ಮನವ ಸಂತೈಸುತ ನಲಿಸಿದೆ,
ಇದ ನೆನೆದರೆ ಕಂಬನಿಯೇ ಕೋಡಿಯೊಡೆದು ಹರಿದಿದೆ.

ನಿನ್ನೊಲವಿನ ಹೊರೆಯ ಹೊತ್ತಾ ನಾನು ಕರೆದು ಬಳಲಿದೆ.
ಇನ್ನು ಮುಂದೆ ಹೊರಲಾರದೆ ಎದೆಯು ಕೊರಗಿ ನರಳಿದೆ.
ನಿನ್ನೊಲವಿನ ಕರಸ್ಪರ್ಶದಿ ಈ ನೋವನು ನೀಗಿಸು,
ನಿನ್ನ ಪಾದಪದ್ಮಗಳಲಿ ನನ್ನನಿರಿಸಿ ಪಾಲಿಸು.

**- ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ**

# ಆಶ್ರಯ ನೀಡಿದ ಶ್ರೀಮಠ

**ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ**

ಸುತ್ತೂರು ಮಠದ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿಗಳಲ್ಲಿ ಒಬ್ಬನಾದ ನನ್ನನ್ನು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘವು ನನಗೆ ರಾಷ್ಟ್ರಕವಿ ಪ್ರಶಸ್ತಿ ಬಂದ ಸಂದರ್ಭದಲ್ಲಿ, ಈ ದಿನ ಅತ್ಯಂತ ಪ್ರೀತಿ, ವಿಶ್ವಾಸಗಳಿಂದ ಅಭಿನಂದಿಸಿ ಗೌರವಿಸಿದೆ. ಅದಕ್ಕಾಗಿ ನಾನು ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಸಂಘದ ಅಧ್ಯಕ್ಷರಾದ ಶ್ರೀ ಎಲ್. ರೇವಣಸಿದ್ಧಯ್ಯ ಮತ್ತು ಇತರ ಪದಾಧಿಕಾರಿಗಳಿಗೆ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತ ಈ ಸನ್ಮಾನವನ್ನು ತುಂಬ ಪ್ರೀತಿಯಿಂದ ಸ್ವೀಕರಿಸಿದ್ದೇನೆ.

ಈ ಸಮಾರಂಭದ ಜತೆಗೆ ಇನ್ನೆರಡು ವಿಶೇಷಗಳು ಸೇರಿಕೊಂಡಿವೆ. ಮೊದಲನೆಯದು ಪ್ರೊ. ಲಿಂಗದೇವರು ಹಳೆಮನೆಯವರು ನನ್ನ ಸಾಹಿತ್ಯ ಹಾಗೂ ವ್ಯಕ್ತಿತ್ವವನ್ನು ಕುರಿತು ರಚಿಸಿರುವ ಕಿರು ಕೃತಿಯೊಂದು ನನ್ನ ಪ್ರೀತಿಯ ಕವಿಯೂ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಸಿದ್ಧಲಿಂಗಯ್ಯನವರಿಂದ ಬಿಡುಗಡೆಯಾಗುತ್ತಿದೆ ಅನ್ನುವುದು. ಪ್ರೊ. ಲಿಂಗದೇವರು ಇಂಥದೊಂದು ಕೃತಿಯನ್ನು ಬರೆದಿದ್ದಾರೆನ್ನುವುದು ನನಗೆ ಸಂತೋಷದ ಸಂಗತಿ ಕೂಡಾ. ಎರಡನೆಯದು, ಭಾರತೀಯ ಭಾಷಾ ಸಂಸ್ಥಾನದ ವತಿಯಿಂದ ನನ್ನ ತರುಣ ಮಿತ್ರರು, ಸಾಹಿತ್ಯ ಹಾಗೂ ಚಲನಚಿತ್ರ ವಲಯಗಳಲ್ಲಿ ಹೆಸರು ಮಾಡಿರುವ ಶ್ರೀ ಕೃಷ್ಣ ಮಾಸಡಿಯವರು ನನ್ನನ್ನು ಕುರಿತು ಸಿದ್ಧಪಡಿಸಿರುವ ಸಾಕ್ಷ್ಯಚಿತ್ರವೊಂದು ಈ ದಿನ ಪ್ರದರ್ಶಿತವಾಗಲಿದೆ ಅನ್ನುವುದು. ಈ ಸಾಹಸಗಳಿಗಾಗಿ ನಾನು ಪ್ರೊ. ಲಿಂಗದೇವರು ಹಳೆಮನೆಯವರನ್ನೂ, ಶ್ರೀ ಕೃಷ್ಣ ಮಾಸಡಿಯವರನ್ನೂ ಅಭಿನಂದಿಸುತ್ತೇನೆ. ಮತ್ತು ನನ್ನನ್ನು ಕುರಿತು ಪ್ರಿಯರಾದ ಶ್ರೀ ಗೊ.ರು. ಚನ್ನಬಸಪ್ಪನವರು, ಡಾ. ಎಂ. ಚಿದಾನಂದಮೂರ್ತಿಯವರು ಮತ್ತು ಡಾ. ಸಿ.ಪಿ.ಕೆ. ಹಾಗೂ ಡಾ. ಸಿದ್ಧಲಿಂಗಯ್ಯನವರು ತುಂಬ ಪ್ರೀತಿಯಿಂದ ಮಾತನಾಡಿದ್ದಾರೆ. ತಮ್ಮ ನಡುವಣ ಒಬ್ಬ ಕವಿಯನ್ನು ಕುರಿತು ಆತನ ಸಮಕಾಲೀನ ಸಹೃದಯರು ತಾಳುವ ಆಸಕ್ತಿ, ನಡೆಯಿಸುವ ಚರ್ಚೆ ಇವೆಲ್ಲ ಆ ಕವಿಗೆ ತೋರುವ

(ರಾಷ್ಟ್ರಕವಿ ಪದವಿ ಪುರಸ್ಕಾರ ಪಡೆದಾಗ ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘವು ದಿನಾಂಕ 16.6.2007 ರಂದು ಸನ್ಮಾನಿಸಿದಾಗ ಡಾ. ಜಿ.ಎಸ್. ಶಿವರುದ್ರಪ್ಪನವರು ಮಾಡಿದ ಭಾಷಣ)



ಗೌರವವಷ್ಟೇ ಅಲ್ಲ, ಆ ಮೂಲಕ ಒಂದು ಭಾಷೆಗೆ ಮತ್ತು ಆ ಭಾಷೆಯನ್ನಾಡುವ ಜನಕ್ಕೆ ತೋರುವ ಗೌರವವೂ ಹೌದು.

ನಾನು ಮೂರು ಮಠಗಳ ತೊಟ್ಟಿಲಲ್ಲಿ ಬೆಳೆದವನು. ಅಂದರೆ, ನನ್ನ ಶೈಕ್ಷಣಿಕ ಜೀವನವು ವಿಕಾಸಹೊಂದಿದ್ದು ಶರಣಧರ್ಮದ ಮೂರು ಮುಖ್ಯ ಮಠಗಳು ನಡೆಯಿಸುತ್ತಿರುವ ವಿದ್ಯಾರ್ಥಿನಿಲಯಗಳ ಆಶ್ರಯ ಮತ್ತು ಪೋಷಣೆಯಲ್ಲಿ. ಮೊದಲನೆಯದು, ನನಗೆ ಹೈಸ್ಕೂಲಿನ ದಿನಗಳಲ್ಲಿ ಆಶ್ರಯಕೊಟ್ಟದ್ದು ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ದಾವಣಗೆರೆಯಲ್ಲಿ ಸ್ಥಾಪಿಸಿರುವ ಜಯದೇವ ವಿದ್ಯಾರ್ಥಿನಿಲಯ. ದಾವಣಗೆರೆಯ ಜಯದೇವ ವಿದ್ಯಾರ್ಥಿನಿಲಯ ಸ್ಥಾಪಿತವಾಗಿ ಒಂದು ನೂರು ವರ್ಷವಾಯಿತು. ಕಳೆದ ತಿಂಗಳು ಅದರ ಶತಮಾನೋತ್ಸವ ವರ್ಷದ ಆಚರಣೆಯ ಸಂದರ್ಭದಲ್ಲಿ ಅದರ ಹಳೆಯ ವಿದ್ಯಾರ್ಥಿಯಾದ ನನ್ನನ್ನು ರಾಷ್ಟ್ರಕವಿ ಪುರಸ್ಕೃತನೆಂದು ಗೌರವಿಸಲಾಯಿತು. ಎರಡನೆಯದು ನನ್ನ ಇಂಟರ್‌ಮೀಡಿಯೇಟ್ ಕಾಲೇಜಿನ ದಿನಗಳಲ್ಲಿ ನನಗೆ ಆಶ್ರಯಕೊಟ್ಟದ್ದು ಪೂಜ್ಯ ಶ್ರೀ ಶಿವಕುಮಾರಸ್ವಾಮಿಗಳ ಸಿದ್ಧಗಂಗಾ ಮಠದ ಪ್ರಸಾದ ನಿಲಯ. ಋಷ್ಯಾಶ್ರಮಸದೃಶವಾದ ಈ ಕ್ಷೇತ್ರದಲ್ಲಿ ನನ್ನ ಕವಿತೆಗೆ ರೆಕ್ಕೆ ಪುಕ್ಕಗಳು ಮೂಡಿದುವೆಂದು ಹೇಳಬಹುದು. ಮೂರನೆಯದು ನನ್ನ ಬಿ.ಎ. ಆನರ್ಸ್ ತರಗತಿಯ ಶಿಕ್ಷಣದ ಸಂದರ್ಭದಲ್ಲಿ ಆಶ್ರಯಕೊಟ್ಟದ್ದು ಮೈಸೂರಿನಲ್ಲಿರುವ ಶ್ರೀ ಸುತ್ತೂರು ಜಗದ್ಗುರುಗಳು ನಡೆಯಿಸುತ್ತಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿನಿಲಯ. ಈ ಮೂರೂ ಮಠಗಳು ಕರ್ನಾಟಕದ ಶಿಕ್ಷಣ ಹಾಗೂ ಸಂಸ್ಕೃತಿಯ ಸಂವರ್ಧನೆಯಲ್ಲಿ ವಹಿಸಿರುವ ಪಾತ್ರ ಮಹತ್ವದ್ದು. ಇವುಗಳ ಆಶ್ರಯವಿಲ್ಲದಿದ್ದ ಪಕ್ಷದಲ್ಲಿ ನಾನು ಹಾಗೂ ನನ್ನಂಥ ಅಸಂಖ್ಯ ಬಡ ವಿದ್ಯಾರ್ಥಿಗಳು ಶಿಕ್ಷಣದ ಸವಲತ್ತನ್ನು ಪಡೆದುಕೊಂಡು ಮುಂದೆ ಬರಲು ಸಾಧ್ಯವೇ ಇರುತ್ತಿರಲಿಲ್ಲ ಅನ್ನುವುದು ಒಂದು ಚಾರಿತ್ರಿಕ ಸತ್ಯವಾಗಿದೆ.

ಸುತ್ತೂರು ಮಠದ ವಿದ್ಯಾರ್ಥಿನಿಲಯದ ಒಬ್ಬ ಹಳೆಯ ವಿದ್ಯಾರ್ಥಿಯಾಗಿ ನನ್ನ ಅಂದಿನ ದಿನಗಳನ್ನು ನೆನೆಯುವುದು ಅಂದರೆ, ಮೈಸೂರಿನ ಮಹಾರಾಜಕಾಲೇಜಿನ ಉಜ್ವಲವಾದ ಆ ದಿನಗಳನ್ನು ನೆನೆಯುವುದು ಎಂದೇ ಅರ್ಥ. ಮಹಾಕವಿ ಕುವೆಂಪು, ಪಂಡಿತೋತ್ತಮ ಡಿ.ಎಲ್. ನರಸಿಂಹಾಚಾರ್, ಆಚಾರ್ಯ ತೀ.ನಂ. ಶ್ರೀಕಂಠಯ್ಯ, ಮಹಾವಾಗ್ಮಿ ಟಿ.ಎ. ಪುರುಷೋತ್ತಮ, ವಿನೋದಪ್ರಿಯ ಪ್ರೊ. ವಿ.ಎಲ್. ಡಿಸೌಜಾ, ತತ್ವಜ್ಞಾನಿ ಎಂ. ಯಾಮುನಾಚಾರ್ಯ, ಮಾಧುರ್ಯವೇ ಮೂರ್ತಿವೆತ್ತಂತಿದ್ದ ರಾಳ್ಲಪಳ್ಳಿ ಅನಂತಕೃಷ್ಣಶರ್ಮ–ಈ ಹೆಸರುಗಳೇ ಸಾಕು. ಇವರ ನಡುವೆ ಸೇರಿಸಬೇಕಾದದ್ದು ವಾತ್ಸಲ್ಯದ ಪ್ರತಿಮಾಸ್ವರೂಪರಾದ ಪ್ರೊ. ತ.ಸು. ಶಾಮರಾಯರು.

ಶಾಮರಾಯರ ನೆನಪು ಬರುತ್ತಲೇ ನಾನು ಸುತ್ತೂರು ಮಠದ ವಿದ್ಯಾರ್ಥಿನಿಲಯಕ್ಕೆ ಸೇರಿಕೊಂಡ ಸ್ವಾರಸ್ಯವಾದ ಸಂಗತಿ ಕಣ್ಣ ಮುಂದೆ ಬಂದು ನಿಲ್ಲುತ್ತದೆ.

ಅದು 1946ನೆಯ ಇಸವಿ. ಗ್ರಾಮೀಣ ಪರಿಸರದ ಮಧ್ಯಮ ವರ್ಗದ ಕುಟುಂಬದಿಂದ ಬಂದ ನಾನು ಮನೆಯೊಳಗಣ ಆರ್ಥಿಕ ಸಂಕಷ್ಟಗಳ ಕಾರಣದಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದೆ, ಕೆಲವು ಕಾಲ ಮಿಡಲ್ ಸ್ಕೂಲ್ ಮೇಷ್ಟ್ರಾಗಿ, ಕೆಲವು ಕಾಲ ತಾಲ್ಲೂಕು ಕಛೇರಿಯ ಗುಮಾಸ್ತನಾಗಿ ಹಲವು ಅವಸ್ಥಾಂತರಗಳನ್ನು ಹಾದು, ಅದು ಹೇಗೋ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಬಿ.ಎ. ಆನರ್ಸ್ ತರಗತಿಗೆ ಸೇರಿಕೊಂಡಿದ್ದೆ. ಆದರೆ ಏನು ಕಾರಣವೋ ಏನೋ ಮೈಸೂರಿನ ಯಾವ ವಿದ್ಯಾರ್ಥಿನಿಲಯದಲ್ಲೂ ನನಗೆ ಪ್ರವೇಶ ದೊರೆಯಲಿಲ್ಲ. ಹೀಗಾಗಿ ನಾನು ನನ್ನಂತೆಯೆ ಇದ್ದ ಒಂದಿಬ್ಬರು ಗೆಳೆಯರೊಂದಿಗೆ, ಮೈಸೂರಿನ ಡಿ. ಸುಬ್ಬಯ್ಯ ರಸ್ತೆಯಲ್ಲೊಂದು ಕೊಠಡಿಯನ್ನು ಬಾಡಿಗೆಗೆ ಹಿಡಿದು, ಒಂದಷ್ಟು ಅನ್ನ ಬೇಯಿಸಿಕೊಂಡು ಹೋಟಲಿನಿಂದ ಸಾಂಬಾರ್ ಕೊಂಡು ತಂದು, ನಮ್ಮ ದಿನಗಳನ್ನು ನೂಕುತಿದ್ದೆವು.

ಇಂಥ ದಿನಗಳಲ್ಲಿ ಒಂದು ದಿನ ಮಹಾರಾಜ ಕಾಲೇಜಿನಲ್ಲಿ ನಮ್ಮ ಗುರುಗಳಾದ ತ.ಸು. ಶಾಮರಾಯರು ಕುಮಾರವ್ಯಾಸನ 'ಉದ್ಯೋಗ ಪರ್ವ'ದ ಒಂದು ಸಂದರ್ಭವನ್ನು ಕುರಿತು ಪಾಠ ಮಾಡುತ್ತಿದ್ದರು. ಇದ್ದಕ್ಕಿದ್ದ ಹಾಗೆ ನನಗೆ ತಲೆ ಸುತ್ತಿದಂತಾಗಿ, ಡೆಸ್ಕಿನ ಮೇಲೆ ತಲೆಯಿರಿಸಿ ಒರಗಿಕೊಂಡೆ. ಕೊಂಚ ಹೊತ್ತಿನ ಮೇಲೆ ಸುಧಾರಿಸಿಕೊಂಡು ಮಂಕಾಗಿ ಕೂತ ನನ್ನನ್ನು ಶಾಮರಾಯರು ಗಮನಿಸಿದರು.

ತರಗತಿ ಮುಗಿದ ಕೂಡಲೇ ನನ್ನ ಕಡೆ ನೋಡಿ 'ಏ ಮಗೂ, ಏನಾಗಿದೆ ನಿನಗೆ? ಯಾಕೆ ಹೀಗಿದ್ದೀ? ಊಟ ಮಾಡಿದ್ದೀಯ ತಾನೆ?' ಅಂದರು. ನಾನೆಂದೆ: 'ಊಟ ಆಗಿದೆ ಸಾರ್, ಏನೋ ಸ್ವಲ್ಪ ತಲೆ ಸುತ್ತಿದ ಹಾಗಾಯಿತು, ಅಷ್ಟೆ'. 'ಎಲ್ಲಿ ಮಾಡಿದೆ, ಯಾವ ಹಾಸ್ಟಲು' ಅಂದರು ಮೇಷ್ಟ್ರು. 'ಯಾವ ಹಾಸ್ಟಲಲ್ಲೂ ಇಲ್ಲ ಸಾರ್, ಹೋಟಲಿನಲ್ಲಿ' ಅಂದೆ. 'ಸುಳ್ಳು, ಸುಳ್ಳು. ನೀನು ಊಟಾನೇ ಮಾಡಿಲ್ಲ ಅನ್ನೋದನ್ನ ನಿನ್ನ ಮುಖವೇ ಹೇಳುತ್ತೆ. ಬಾ ನನ್ನ ಜತೆಗೆ' – ಎಂದು ಸೀದಾ ತಮ್ಮ ಮನೆಗೆ ಕರೆದುಕೊಂಡು ಹೋದರು. 'ಲೇ, ನನ್ನ ಜತೆಗೆ ಇವನಿಗೂ ಎಲೆ ಹಾಕೇ' ಎಂದು ಅಡುಗೆಮನೆಯೊಳಗಿದ್ದ ತಮ್ಮ ಮಡದಿಗೆ ಕೇಳುವಂತೆ ಹೇಳಿದರು. ಮುಂದಿನ ಹದಿನೈದು ನಿಮಿಷಗಳಲ್ಲಿ ನಡೆದಿತ್ತು ನಮ್ಮ ಊಟ. 'ಬಡ್ಸು ಬಡ್ಸು, ಸರಿಯಾಗಿ ಬಡ್ಸು' ಎಂದು ತಮ್ಮ ಹೆಂಡತಿಗೆ ಹೇಳುತ್ತಲೇ 'ನಾಚಿಕೆಪಟ್ಟುಕೊಳ್ಳಬೇಡ ಕಣಯ್ಯಾ, ಸರಿಯಾಗಿ ಊಟ ಮಾಡು' ಅಂದರು. ಊಟವಾದ ಮೇಲೆ ನನ್ನ ಪೂರ್ವೋತ್ತರಗಳನ್ನೆಲ್ಲ ವಿಚಾರಿಸಿದರು. ಮರುದಿನ ನನ್ನನ್ನು ಸುತ್ತೂರು ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಹತ್ತಿರ ಕರೆದುಕೊಂಡು ಹೋದರು. 'ಸ್ವಾಮೀಜಿ ಇವನೊಬ್ಬ ಬಡ ಹುಡುಗ. ನನ್ನ ವಿದ್ಯಾರ್ಥಿ. ಯಾವ ಹಾಸ್ಟಲಲ್ಲೂ ಇವನಿಗೆ ಅವಕಾಶ ಸಿಕ್ಕಿಲ್ಲ. ಇವನಿಗೆ ನಿಮ್ಮ ಹಾಸ್ಟಲಲ್ಲಿ ದಯಮಾಡಿ ಅನುಕೂಲ ಮಾಡಿಕೊಡಿ' ಎಂದು ಕೇಳಿಕೊಂಡರು. ಪೂಜ್ಯ ಸ್ವಾಮಿಗಳು ನಕ್ಕು ಹೇಳಿದರು: 'ಶಾಮರಾಯರೇ ಇವನು ಲಿಂಗಾಯತರ ಹುಡುಗ, ನೀವು ಬ್ರಾಹ್ಮಣರು. ಇವನ ಬಗ್ಗೆ ನಿಮಗೇನು ಇಷ್ಟೊಂದು ಆಸಕ್ತಿ?'



ಶಾಮರಾಯರು ಎಂದೂ ಯಾವುದಕ್ಕೂ ತಮ್ಮ ಸ್ವಂತಕ್ಕೆಂದು ಯಾರ ಹತ್ತಿರವೂ ಹೋದವರಲ್ಲ. ಪೂಜ್ಯ ಸ್ವಾಮೀಜಿಯವರು ಶಾಮರಾಯರ ಬಗ್ಗೆ ತುಂಬ ವಿಶ್ವಾಸವಿರಿಸಿಕೊಂಡವರು. ಅವರೇ ಹೀಗಂದ ಮೇಲೆ ಶಾಮರಾಯರು ಸ್ವಲ್ಪ ಕಟುವಾಗಿಯೇ ಹೇಳಿದರು. 'ಸ್ವಾಮೀಜಿ, ನನ್ನ ವಿದ್ಯಾರ್ಥಿಗಳು ನನ್ನ ಮಕ್ಕಳಿದ್ದಂತೆ. ಅವರು ನನ್ನ ಮಟ್ಟಿಗೆ ಜಾತ್ಯತೀತರು. ಅವರದು ವಿದ್ಯಾರ್ಥಿಗಳ ಜಾತಿ, ನಾನು ಅವರ ಗುರು'. ಸ್ವಾಮಿಗಳ ನಗುಮುಖ ಅರಳಿತು. ಸ್ವಾಮೀಜಿ ಹೇಳಿದರು: 'ನಾನು ಅದನ್ನು ಬಲ್ಲೆ, ಕೇವಲ ಹಾಸ್ಯಕ್ಕಾಗಿ ಹೇಳಿದೆ. ನಾಳೆಯಿಂದಲೇ ಈತ ನಮ್ಮ ಹಾಸ್ಟೆಲಿಗೆ ಬಂದು ಸೇರಿಕೊಳ್ಳಲಿ.'

ಅಂತೂ ಇಂತೂ ಶಾಮರಾಯರ ಕೃಪೆಯಿಂದ ಸುತ್ತೂರು ಮಠದ ವಿದ್ಯಾರ್ಥಿನಿಲಯದೊಳಗೆ ಪ್ರವೇಶ ಪಡೆದ ನಾನು, ಅಂದಿನಿಂದ ಮೂರು ವರ್ಷಗಳ ಕಾಲ ಅಶನ-ವಸತಿ ಸೌಲಭ್ಯಗಳನ್ನು ಪಡೆದುಕೊಳ್ಳುವ ಸುಯೋಗವೊಂದು ಪ್ರಾಪ್ತವಾಯಿತು. ಆ ಸುಯೋಗವೇ ಈ ಹೊತ್ತು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಸನ್ಮಾನಗೊಳ್ಳುವ ಸಂದರ್ಭಕ್ಕೆ ನಾಂದಿಯಾಯಿತೆಂದು ಭಾವಿಸುತ್ತೇನೆ.

ಜತೆಗೆ ಇಂದಿನ ಹಾಗೂ ಹಿಂದಿನ ಕೆಲವು ಅಭಿನಂದನ ಸಮಾರಂಭಗಳ ಹಿಂದೆ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನನ್ನ ಬಗ್ಗೆ ಇರಿಸಿರುವ ಪ್ರೀತಿ-ಅಭಿಮಾನ ಪೂರ್ವಕವಾದ ಆಶೀರ್ವಾದದ ಪರಿವೇಷವೊಂದು ಅಗೋಚರವಾಗಿ ಇದೆ ಎನ್ನುವುದು ನನ್ನ ಭಾಗ್ಯವಾಗಿದೆ.

ನವೋದಯ ಉತ್ಕರ್ಷಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ನಾನು ಈವರೆಗಿನ ವಿವಿಧ ಸಾಹಿತ್ಯ ಚಳವಳಿಗಳಿಂದ ನನ್ನ ಸೃಜನಶೀಲತೆಗೆ ಅಗತ್ಯವಾದ ಗುಣಾತ್ಮಕ ಅಂಶಗಳನ್ನು ಕರಗಿಸಿಕೊಳ್ಳುತ್ತ, ಅರಗಿಸಿಕೊಳ್ಳುತ್ತ ಸಾಹಿತ್ಯಕ್ಷೇತ್ರದಲ್ಲಿ ಅಲ್ಪಸ್ವಲ್ಪ ಸಾಧನೆ ಮಾಡಿದ್ದೇನೆ. ಕನ್ನಡ ಜನ ನನ್ನನ್ನು ಪ್ರೀತಿಯಿಂದ ಕವಿ ಎಂದು ಮೆಚ್ಚಿ ಒಪ್ಪಿಕೊಂಡಿದೆ. ನನ್ನ ಅಧ್ಯಾಪಕತನದ ಜೀವನದಲ್ಲಿ ನಾನು ಸಂಪಾದಿಸಿದ ಸಂಪತ್ತೆಂದರೆ, ನಾನು ಹೆಮ್ಮೆಪಟ್ಟುಕೊಳ್ಳಬಹುದಾದ ಹಾಗೂ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಬಹುಸಂಖ್ಯೆಯ ವಿದ್ಯಾರ್ಥಿಗಳೇ. ಕಾಲದಿಂದ ಕಾಲಕ್ಕೆ ಅಯಾಚಿತವಾಗಿ ಪ್ರಶಸ್ತಿಗಳು ನನಗೆ ಲಭ್ಯವಾಗಿವೆ. ಈ ಎಲ್ಲವನ್ನೂ ನೋಡಿದರೆ ನಾನು ಅದೃಷ್ಟವಂತನೆಂದೇ ಹೇಳಬೇಕು. ಒಂದು ರೀತಿಯಲ್ಲಿ ನಾನು ಕೊಟ್ಟದ್ದಕ್ಕಿಂತ ಪಡೆದದ್ದೇ ಹೆಚ್ಚೆಂದು ತೋರುತ್ತದೆ.

ಹೀಗೆ ಪಡೆದದ್ದರ ಪಟ್ಟಿಗೆ ಇಂದಿನ ಸಮಾರಂಭವೂ ಸೇರುತ್ತದೆ. ಅದಕ್ಕಾಗಿ ನಿಮಗೆ ಕೃತಜ್ಞತೆಯ ವಂದನೆ ಅಂದರೆ ಅಷ್ಟೆ ಸಾಕೆ? ನಿಜವಾಗಿಯೂ ಹೇಳಬೇಕಾದದ್ದು ಹೇಳಿದ್ದರೆ ಆಚೆಗೇ ಉಳಿದುಬಿಡುತ್ತದೆ. ನಮಸ್ಕಾರ.

□

# ಯಾವುದೂ ಸಣ್ಣದಲ್ಲ

**ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ**

ನಾನು ಪೂಜ್ಯಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳನ್ನು ಮೊದಲಿಗೆ ತೀರಾ ಹತ್ತಿರದಿಂದ ಕಂಡದ್ದು ಯಾವಾಗ ಎಂಬುದನ್ನು ಈಗ ನೆನೆಸಿಕೊಳ್ಳುತ್ತಿದ್ದೇನೆ. ನನ್ನ ವ್ಯಕ್ತಿತ್ವದ ಒಂದು ಭಾಗ, ದಾವಣಗೆರೆಯ ಜಯದೇವ ವಿದ್ಯಾರ್ಥಿನಿಲಯ, ತುಮಕೂರಿಗೆ ಹತ್ತಿರದ ಶ್ರೀ ಸಿದ್ಧಗಂಗಾಮಠ ಮತ್ತು ಮೈಸೂರಿನ ಸುತ್ತೂರು ವಿದ್ಯಾರ್ಥಿನಿಲಯ ಇವುಗಳ ಆಶ್ರಯ ಹಾಗೂ ಪೋಷಣೆಗಳಿಂದ ಬೆಳೆಯಿತಾದರೂ, ಆಯಾ ಮಠಗಳ ಶ್ರೀಗುರುಗಳನ್ನು ಕುರಿತ ಭಯ-ಭಕ್ತಿಗಳ ಕಾರಣದಿಂದಲೋ ಏನೋ, ಸಾಕಷ್ಟು ಗೌರವಪೂರ್ವಕವಾದ ದೂರದಲ್ಲೇ ನಿಂತು ವ್ಯವಹರಿಸುವ ಸಂಕೋಚಪ್ರವೃತ್ತಿ ನನ್ನದು. ಹೀಗಾಗಿ, ಸುತ್ತೂರು ಮಠದ ಹಿಂದಿನ ಜಗದ್ಗುರುಗಳನ್ನು ಹೇಗೋ ಹಾಗೆಯೇ ಇಂದಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳನ್ನೂ ಬಹುಕಾಲ ಇಂಥ 'ದೂರ'ದಿಂದ ಕಂಡೆನೇ ಹೊರತು, ನಾನಾಗಿಯೇ ಅವರ ಕಣ್ಣಿಗೆ ಬೀಳುವಷ್ಟು ಹತ್ತಿರಕ್ಕೆ ಹೋದವನೆ ಅಲ್ಲ. ಆದರೆ ಪೂಜ್ಯ ಸ್ವಾಮಿಗಳ ಕಾರುಣ್ಯ ಅವರ ಶ್ರೀಮಠದ 'ಜೋಳದ ಪಾಳಿಯ' ಬಹುಸಂಖ್ಯಾತರಲ್ಲಿ ಒಬ್ಬನಾದ ನನ್ನನ್ನು, ಸಮಯ ಬಂದರೆ ಹತ್ತಿರಕ್ಕೆ ಕರೆಯುವ ಸಂದರ್ಭವೊಂದು ಪ್ರಾಪ್ತವಾಯಿತು: 1989 ರ ಜೂನ್ 10, 11ನೇ ದಿನಾಂಕಗಳಲ್ಲಿ ಮೈಸೂರಿನ ಜೆಎಸ್‌ಎಸ್ ಕಾಲೇಜಿನಲ್ಲಿ, ಹಿಂದಿನ ಜಗದ್ಗುರುಗಳಾದ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಸ್ಥಾಪಿಸಿದ ಶ್ರೀ ಶಿವರಾತ್ರೀಶ್ವರ ದತ್ತಿನಿಧಿಯ ಆಶ್ರಯದಲ್ಲಿ ಏರ್ಪಡಿಸಲಾದ ಅಲ್ಲಮಪ್ರಭುವನ್ನು ಕುರಿತ ವಿಚಾರಸಂಕಿರಣದ ಗೋಷ್ಠಿಯೊಂದರ ಅಧ್ಯಕ್ಷತೆ ವಹಿಸುವಂತೆ, ಅದರ ವ್ಯವಸ್ಥಾಪಕರಿಂದ ಪತ್ರವೊಂದು ನನಗೆ ಬಂದಿತು. ಈ ವಿಚಾರಸಂಕಿರಣದ ಸಂದರ್ಭದಲ್ಲಿ, ಬಹುಶಃ ಮೊಟ್ಟಮೊದಲಿಗೆ ಪೂಜ್ಯ ಸ್ವಾಮಿಗಳನ್ನು ತೀರಾ ಹತ್ತಿರದಿಂದ ನಾನು ಕಂಡದ್ದು. ಗಂಭೀರವಾದ, ಆದರೆ ಯಾವ ಬಿಗುಮಾನವೂ ಇಲ್ಲದ ನಿಲುವಿನ, ಮಂದಸ್ಮಿತ ಮುಖಮುದ್ರೆಯ ಈ ಸ್ವಾಮಿಗಳನ್ನು ಕಂಡು ನನಗೆ ತುಂಬ ಸಂತೋಷವಾಯಿತು; ಜತೆಗೆ

---

(ಕೃಪೆ: ಕೃತಿ: 'ಯಾವುದೂ ಸಣ್ಣದಲ್ಲ': ಡಾ. ಜಿ.ಎಸ್. ಶಿವರುದ್ರಪ್ಪ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 2005)



ಅವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪಾಸು ಮಾಡಿದವರೆಂಬ ಸಂಗತಿ, ಅವರು ನನಗೆ ಇನ್ನೂ ಹೆಚ್ಚು ಪ್ರಿಯರಾಗಲು ಕಾರಣವಾಯಿತು.

ಈ ವಿಚಾರಸಂಕಿರಣದ ವೇಳೆಗೆ ಪೂಜ್ಯ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸುತ್ತೂರು ಸಂಸ್ಥಾನದ ಪಟ್ಟಾಧಿಕಾರವನ್ನು ವಹಿಸಿಕೊಂಡು ಕೇವಲ ಮೂರು ವರ್ಷಗಳಾಗಿದ್ದವು. ಹಿಂದಿನ ಮಹಾಸ್ವಾಮಿಗಳು ಕಟ್ಟಿ ಬೆಳೆಸಿದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳನ್ನು ವಿಸ್ತರಿಸುವ ಹಾಗೂ ಕಾಲದ ಅಗತ್ಯಕ್ಕೆ ತಕ್ಕ ಹಾಗೆ ಹೊಸ ಆಯಾಮಗಳಲ್ಲಿ ರೂಪಿಸುವ ಜವಾಬ್ದಾರಿ ಅವರ ಹೆಗಲೇರಿತ್ತು. ಅಂದು ಏರ್ಪಟ್ಟ ಅಲ್ಲಮಪ್ರಭುವನ್ನು ಕುರಿತ ವಿಚಾರಸಂಕಿರಣ ಕೂಡ ಹಿಂದಿನ ಮಹಾಸ್ವಾಮಿಗಳು ಸ್ಥಾಪಿಸಿದ ದತ್ತಿನಿಧಿಯ ಮೊದಲ ಕಾರ್ಯಕ್ರಮವಾಗಿತ್ತು. ಈ ಸಂಕಿರಣದ ಮುಕ್ತಾಯ ಸಮಾರಂಭದ 'ಆಶೀರ್ವಚನ' ಕಾರ್ಯಕ್ರಮ ಪೂಜ್ಯ ಶ್ರೀ ದೇಶಿಕೇಂದ್ರ ಮಹಾಸ್ವಾಮಿಗಳ ಪಾಲಿನದಾಗಿತ್ತು. ಈ ಸಂದರ್ಭದಲ್ಲಿ ನನ್ನ ಗಮನವನ್ನು ಸೆಳೆದ ಸಂಗತಿ ಎಂದರೆ: ಶ್ರೀ ಸ್ವಾಮಿಗಳು ವಿಚಾರಸಂಕಿರಣದ ಎಲ್ಲ ಗೋಷ್ಠಿಗಳಲ್ಲೂ ಉಪಸ್ಥಿತರಾಗಿದ್ದದ್ದು ಮಾತ್ರವಲ್ಲದೆ, ಪ್ರತಿಯೊಬ್ಬ ಉಪನ್ಯಾಸಕರ ಮಾತಿನಲ್ಲಿ ತಮಗೆ ಸೂಕ್ತ ಎಂದು ಕಂಡ ಅಂಶಗಳನ್ನು ಒಬ್ಬ ನಿಷ್ಠಾವಂತ ವಿದ್ಯಾರ್ಥಿಯ ಹಾಗೆ ಟಿಪ್ಪಣಿ ಮಾಡಿಕೊಳ್ಳುತ್ತ ಇದ್ದದ್ದು ಮತ್ತು ತಮ್ಮ ಸಮಾರೋಪ ಭಾಷಣದಲ್ಲಿ ಆ ಎಲ್ಲ ಸಂಗತಿಗಳನ್ನು ಕ್ರೋಢೀಕರಿಸಿ ಸಮೀಕ್ಷೆ ಮಾಡಿದ್ದು. ಅಲ್ಲಿಂದೀಚೆಗೆ ನಾನು ಅವರು 'ಸಾನ್ನಿಧ್ಯ' ವಹಿಸಿದ ಎಷ್ಟೋ ಸಮಾರಂಭಗಳನ್ನು ನೋಡಿದ್ದೇನೆ. ಯಾವುದೇ ಕಾರ್ಯಕ್ರಮಕ್ಕೆ ನಿಗದಿತ ಸಮಯಕ್ಕೆ ಸರಿಯಾಗಿ ಬಂದು ಕೂತುಕೊಳ್ಳುವುದರಿಂದ ಮೊದಲುಗೊಂಡು, ಹೇಳಬೇಕಾದ್ದನ್ನು ಉಚಿತವಾಗಿ ಮತ್ತು ಅಚ್ಚುಕಟ್ಟಾಗಿ ಹೇಳಿ ಸಭೆಯ ಘನತೆಯನ್ನು ಕಾಯ್ದುಕೊಳ್ಳುವ ಅವರ ಶಿಸ್ತನ್ನು ನಾನು ತುಂಬ ಮೆಚ್ಚಿಕೊಂಡಿದ್ದೇನೆ. ಅವರ ಪ್ರೀತಿಯ ಆಹ್ವಾನದ ಮೇರೆಗೆ ಸಾಕಷ್ಟು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. 'ನೀವು ನಮ್ಮ ಸುತ್ತೂರನ್ನು ನೋಡಿಯೇ ಇಲ್ಲವಲ್ಲ? ಬನ್ನಿ. ಒಳ್ಳೆಯ ಗೆಸ್ಟ್ ಹೌಸ್ ಇದೆ. ಎಷ್ಟು ದಿನಗಳಾದರೂ ಇದ್ದು ನಿಮ್ಮ ಬರವಣಿಗೆಯ ಕೆಲಸವನ್ನು ನಿರ್ವಹಿಸಲು ಸರಿಯಾದ ಸ್ಥಳ'- ಎಂದು ಸ್ವಾಮಿಗಳು ಹಲವು ಸಲ ಆಹ್ವಾನಿಸಿದ್ದಾರೆ. ಅದಿನ್ನೂ ಸಾಧ್ಯವಾಗಿಲ್ಲ. ಆದರೆ ಈಚೆಗೆ ಒಂದೆರಡು ಸಲ ಒಂದು ದಿನದ ಕಾರ್ಯಕ್ರಮಕ್ಕೆ ಸುತ್ತೂರಿಗೆ ನಾನು ಹೋಗಬೇಕಾಗಿ ಬಂತು. ಕಪಿಲಾನದೀತೀರದ ತುಂಬ ಪ್ರಶಾಂತವಾದ ಗ್ರಾಮ ಸುತ್ತೂರು. ಸುತ್ತೂರು ಶ್ರೀಮಠದ ಪರಂಪರೆಯ ಮೂಲ ಕರ್ತೃವಿನ ಗದ್ದುಗೆ ಇರುವ ಸ್ಥಳ. ಅಲ್ಲೇ ಅನತಿ ದೂರದಲ್ಲಿ ನೋಡುತ್ತೇನೆ; ಹೊಸ ಬಗೆಯ ವಾಸ್ತುಶೈಲಿಯಲ್ಲಿ ನಿರ್ಮಿತವಾದ ಎರಡು ಬೃಹದಾಕೃತಿಯ ಕಟ್ಟಡಗಳು ಮೈತಳೆದು ನಿಂತಿವೆ. ಅವುಗಳಲ್ಲಿ ಒಂದು ಶಾಲೆ ಮತ್ತೊಂದು ವಿದ್ಯಾರ್ಥಿನಿಲಯ. ಆಧುನಿಕವಾದ ಎಲ್ಲ ಅನುಕೂಲಗಳನ್ನೂ ಒದಗಿಸುವ ಈ ಅಶನ-

ವಸತಿ-ಶಿಕ್ಷಣ ಸಮುಚ್ಚಯಗಳಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ಬಂದ ಎರಡು ಸಾವಿರದ ಐನೂರಕ್ಕೂ ಹೆಚ್ಚಿನ ಬಡಮಕ್ಕಳು ವಾಸಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಕೂಡಾ ಈ ಮಾದರಿಯ ವ್ಯವಸ್ಥೆಯನ್ನು ಒದಗಿಸಲು ಸಾಧ್ಯವಿಲ್ಲದ ಈ ಹೊತ್ತಿನ ಸಂದರ್ಭದಲ್ಲಿ ಪೂಜ್ಯ ದೇಶಿಕೇಂದ್ರ ಸ್ವಾಮಿಗಳು ಯಾವುದೇ ಜಾತಿಯ ಪರಿಗಣನೆಯಿಲ್ಲದೆ ಎರಡು ಸಾವಿರದ ಐನೂರಕ್ಕೂ ಮೀರಿದ ಸಂಖ್ಯೆಯ ತೀರಾ ಬಡವರಾದ ಮಕ್ಕಳಿಗೆ, ಈ ಬಗೆಯ ಸೌಲಭ್ಯ ಮತ್ತು ಅವಕಾಶಗಳನ್ನು ಇಂಥ ಗ್ರಾಮಾಂತರ ಪರಿಸರದಲ್ಲಿ ಕಲ್ಪಿಸಿರುವುದು ಒಂದು ಪವಾಡವೇ ಸರಿ. ನಾನು ಅಂದು ಭಾಗವಹಿಸಿದ ಕಾರ್ಯಕ್ರಮದ ಹೊತ್ತಿನಲ್ಲಿ, ಅಷ್ಟೂ ಮಕ್ಕಳು ನೀಲಿಯ ಬಣ್ಣದ ಸಮವಸ್ತ್ರಗಳನ್ನು ತೊಟ್ಟು ಶಾಲೆಯ ಅಂಗಳದಲ್ಲಿ ಕ್ರಮಬದ್ಧವಾಗಿ ಕೂತದ್ದನ್ನು ಕಂಡಾಗ ನನಗೆ ಅನ್ನಿಸಿತು: ಸುತ್ತೂರು ಸ್ವಾಮಿಗಳ ಕರುಣೆಯ ಕಿರಣದಲ್ಲಿ ಅರಳಿದ ನೀಲಿಯ ಹೂವಿನ ತೋಟ ಇದು!

ಪೂಜ್ಯ ದೇಶಿಕೇಂದ್ರ ಮಹಾಸ್ವಾಮಿಗಳ ಈ ಜೀವಕಾರುಣ್ಯದ, ಮಾನವೀಯ ಅಂತಃಕರಣ ಅನಾವರಣಗೊಂಡ ಅಪರೂಪದ ಸಂದರ್ಭವೊಂದನ್ನು ನಾನೆಂದೂ ಮರೆಯಲಾರೆ. ಸುಮಾರು ಹತ್ತು ವರ್ಷದ ಹಿಂದಿನ ಮಾತು. 1994ನೆಯ ಇಸವಿ. ತಿಂಗಳು ಯಾವುದೆಂದು ನೆನಪಿಲ್ಲ. ಈ ವೇಳೆಗಾಗಲೇ ಪೂಜ್ಯಶ್ರೀ ದೇಶಿಕೇಂದ್ರ ಸ್ವಾಮಿಗಳು ತಮ್ಮ ಅಪೂರ್ವ ಕ್ರಿಯಾಶೀಲತೆಯಿಂದ ಸಮಾಜ ಶಿಕ್ಷಣ ಹಾಗೂ ಸಂಸ್ಕೃತಿಗೆ ಸಂಬಂಧಪಟ್ಟ ಅದೆಷ್ಟೋ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು, ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮಠಾಧೀಶರೆಂಬ ಮನ್ನಣೆಗೆ ಪಾತ್ರರಾಗಿದ್ದರು. ನಾನು, ನನ್ನ ಸ್ವಂತ ಕೆಲಸಗಳ ಸಲುವಾಗಿ ಯಾವತ್ತೂ ಯಾವ ಮಂತ್ರಿಮಹೋದಯರನ್ನಾಗಲೀ, ಅಧಿಕಾರಿಗಳನ್ನಾಗಲೀ, ಮಠಾಧೀಶರನ್ನಾಗಲೀ ಹೋಗಿ ನೋಡಲು ನಿರಾಕರಿಸಿ ಬದುಕಿದ ನಾನು, ಒಬ್ಬ ಬಡ ಹುಡುಗಿಯ ಪರವಾಗಿ ಪೂಜ್ಯ ಸ್ವಾಮೀಜಿಯವರನ್ನು ನೋಡಲೇಬೇಕಾದ ಸಂದರ್ಭವೊಂದು ನನಗೆ ಒದಗಿತು.

ಈ ಹುಡುಗಿ ಬೆಂಗಳೂರಿನ ಪದ್ಮನಾಭನಗರ ಬಡಾವಣೆಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದವಳು. ಏಳೆಂಟು ವರ್ಷ ವಯಸ್ಸು. ಎಳೆಯಂದಿನಲ್ಲೇ ತಾಯಿಯನ್ನು ಕಳೆದು ಕೊಂಡವಳು; ತಂದೆ ಮಹಾ ಬೇಜವಾಬ್ದಾರಿಯ ಮನುಷ್ಯ; ಐದಾರು ಮಕ್ಕಳು ಬೇರೆ; ಅವುಗಳಲ್ಲಿ ಒಬ್ಬಳಾದ ಈ ಹುಡುಗಿಗೆ, ಮಲತಾಯಿಯ ಕಿರುಕುಳ; ವಾಸಕ್ಕೆ ಎಂಥದೋ ಒಂದು ಇಕ್ಕಟ್ಟಾದ ಮನೆ. ಬಡತನದ ಕಾರಣದಿಂದ ಸ್ಕೂಲು ಬಿಡಿಸಿ ಮಗಳನ್ನು ಯಾವುದೋ ಅನಾಥಾಲಯಕ್ಕೆ ಸೇರಿಸುವ ಯೋಚನೆ ಅಪ್ಪನದು. ಇದನ್ನು ತಿಳಿದ ಆ ಶಾಲೆಯ ಉಪಾಧ್ಯಾಯಿನಿಯೊಬ್ಬರು, ಮನೆಗೆಲಸ ಮಾಡಿಕೊಟ್ಟು ನೆರವಾಗಲು ಹುಡುಗಿಯೊಬ್ಬಳು ಬೇಕೆಂದು ನಮ್ಮ ಮನೆಯವರು ಅವರಿವರಲ್ಲಿ



ವಿಚಾರಿಸುತ್ತಿದ್ದುದನ್ನು ತಿಳಿದು, ನಮ್ಮ ಮನೆಗೆ ಬಂದು 'ಈ ಹುಡುಗಿಯನ್ನು ನಿಮ್ಮ ಮನೆಗೆ ಕಳಿಸುತ್ತೇನೆ. ಸಣ್ಣಪುಟ್ಟ ಕೆಲಸ ಮಾಡಿಕೊಂಡು ಇರುತ್ತಾಳೆ. ಜತೆಗೆ ಸ್ಕೂಲಿಗೂ ಹೋಗಿ ಬರುತ್ತಾಳೆ. ಮನೆಯಲ್ಲಿ ತಾಯಿಯಿಲ್ಲ; ಬಡತನ ಬೇರೆ ಎಂದು ನಮ್ಮನ್ನು ಒಪ್ಪಿಸಿದರು. ತುಂಬ ಲವಲವಿಕೆಯ ಹುಡುಗಿ. ಒಪ್ಪಿಕೊಂಡೆವು. ಐದಾರು ವರ್ಷ ಅವಳ ಶಿಕ್ಷಣದ ಜವಾಬ್ದಾರಿಯನ್ನು ನಾನೇ ವಹಿಸಿಕೊಂಡೆ. ಬಿಡುವಿನ ವೇಳೆಯಲ್ಲಿ ಮನೆಗೆಲಸವನ್ನು ಮಾಡುತ್ತಾ ಸ್ಕೂಲಿಗೂ ಹೋಗುತ್ತ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪಾಸುಮಾಡಿಯೇಬಿಟ್ಟಳು. ಮುಂದೆ ಅವಳು ಓದಲಿ ಎನ್ನುವುದು ನಮ್ಮ ಅಪೇಕ್ಷೆಯಾದರೂ ಆಕೆ ಒಪ್ಪಲಿಲ್ಲ. "ಅಂಕಲ್ ಮೊದಲು ನನಗೆ ಏನಾದರೊಂದು ಕೆಲಸ ಕೊಡಿಸಿ, ಮನೆಯಲ್ಲಿ ನನ್ನ ಅಪ್ಪನಿಗೊಂದಷ್ಟು ಸಹಾಯವಾದೀತು. ಇನ್ನೂ ಓದಬೇಕಾದ ತಮ್ಮಂದಿರಿದ್ದಾರೆ" ಎಂದು ಪಟ್ಟುಹಿಡಿದಳು. ಕೇವಲ ಎಸ್‌ಎಸ್‌ಎಲ್‌ಸಿ ಈ ಕಾಲಕ್ಕೆ ಯಾವ ಲೆಕ್ಕ? ಆದರೂ ಯಾರ್‍ಯಾರನ್ನೋ ವಿಚಾರಿಸಿದೆ. ಪ್ರಯೋಜನವಾಗಲಿಲ್ಲ. ಆ ವೇಳೆಗೆ ಬೆಂಗಳೂರಿನ ಬನಶಂಕರಿ ಬಡಾವಣೆಯೊಳಗೆ ಸುತ್ತೂರು ಸ್ವಾಮಿಗಳ 'ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್' ಹೊಸ ಕಟ್ಟಡದ ಸಮೇತ ಪ್ರಾರಂಭವಾಯಿತು. ಈ ಶಾಲೆಗೆ ಸಹಜವಾಗಿಯೇ ಈ ಹಂತದಲ್ಲಿ ಕಛೇರಿ ಕೆಲಸಕ್ಕೆ ಕೆಳದರ್ಜೆಯ ನೌಕರರನ್ನು ತೆಗೆದುಕೊಳ್ಳುವ ಅಗತ್ಯ ಇರಬಹುದೆಂದು ಭಾವಿಸಿ, ಯಾಕೆ ನಾನೇ ಹೋಗಿ ಪೂಜ್ಯ ಸ್ವಾಮಿಗಳನ್ನು ನೋಡಬಾರದು ಎನ್ನಿಸಿತು. ಮೈಸೂರಿಂದ ಸ್ವಾಮಿಗಳು ಬೆಂಗಳೂರಿಗೆ ಬಂದಾಗ 'ಸುತ್ತೂರು ಸದನ'ದಲ್ಲಿ ಉಳಿದುಕೊಳ್ಳುತ್ತಾರೆ ಎನ್ನುವುದನ್ನು ತಿಳಿದು ಅಂಥ ಒಂದು ದಿನ ಸುತ್ತೂರು ಸದನದಲ್ಲಿ ಸ್ವಾಮೀಜಿಯವರನ್ನು ಭೇಟಿಯಾಗಲು ಹೋದೆ. ಬಹಳ ಜನ ಸಂದರ್ಶಕರಿದ್ದರು. ನನ್ನ ಸರದಿ ಬಂದಾಗ ಹೋಗಿ ಕಂಡೆ. 'ಏನು ಸಮಾಚಾರ? ಈಚೆಗೆ ಏನು ಬರೆಯುತ್ತಿದ್ದೀರಿ' ಇತ್ಯಾದಿ ವಿಚಾರಿಸಿದರು. ಆದರೆ ನಾನು ಪ್ರಸ್ತಾಪಿಸಲೆಂದು ಬಂದ ವಿಷಯವನ್ನು ಹೇಗೆ ಹೇಳುವುದೆಂದು ತೋಚದೆ, ಹಿಂಜರಿಕೆಯಿಂದ ಹಿಂದಕ್ಕೆ ಬಂದೆ. ಇದಾದ ಹದಿನೈದು ದಿನಗಳ ನಂತರ ಬೆಂಗಳೂರಿನಲ್ಲಿ ಒಂದು ಕಡೆ ಸ್ವಾಮಿಗಳ ಕಾರ್ಯಕ್ರಮವಿತ್ತು. ಸಭೆ ಮುಗಿದಾಗ ಕಾಣಿಸಿಕೊಂಡು 'ತಮ್ಮ ಜತೆ ತುರ್ತಾಗಿ ಮಾತನಾಡಬೇಕಾಗಿದೆ' ಎಂದೆ. ಅವರು ನಕ್ಕು ಅದಕ್ಕೇನಂತೆ, ನಾಳೆ ಬೆಳಿಗ್ಗೆ ಸುತ್ತೂರು ಸದನದಲ್ಲಿ ಎಂಟೂವರೆ ಗಂಟೆಗೆ ಬಂದು ನೋಡಿ ಎಂದರು. ಹೋದೆ. ವಿಷಯವೇನೆಂಬುದನ್ನು ಹೇಳಿದೆ. ಜೆಎಸ್‌ಎಸ್ ಪಬ್ಲಿಕ್ ಸ್ಕೂಲಿನ ಕಛೇರಿ ಸಿಬ್ಬಂದಿಯಲ್ಲಿ ಕ್ಲರ್ಕಾಗಿಯೋ, ಅದೂ ಆಗದಿದ್ದರೆ ಅಟೆಂಡರ್ ಆಗಿಯೋ ಈ ಹುಡುಗಿಗೆ ಅವಕಾಶಮಾಡಿಕೊಡಿ ಎಂದೆ. ಅವರೆಂದರು ಅಟೆಂಡರ್ ಕೆಲಸ ಬೇಡ; ಕ್ಲರ್ಕ್ ಕೆಲಸಕ್ಕೂ ಈಗ ಗರಿಷ್ಠ ವಿದ್ಯಾರ್ಹತೆ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪಾಸಾಗಿದೆ ಅನ್ನುತ್ತೀರಿ. ಯಾವುದಾದರೂ 'ಜಾಬ್ ಓರಿಯಂಟೆಡ್' ಶಿಕ್ಷಣ ಕೊಡಿಸಿದರೆ ಒಳ್ಳೆಯದು.

ಒಂದು ಕೆಲಸ ಮಾಡಿ ಈ ಹುಡುಗಿಯನ್ನು ಮೈಸೂರಿಗೆ ಕರೆದುಕೊಂಡು ಬನ್ನಿ. ನಮ್ಮ ಕಾಲೇಜಿನಲ್ಲೇ ಯಾವುದಾದರೂ ವೃತ್ತಿ ಶಿಕ್ಷಣ ತರಬೇತಿಗೆ ಸೇರಿಸೋಣ ಎಂದರು. ನಾನೆಂದೆ 'ಅಷ್ಟಾದರೆ ಸಾಕು ಸ್ವಾಮೀಜಿ, ಈ ಶಿಕ್ಷಣದ ಫೀಜು ಇತ್ಯಾದಿಗಳ ಜವಾಬ್ದಾರಿ ನನಗಿರಲಿ. ಆದರೆ ಅವಳ ಅಶನ-ವಸತಿಯದೊಂದೇ ಸಮಸ್ಯೆ'. 'ಇರಲಿ ಏನಾದರೂ ಮಾಡೋಣ. ಮುಂದಿನ ವಾರವೇ ಬನ್ನಿ. ಈ ತಿಂಗಳ ಕೊನೆಯಲ್ಲಿ ನಾನು ಅಮೆರಿಕಾ ಪ್ರವಾಸ ಹೊರಟಿದ್ದೇನೆ' ಎಂದರು ಸ್ವಾಮಿಗಳು.

ವಾರವೊಂದರ ನಂತರ ಆ ಹುಡುಗಿಯನ್ನು ಕರೆದುಕೊಂಡು ಮೈಸೂರಿಗೆ ಹೋಗಿ ಮಠದಲ್ಲಿ ಸ್ವಾಮಿಗಳನ್ನು ಭೇಟಿಯಾದೆ. 'ಮೊದಲು ಊಟಮಾಡಿ' ಎಂದರು. ಅನಂತರ ಕಾಲೇಜಿನ ಪ್ರಿನ್ಸಿಪಾಲರಿಗೆ ಫೋನ್ ಮಾಡಿದರು. ಹೋದೆ. ಪ್ರಿನ್ಸಿಪಾಲ್ ಸುಬ್ಬಣ್ಣನವರು ನನ್ನ ಹಳೆಯ ಪಳಕೆಯವರು. 'ಬುದ್ಧಿಯವರು ಅಪ್ಪಣೆ ಮಾಡಿದ ಮೇಲೆ ಮುಗೀತು. ನೀವು ನಿಶ್ಚಿಂತೆಯಿಂದ ಇರಿ' ಎಂದರು. ಲ್ಯಾಬ್ ಟೆಕ್ನೀಷಿಯನ್ ಕೋರ್ಸ್‌ಗೆ ಸೇರಿಸಿ ಕೊಂಡರು. ಸಾಕಷ್ಟು ಡೊನೇಷನ್ ಕೊಟ್ಟು ಸೇರುವವರು ಸಾಲುನಿಂತ ಈ ಕೋರ್ಸಿಗೆ, ಸ್ವಾಮಿಗಳ ಕೃಪೆಯಿಂದ ಈ ಹುಡುಗಿಗೆ ಅನಾಯಾಸವಾಗಿ ಸೀಟು ಸಿಕ್ಕಿತು. ಫೀಜು ಕಟ್ಟಿ, ಆ ಹುಡುಗಿಯನ್ನು ಕರೆದುಕೊಂಡು ಮಠಕ್ಕೆ ಬಂದೆ. ಸ್ವಾಮಿಗಳ ಜತೆ ಯಾರೋ ಮಂತ್ರಿಗಳು ಮಾತನಾಡುತ್ತಿದ್ದಾರೆ, ಸ್ವಲ್ಪ ಕಾಯಿರಿ ಎಂದರು ಬಾಗಿಲಲ್ಲಿದ್ದವರು. ಒಂದರ್ಧ ಘಂಟೆಯನಂತರ ಮಾನ್ಯ ಮಂತ್ರಿಗಳು ತಮ್ಮ ಪರಿವಾರ ಸಮೇತ ಹೊರಗೆ ಬಂದು ದೊಡ್ಡ ಕಾರುಗಳಲ್ಲಿ ಕೂತು ಧೂಳೆಬ್ಬಿಸಿಕೊಂಡು ಹೋದರು. ನಾನು ಒಳಗೆ ಹೋಗಿ ಸ್ವಾಮಿಗಳನ್ನು ಕಂಡು ವಿಷಯವನ್ನು ವರದಿ ಮಾಡಿದೆ. ಅವರೆಂದರು: 'ಒಳ್ಳೆಯದು. ನೀವತ್ತ ಹೋದಮೇಲೆ ಯೋಚನೆ ಮಾಡಿದೆ, ಈ ಹುಡುಗಿಗೆ ಯಾವುದಾದರೂ ಹಾಸ್ಟಲ್‌ನಲ್ಲಿ ಅವಕಾಶ ಮಾಡಿಕೊಡೋಣ.' ಹೀಗೆ ಹೇಳಿ ಫೋನ್ ತೆಗೆದುಕೊಂಡು ಸರಸ್ವತಿಪುರದ ಮಹಿಳಾ ವಿದ್ಯಾರ್ಥಿನಿನಿಲಯದ ವಾರ್ಡನ್‌ಗೆ ಈ ಹುಡುಗಿಯನ್ನು ಸೇರಿಸಿಕೊಳ್ಳಲು ಆದೇಶಿಸಿ 'ಅವಳಿಂದ ಅವಳ ಶಿಕ್ಷಣ ಮುಗಿಯುವ ವರೆಗೂ ಯಾವುದೇ ಶುಲ್ಕ ತೆಗೆದುಕೊಳ್ಳತಕ್ಕದ್ದಲ್ಲ' ಎಂದು ಅಪ್ಪಣೆ ಮಾಡಿದರು. ನನಗೆ ತುಂಬ ಆಶ್ಚರ್ಯವಾಯಿತು. ಇಷ್ಟೊಂದು ದೇಶೋ ವಿಶಾಲವಾದ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವ ಹಾಗೂ ನಿರ್ವಹಿಸುವ ಜವಾಬ್ದಾರಿ; ಬೆಳಿಗ್ಗೆಯಿಂದ ಸಂಜೆವರೆಗೆ ಬಿಡುವಿಲ್ಲದ ಕಾರ್ಯಕ್ರಮಗಳ ಭರಾಟೆ; ಬರುವ ಹೋಗುವ ಸಂದರ್ಶಕರೊಂದಿಗೆ ಮಾತುಕತೆ; ಜತೆಗೆ ವಿದೇಶ ಪ್ರವಾಸದ ಸಂದರ್ಭ ಬೇರೆ. ಈ ಎಲ್ಲದರ ನಡುವೆಯೂ ಒಬ್ಬ ಬಡ ಹುಡುಗಿಯ ಶಿಕ್ಷಣದ ವ್ಯವಸ್ಥೆಯ ಬಗ್ಗೆ ಅದೇ ತೂಕದ ಕಾಳಜಿ. ಇದಲ್ಲವೆ ನಿಜವಾದ ಔದಾರ್ಯ ಎನ್ನಿಸಿತು. ಮನಸ್ಸು ಕೃತಜ್ಞತೆಯಿಂದ ಮೂಕವಾಯಿತು.

ಸಾಕಷ್ಟು ಸ್ಥಿತಿವಂತರ ಮಕ್ಕಳಿಗೆ ಉದ್ದೇಶಿತವಾದ, ತಿಂಗಳಿಗೆ ನಾನೂರು - ಐನೂರು ರೂಪಾಯಿಗಳ ಖರ್ಚು ತಗಲುವ, ಈ ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ, ಈ ಬಡ ಹುಡುಗಿ ಉಚಿತವಾದ ಅವಕಾಶವನ್ನು ಪಡೆದು ಮೂರು ವರ್ಷ ಓದಿ, ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದಳು. ಅಷ್ಟೂ ವರ್ಷ ಆ ಹುಡುಗಿಯ ಕಾಲೇಜಿನ ಫೀಜು ಇತ್ಯಾದಿಗಳ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು ನನಗೇನೂ ಕಷ್ಟವಾಗಲಿಲ್ಲ. ಈ ವೃತ್ತಿಶಿಕ್ಷಣದಿಂದ ಈ ಹುಡುಗಿಗೆ ಕೊಡಗಿನ ಆಸ್ಪತ್ರೆಯೊಂದರಲ್ಲಿ ಕೆಲಸ ಸಿಕ್ಕಿತು. ಒಂದೂವರೆ ವರ್ಷದ ಹಿಂದೆ ಮದುವೆಯೂ ಆಯಿತು.



ಕೆಲವು ತಿಂಗಳ ಹಿಂದೆ ಮೈಸೂರಿನ ಕಾರ್ಯಕ್ರಮವೊಂದಕ್ಕೆ ಹೋದಾಗ ಪೂಜ್ಯ ಸ್ವಾಮಿಗಳನ್ನು ಭೇಟಿಯಾಗುವ ಸಂದರ್ಭ ಬಂತು. ಮಾತಿನ ನಡುವೆ ಸ್ವಾಮೀಜಿ ಕೇಳಿದರು. 'ಹಿಂದೆ ನೀವು ಕರೆದುಕೊಂಡು ಬಂದಿದ್ದಿರಲ್ಲ, ಆ ಹುಡುಗಿ ಹೇಗಿದ್ದಾಳೆ, ಎಲ್ಲಿದ್ದಾಳೆ?' ನಾನೆಂದೆ 'ಸ್ವಾಮೀಜಿ ಸುಮಾರು ಹತ್ತು ವರ್ಷಗಳ ಹಿಂದಿನ ಸಂಗತಿ ಇದು. ಇಷ್ಟು ಸಣ್ಣ ವಿಷಯವನ್ನು ನಿಮ್ಮ ಈ ಅಸಂಖ್ಯ ಕಾರ್ಯಭಾರಗಳ ನಡುವೆಯೂ ನೆನಪಿಟ್ಟುಕೊಂಡಿದ್ದೀರಲ್ಲ, ಹೇಗೆ?' ಎಂದೆ. ಅವರು ನಕ್ಕು ಹೇಳಿದರು: 'ಯಾವುದೂ ಸಣ್ಣದಲ್ಲ'.

ಹೌದು, ದೊಡ್ಡವರಿಗೆ ಯಾವುದೂ ಸಣ್ಣದಲ್ಲ. ಯಾವುದೂ ಸಣ್ಣದಲ್ಲ ಎಂದು ತಿಳಿದವರು ಮಾತ್ರ ದೊಡ್ಡದನ್ನು ಕಟ್ಟಬಲ್ಲರು. ದೊಡ್ಡದಾಗಿ ಬದುಕಬಲ್ಲರು.

* (1994 ರ ಸಂದರ್ಭದಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪನವರಿಗೆ ಪರಮಪೂಜ್ಯ ಜಗದ್ಗುರುಗಳವರೊಡನೆ ಆದಂತಹ ಒಂದು ಅನುಭವದ ದಾಖಲೆ)

□

**ಏನು ನಿರುಪಮ ಸೊಬಗು**

ಏನು ನೀರುಪಮ ಸೊಬಗು ಓಹ್ ಎಂಥ ಚೆಲುವಿನ ಮೋಹನ !
ನನ್ನ ಹೃದಯದ ಮೂರ್ತಿ ಬಂದನು ಎದೆಯ ಗುಡಿಸಿಲಿಗೀ ದಿನ.

ಎದೆಯೊಳೊಲವಿನ ಚಿಲುಮೆ ಚಿಮ್ಮಿವೆ ಹತ್ತು ಕಡೆಗೂ ಸುಮ್ಮನೆ !
ಯಾವ ಸಂಪದವನ್ನು ಸುರಿಯಲಿ ಹೇಳು ನಿನ್ನೀ ಪದದೆಡೆ !

ನನ್ನ ಹರಣವೆ ಶರಣು ನಿನಗೆ; ನನ್ನ ಆತ್ಮವೆ ನಿನ್ನದು.
ಮತ್ತೆ ಏನನು ನೀಡಲಯ್ಯಾ ? ನನ್ನದೆಲ್ಲವು ನಿನ್ನದು.

**- ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ**

# ವಿದ್ವನ್ಮಣಿ ಎನ್. ಬಸವಾರಾಧ್ಯ

**ಡಾ. ಎಂ. ಚಿದಾನಂದಮೂರ್ತಿ**

ತೀರ ಈಚೆಗೆ, ಅಂದರೆ ಡಿ.6 ರಂದು ಕೈಲಾಸವಾಸಿಯಾದ ಎನ್. ಬಸವಾರಾಧ್ಯರು ಸಾಮಾನ್ಯ ಕನ್ನಡಿಗರಿಗೆ ಅಷ್ಟು ಪರಿಚಿತರಲ್ಲದಿದ್ದರೂ ಕನ್ನಡ ವಿದ್ವತ್ ಕ್ಷೇತ್ರಕ್ಕೆ ಮಾತ್ರ ಸುಪರಿಚಿತರು. ಅವರ ನಿಧನದ ವಾರ್ತೆ ಅಂತಹ ಸುದ್ದಿಯಾಗದೇ ಇರುವುದಕ್ಕೆ ಅದು ಒಂದು ಕಾರಣ. ಅವರು ವೃತ್ತಪತ್ರಿಕೆಗಳಿಗೆ ಲೇಖನಗಳನ್ನು ಬರೆದವರೇ ಅಲ್ಲ; ಜನಪ್ರಿಯ, ಆಕರ್ಷಕ ಮಾತುಗಾರರೂ ಅಲ್ಲ. ಆದರೆ ತಮ್ಮ ಮನೆಯಲ್ಲಿ ಸದಾ ಅಧ್ಯಯನಶೀಲರಾಗಿದ್ದ ಅತ್ಯಂತ ಶ್ರೇಷ್ಠ ವಿದ್ವಾಂಸರು ಅವರು. ಅದನ್ನು ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶ. ಈ ಲೇಖನವು ಅವರಿಗೆ ನಾನು ಅರ್ಪಿಸುವ ಸ್ನೇಹಪೂರ್ವಕ ಗೌರವ ಪುಷ್ಪಾಂಜಲಿ.

ಅವರನ್ನು ಎರಡು ವಾರಗಳ ಹಿಂದೆ ಭೇಟಿಮಾಡಿದಾಗ ಅವರು ಹಲವು ದೈಹಿಕ ಕಾಯಿಲೆಗಳಿಗೆ ಒಳಗಾಗಿ ಸಂಪೂರ್ಣ ನಿತ್ರಾಣರಾಗಿ ಹಾಸಿಗೆಹಿಡಿದು ಮಲಗಿದ್ದರು. ಕಣ್ಣಿ ದೃಷ್ಟಿ ಸಂಪೂರ್ಣ ಹಾಳಾಗಿತ್ತು; ಸದಾ ಹಾಸಿಗೆ ಮೇಲೆ ಮಲಗಿರುತ್ತಿದ್ದ ಅವರ ಮಾತಿನ ಶಕ್ತಿಯೂ ಪೂರ್ತಿ ನಿಂತುಹೋಗಿತ್ತು. ನಾನು ಅವರ ಕಿವಿ ಬಳಿ ಗಟ್ಟಿಯಾಗಿ ನನ್ನ ಹೆಸರು ಹೇಳಿದಾಗ ಬಿಕ್ಕಿ ಬಿಕ್ಕಿ ಅತ್ತರು. ನನಗೂ ದುಃಖ ಉಮ್ಮಳಿಸಿ ಬಂದು ಅತ್ತುಬಿಟ್ಟೆ. ನಾವು ಕೆಲವರು ಸರ್ಕಾರಕ್ಕೆ ಪತ್ರ ಬರೆದು ಅವರ ವೈದ್ಯಕೀಯ ಖರ್ಚನ್ನು ವಹಿಸಿಕೊಳ್ಳಲು ಮನವಿ ಮಾಡಿಕೊಂಡೆವು. ಅವರು ಇನ್ನು ಹೆಚ್ಚು ಕಾಲ ಉಳಿಯಲಾರರು ಎಂಬ ನನ್ನ ಸಂದೇಹ ನಿಜವಾಯಿತು. ಅವರು ಕಣ್ಮುಚ್ಚಿದರೂ ಅವರು ಕನ್ನಡ ವಿದ್ವತ್ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ, ಅಮರ, ಅಮೂಲ್ಯವಾಗಿ ಚಿರಕಾಲ ಉಳಿಯುತ್ತದೆಯೆಂಬಲ್ಲಿ ಅನುಮಾನವಿಲ್ಲ.

20-2-1926 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ನಾರಸಿಂಹನಹಳ್ಳಿಯ ಸಾಮಾನ್ಯ ಕುಟುಂಬದಲ್ಲಿ ಜನಿಸಿ, ತಂದೆತಾಯಂದಿರಾದ ಬಿ. ನಂಜುಂಡಾರಾಧ್ಯ ಮತ್ತು ಗಿರಿಜಮ್ಮ ಅವರ ವಾತ್ಸಲ್ಯಪೂರ್ವಕ ದುಡಿಮೆಯಿಂದಾಗಿ

---

ಶ್ರೀ ಎನ್. ಬಸವಾರಾಧ್ಯರು ಸುತ್ತೂರು ಶ್ರೀಮಠದ ಹಿರಿಯ ವಿದ್ಯಾರ್ಥಿ. (ನಿಧನ : 6.12.2013)



ಅವರು ಕಷ್ಟಪಟ್ಟು ಓದಿ ಮೈಸೂರು ಮಹಾರಾಜ ಕಾಲೇಜಿನಲ್ಲಿ 1950ರಲ್ಲಿ ಎಂ.ಎ. ಪದವಿ ಗಳಿಸಿದರು. ಮಹಾಕವಿ ಕುವೆಂಪು, ಮಹಾವಿದ್ವಾಂಸ ಡಿ.ಎಲ್. ನರಸಿಂಹಾಚಾರ್ ಬಸವಾರಾಧ್ಯರ ಗುರುಗಳು. ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಅವರ ಸಹಪಾಠಿಗಳಾಗಿದ್ದರು (ಡಾ. ಶಿವರುದ್ರಪ್ಪನವರು ನನ್ನ ಗುರುಗಳು). ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತಿ ಜೊತೆ ಹಿಂದಿ, ತೆಲುಗು, ತಮಿಳುಗಳನ್ನೂ ಬಲ್ಲವರಾಗಿದ್ದರು.

ಎಂ.ಎ. ಪದವೀಧರರಾದ ಬಳಿಕ ಮೈಸೂರು ಮಹಾರಾಜ ಕಾಲೇಜಿನ ಪಕ್ಕದ ಪ್ರಾಚ್ಯ ವಿದ್ಯಾ ಸಂಶೋಧನಾಲಯವನ್ನು ಸೇರಿ ಹಸ್ತಪ್ರತಿಶಾಸ್ತ್ರಕ್ಕೆ ಹಲವು ಅಮೂಲ್ಯ ಕೊಡುಗೆಗಳನ್ನು ನೀಡಿದರು. ಹುಳುಹಿಡಿದು ಹಾಳಾಗಿಹೋಗುತ್ತಿದ್ದ ಓಲೆಗರಿ ಪ್ರತಿಗಳನ್ನು ಹಳ್ಳಿ ಹಳ್ಳಿಗಳಿಂದ ಸಂಗ್ರಹಿಸಿ ಹಸ್ತಪ್ರತಿ ಭಂಡಾರವನ್ನು ಶ್ರೀಮಂತಗೊಳಿಸಿದರು. ಜನರು ಕೇವಲ ಭಕ್ತಿಯಿಂದ ಪೂಜಿಸುತ್ತಿದ್ದ ಅಥವಾ ಅವರ ಅವಜ್ಞೆಗೆ ಗುರಿಯಾಗಿದ್ದ ಹಸ್ತಪ್ರತಿಗಳನ್ನು ಸಂಗ್ರಹಿಸುವುದೇ ಕಷ್ಟವಾಗಿದ್ದ ಕಾಲ ಅದು. ಹಸ್ತಪ್ರತಿಗಳ ಹಿಂದಿನ ಕಾಲದ ಲಿಪಿಯನ್ನು ಓದಿ ಅವುಗಳನ್ನು ಪ್ರತಿಮಾಡುವುದು, ಒಂದೊಂದು ಕೃತಿಯ ಬೇರೆ ಬೇರೆ ಹಸ್ತಪ್ರತಿಗಳ ಭಿನ್ನ ಪಾಠಾಂತರಗಳನ್ನು ಸಂಗ್ರಹಿಸಿ ಕೃತಿಕಾರನ ಮೂಲಪಾಠವನ್ನು ಪುನಾರಚಿಸುವುದೇ 'ಗ್ರಂಥಸಂಪಾದನೆ' (Textual Editing). ಬಸವಾರಾಧ್ಯರು ಸಂಪಾದಿಸಿದ ಕೃತಿಗಳು ಹಲವಾರು - ಉದ್ಭಟದೇವ ಚರಿತೆ, ಗುರುಭಕ್ತಾಂಡಾರಿ ಚರಿತೆ, ಅಬ್ಬಲೂರು ಚರಿತೆ, ಧರ್ಮನಾಥಪುರಾಣ, ಆರಾಧ್ಯ ಚಾರಿತ್ರ, ಹರಿಶ್ಚಂದ್ರ ಸಾಂಗತ್ಯ, ತ್ರಿಪುರ ದಹನ ಸಾಂಗತ್ಯ, ಚೇರಮ ಕಾವ್ಯ, ಹಳಗನ್ನಡ ನಿಘಂಟು ಇಂತಹ ಹಳಗನ್ನಡ ನಡುಗನ್ನಡದ ಕೃತಿಗಳು.

ಇತರರೊಡನೆ ಸೇರಿ ಹರಿಶ್ಚಂದ್ರ ಕಾವ್ಯ, ಪಂಪಭಾರತ ಸಂಗ್ರಹ ಕೃತಿಗಳನ್ನೂ ಪ್ರಕಟಿಸಿದ್ದಾರೆ. ವಡ್ಡಾರಾಧನೆ, ರಾಘವಾಂಕರನ್ನು ಕುರಿತು ಕೃತಿರಚನೆ ಮಾಡಿದ್ದಾರೆ. ಪ್ರೊ. ಡಿ.ಎಲ್. ನರಸಿಂಹಾಚಾರ್ ಸಂಭಾವನಾ ಗ್ರಂಥ 'ಉಪಾಯನ', ಬಿ. ಶಿವಮೂರ್ತಿ ಶಾಸ್ತ್ರಿಗಳ ಸಂಭಾವನಾ ಗ್ರಂಥ 'ದೇವ ಗಂಗೆ', ಎಂ.ಜಿ. ನಂಜುಂಡಾರಾಧ್ಯ ಸಂಸ್ಮರಣ ಸಂಪುಟ 'ಅಮರವಾಣಿ' ಇವುಗಳನ್ನೂ ಸಂಪಾದಿಸಿದ್ದಾರೆ.

ಅವರು ಹೆಚ್ಚಾಗಿ ಸಂಪಾದಿಸಿರುವ ಆಧುನಿಕಪೂರ್ವ ಕೃತಿಗಳ ಆರಂಭದಲ್ಲಿ ಆಯಾ ಕವಿಯ ಕಾಲ, ದೇಶ, ಹಿನ್ನೆಲೆ, ಕೃತಿಯ ಮಹತ್ವ, ಅದರ ಸಾರಾಂಶ ಇತ್ಯಾದಿಗಳನ್ನು ನೀಡಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಅವರ ಮುನ್ನುಡಿಗಳು ಅತ್ಯಂತ ಬೆಲೆಬಾಳುವ ಸಂಶೋಧನಾತ್ಮಕ ಬರಹಗಳು. ಅವು ಆಯಾ ಕೃತಿಯನ್ನು ಓದುವವರಿಗೆ ಇಡೀ ಕೃತಿಯನ್ನು ಅರ್ಥಪೂರ್ಣವಾಗಿ ಗ್ರಹಿಸಲು, ಓದಲು ಸಹಕಾರಿಯಾಗುತ್ತದೆ. ಅವರ

ಬರಹಗಳಲ್ಲಿ ಎಲ್ಲಿಯೂ ಆಲಂಕಾರಿಕ ಭಾಷೆ, ಕಲ್ಪನೆ ಇರುವುದಿಲ್ಲ. ಹೇಳುವುದನ್ನು ವಸ್ತುನಿಷ್ಠವಾಗಿ ಪ್ರತಿಪಾದಿಸುತ್ತಾರೆ. ಹಿಂದಿನ ವಿದ್ವಾಂಸರ ಅಭಿಪ್ರಾಯಗಳನ್ನೂ ಸಮರ್ಥವಾಗಿ ನೀಡಿ ತಮ್ಮ ಕೃತಜ್ಞತೆಯನ್ನು ಆ ಮೂಲಕ ಸಲ್ಲಿಸುತ್ತಾರೆ. ಇದು ಒಬ್ಬ ಶ್ರೇಷ್ಠ ಗ್ರಂಥಸಂಪಾದಕನ ನಿಜವಾದ ಲಕ್ಷಣ.

ಅವರು ಬರೆದಿರುವ ಬಿಡಿ ಬರಹಗಳು ಬಹಳ ಕಡಿಮೆ. ಬರೆದದ್ದೂ ಮೌಲಿಕವೇ. ಅವರ 'ಮಹಾಮನೆ' ಹೆಸರಿನ ಲೇಖನವನ್ನೇ ಗಮನಿಸಿ. ಬಸವಣ್ಣ ಕಲ್ಯಾಣದಲ್ಲಿ ವಾಸವಾಗಿದ್ದ ಮನೆಯೇ 'ಮಹಮನೆ' ಅಥವಾ 'ಮಹಾಮನೆ'. ಆ ಹೆಸರು ಬರುವ ಬಸವಣ್ಣ, ಅರಿವಿನ ಮಾರಿತಂದೆ, ಅಲ್ಲಮ, ಸಿದ್ಧರಾಮ ಇತ್ಯಾದಿ ಸಮಕಾಲೀನರ ವಚನಗಳನ್ನು ಆಧಾರವಾಗಿ ನೀಡಿ, ಕಾಲದ ದೃಷ್ಟಿಯಿಂದ ಬಸವಣ್ಣನ ಸಮೀಪಸ್ಥನಾಗಿದ್ದ ಹರಿಹರನ ಬಸವರಾಜದೇವರ ರಗಳೆಯ ಸೂಕ್ತ ಭಾಗಗಳನ್ನು ಉಲ್ಲೇಖಿಸಿ, ಒಂದು ನಿರ್ಣಯಕ್ಕೆ ಬಂದಿದ್ದಾರೆ: ಬಸವಣ್ಣನ ಮಾವನ ಮನೆಯೇ ಅವನು ವಾಸವಾಗಿದ್ದ 'ಮಹಾಮನೆ' ಎನಿಸಿಕೊಂಡಿತೆಂದೂ ಆ ಮನೆಯಲ್ಲಿ ಪ್ರತಿ ದಿನ ನೂರಾರು ಶರಣರು ಊಟ ಮಾಡಿ ಅಲ್ಲೇ ಕುಳಿತು ಆಧ್ಯಾತ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದುದರಿಂದ ಆ ಮನೆ 'ಮಹಾಮನೆ' ಎಂದು ಪ್ರಖ್ಯಾತವಾಯ್ತು ಎಂದೂ ತೀರ್ಮಾನಿಸಿದ್ದಾರೆ. ಅವರ ತೀರ್ಮಾನ ಪ್ರಶ್ನಾತೀತವಾದುದು-ಏಕೆಂದರೆ ಅದು ಮೂಲಭೂತ ಸಾಕ್ಷ್ಯಾಧಾರಗಳನ್ನೊಳಗೊಂಡಿದೆ. "ಈ ಮಹಾಮನೆ ಬಸವಣ್ಣನವರ ಜೀವಜ್ಯೋತಿಯಂತಿತ್ತು. ಇದು ಅವರ ಜೀವನದಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ. ಆದ್ದರಿಂದಲೇ ಬಸವೇಶ್ವರರ ಹೆಸರು ಎಷ್ಟು ಕಾಲ ನಿಲ್ಲುತ್ತದೋ ಅಷ್ಟು ಕಾಲದವರೆಗೂ ಈ ಮಹಾಮನೆ ಚಿರಸ್ಥಾಯಿಯಾಗಿ ನಿಲ್ಲುವುದರಲ್ಲಿ ಸಂದೇಹವೇ ಇಲ್ಲ"- ಇವು ಬಸವಾರಾಧ್ಯರ ನುಡಿಗಳು. ಮಹಾಮನೆಗೆ 'ಅನುಭವ ಮಂಟಪ' ಎಂಬ ಇನ್ನೊಂದು ಅರ್ಥಪೂರ್ಣ ಹೆಸರೂ ಅಂದು ಇತ್ತು (ಅನುಭವ = ಅನುಭಾವ, Mystic Experience).

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕೆಲಸ ಮಾಡಿ, ಪರಿಷತ್ತಿನ ಪ್ರತಿಷ್ಠಿತ ಕನ್ನಡ ನಿಘಂಟಿನ ಉಪ ಸಂಪಾದಕರಾಗಿ, ಆ ಬಳಿಕ ಪ್ರಧಾನ ಸಂಪಾದಕರೂ ಆಗಿ ಅದಕ್ಕೆ ಒಂದು ರೂಪವನ್ನು ನೀಡಿದರು. ನಾನು ಆ ನಿಘಂಟು ಸಮಿತಿಯ ಸದಸ್ಯನಾಗಿದ್ದೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರಣ ಯೋಜನೆಯ ಸಮಿತಿಯ ಸದಸ್ಯರೂ ಆಗಿದ್ದರು. ಅವರು ಸಂಪಾದಿಸಿದ 'ಚತುರಾಚಾರ್ಯ ಚಾರಿತ್ರ'ಕ್ಕೆ ಸುತ್ತೂರು ಮಠದಿಂದ ಶ್ರೇಷ್ಠ ಕೃತಿ ಪ್ರಶಸ್ತಿ ಲಭಿಸಿದೆ. ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿ ಅದನ್ನು ಪ್ರಗತಿಪಥದಲ್ಲಿ ಕೊಂಡೊಯ್ದವರಲ್ಲಿ ಅವರೂ ಒಬ್ಬರು. ಸಂಕೇಶ್ವರದಲ್ಲಿ ನಡೆದ ಅಖಿಲ ಭಾರತ ಹಸ್ತಪ್ರತಿ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಅವರಿಗೆ ಹಲವು ಪ್ರಶಸ್ತಿಗಳ ಜೊತೆಗೆ



ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳೂ ಲಭಿಸಿದ್ದು ಸ್ಮರಣಾರ್ಹವಾಗಿವೆ. 1999ರಲ್ಲಿ ನಡೆದ ಅಖಿಲ ಭಾರತೀಯ ಭಾಷಾ ಸಾಹಿತ್ಯ ಸಮ್ಮೇಳನದಲ್ಲಿ 'ಭಾರತ ಭಾಷಾಭೂಷಣ ಪ್ರಶಸ್ತಿ' ಲಭಿಸಿದ್ದೂ ಅಷ್ಟೇ ಸ್ಮರಣಾರ್ಹ.

ನಿಷ್ಕಪಟ ಸ್ನೇಹಜೀವಿ, ನಿಷ್ಠುರ ಸತ್ಯವಾದಿ, ಅಹಮಿಕೆಯ ಲವಲೇಶವೂ ಇಲ್ಲದ ಸ್ವಾಭಿಮಾನಿ ಬಸವಾರಾಧ್ಯರ ನಿಧನವು ಕನ್ನಡ ವಿದ್ವತ್ ಕ್ಷೇತ್ರಕ್ಕೆ, ಅದರಲ್ಲೂ ಹಸ್ತಪ್ರತಿ ಶಾಸ್ತ್ರಕ್ಕೆ ಒಂದು ತುಂಬಲಾರದ ನಷ್ಟವೇ ಆಗಿದೆ. ಆತ್ಮೀಯರೊಬ್ಬರನ್ನು, ಅದರಲ್ಲೂ ಆಗಾಗ್ಗೆ ಸಂಶೋಧನ ಕ್ಷೇತ್ರದ ಸಮಸ್ಯೆಗಳನ್ನು ದೂರವಾಣಿ ಮೂಲಕ ಹಂಚಿಕೊಳ್ಳುತ್ತಿದ್ದ ನನಗಂತೂ ಅದು ಭರಿಸಲಾಗದ ನಷ್ಟವೇ ಆಗಿದೆ. ತುಂಬು ವಯಸ್ಸಿನ (87 ವರ್ಷ) ಅವರು ಕೊನೆಯ ವರ್ಷವನ್ನು ಬಹು ಕಷ್ಟದಿಂದ ಕಳೆದರೂ ಶಕ್ತಿ ಇದ್ದಷ್ಟು ಕಾಲ ಸಾರ್ಥಕ ಜೀವನವನ್ನು ನಡೆಯಿಸಿದ ಅವರ "ನೆನಪು ಸುಖಸಮುದ್ರವಯ್ಯಾ...." (ಇದು ಬಸವಣ್ಣನವರ ನಿಧನದ ಕಾಲದ ವಚನಕಾರನೊಬ್ಬ ಆಡಿದ ಮಾತು).

**ಕೃಪೆ : ವಿಜಯವಾಣಿ ದಿನಪತ್ರಿಕೆ**
16.12.2013. 'ಸ್ಮರಣೆ' ಅಂಕಣ

**ಪ್ರಾರ್ಥನೆ**

ನೀನೆನ್ನ ಸರ್ವಸ್ವ, ನನ್ನ ಜೀವದ ಜೀವ, ನನ್ನೊಳಗಿನೊಳಗು;
ನಿನ್ನ ಹೊರತೆನಗಾರು ನನ್ನವರು ಇಲ್ಲವೋ ಮೂಲೋಕದೊಳಗು!
ಶಾಂತಿ, ಸುಖ, ಆಸೆ, ಆಶ್ರಯ ಮತ್ತೆ ಸಂಪದೈಶ್ವರ್ಯ ನೀನೆ,
ಜ್ಞಾನಾದಿ ಬುದ್ಧಿ ಬಲ ನೀನೆ.

ಮನೆ ನೀನೆ, ಮಠ ನೀನೆ, ಆತ್ಮೀಯ ಬಂಧು ಪರಿವಾರ ನೀನೆ,
ನನ್ನಿಂದು ಮುಂದುಗಳು ನೀನೆ, ಸ್ವರ್ಗಮೋಕ್ಷವು ನೀನೆ;
ವೇದಾದಿ ಶಾಸ್ತ್ರಗಳು ನೀನೆ, ಪರಮ ಗುರು ನೀನೆ.
ಅನಂತ ಸುಖದ ನೆಲೆವೀಡು ನೀನೆ.

ಪಥ ನೀನೆ, ಗುರಿ ನೀನೆ, ತಾಯ್ತಂದೆಗಳು ನೀನೆ,
ಸೃಷ್ಟಿಕರ್ತನು ನೀನೆ, ಪ್ರಳಯರೂಪಿಯು ನೀನೆ,
ಜೀವನದ ಜಲಧಿಯಲಿ ನನ್ನ ದೋಣಿಯ ನಡೆಪ ಅಂಬಿಗನು ನೀನೆ.

**- ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ**

# ಕಾಮನಬಿಲ್ಲಿನ ದೇಶ ಕಟ್ಟಿದ ನೆಲ್ಸನ್ ಮಂಡೇಲಾ

**ಈಚನೂರು ಕುಮಾರ್**

ಇಪ್ಪತ್ತನೇ ಶತಮಾನದಲ್ಲಿ ಮಾನವಕುಲದ ಇತಿಹಾಸಕ್ಕೆ ತಿರುವು ನೀಡುವ ಕಾರ್ಯ ಮಾಡಿದ ವ್ಯಕ್ತಿಗಳ ಸಾಲಿಗೆ ನೆಲ್ಸನ್ ಮಂಡೇಲಾ ಸೇರುತ್ತಾರೆ. (ಜನನ: 18.7.1918, ನಿಧನ: 6.12.2013) ಅವರ ಜೀವಿತಕಾಲದಲ್ಲಿ 27 ವರ್ಷ ಕಾರಾಗೃಹದಲ್ಲಿ ಕಳೆದರು. ಒಬ್ಬ ಮನುಷ್ಯನ ಜೀವಿತದಲ್ಲಿ 27 ವರ್ಷಗಳು ಅತ್ಯಂತ ಅಮೂಲ್ಯವಾದದ್ದು. ಆದರೆ ಅಂತಹ ಅಮೂಲ್ಯ ದಿನಗಳನ್ನು ಮಂಡೇಲಾ ಜೈಲಿನಲ್ಲಿ ಕಳೆದಿದ್ದರು. ದಕ್ಷಿಣ ಆಫ್ರಿಕಾಕ್ಕೆ ಅಧಿಕೃತ ಆಹ್ವಾನದ ಮೇರೆಗೆ ಪ್ರವಾಸಕ್ಕೆ ತೆರಳಿದ್ದ ಭಾರತದ ರಾಷ್ಟ್ರಪತಿಯಾಗಿ ಡಾ. ಅಬ್ದುಲ್ ಕಲಾಂ ಅವರು ಸಹಜ ಕುತೂಹಲದಿಂದ ಮಂಡೇಲಾರನ್ನು ಬಂಧಿಸಿಡಲಾಗಿದ್ದ ಸೆರೆಮನೆಯನ್ನು ವೀಕ್ಷಿಸಲು ಹೋಗಿದ್ದರು. ಆ ಕೋಣೆಯನ್ನು ಸುತ್ತಲಿನ ವಾತಾವರಣವನ್ನು ನೋಡಿ ಕಲಾಂ ಅವರು 27 ವರ್ಷಗಳ ಕಾಲ ಅದು ಹೇಗೆ ಮಂಡೆಲರು ಇಲ್ಲಿ ಜೀವಿಸಿದ್ದರು ಎಂದು ಸಖೇದಾಶ್ಚರ್ಯಪಟ್ಟು, ಸ್ವತಃ ಮಂಡೇಲಾರನ್ನು ಈ ಬಗ್ಗೆ ವಿಚಾರಿಸಿ ತಮ್ಮ ಮನದಾಳದ ನೋವನ್ನು ಹಂಚಿಕೊಂಡರು. ಆಗ ಮಂಡೇಲಾರು, ನಾನು ಗಾಂಧಿಗಿಂತಲೂ ಯಾವ ತೆರನಾದ ಕಷ್ಟವನ್ನು ಅನುಭವಿಸಿಲ್ಲ. ಅವರು ನನ್ನ ಹೋರಾಟದ ಸ್ಫೂರ್ತಿ, ಆದರ್ಶ ಗುರಿಯಾಗಿದ್ದರು, ಎಂದು ತಿಳಿಸಿದರು. ಆಫ್ರಿಕಾ ಸ್ವತಂತ್ರಗೊಂಡ ನಂತರ ಅವರು ದಕ್ಷಿಣ ಆಫ್ರಿಕಾದ ರಾಷ್ಟ್ರಾಧ್ಯಕ್ಷರಾಗಿದ್ದರು. ಒಂದು ದೇಶದ ರಾಷ್ಟ್ರಪ್ರಮುಖನಾಗುವುದು ಬಹು ದೊಡ್ಡ ಘಟನೆಯೇನಲ್ಲ. ಪ್ರತಿಯೊಂದು ದೇಶಕ್ಕೂ ಯಾರಾದರೊಬ್ಬ ಪ್ರಮುಖರು ಬೇಕೇಬೇಕು. ಆದರೆ ನೆಲ್ಸನ್ ಮಂಡೇಲಾ ದಕ್ಷಿಣ ಆಫ್ರಿಕಾದ ರಾಷ್ಟ್ರಪ್ರಮುಖರಾಗಿದ್ದು ಈ ಅರ್ಥದಲ್ಲೇನೂ ಅಲ್ಲ. ದಕ್ಷಿಣ ಆಫ್ರಿಕಾದ ರಾಷ್ಟ್ರಪ್ರಮುಖನಾಗುವ ಮಹತ್ವಾಕಾಂಕ್ಷೆಯೂ ಅವರಿಗಿರಲಿಲ್ಲ. ಅಲ್ಲಿನ ಮೂಲ ನಿವಾಸಿಗಳಾದ ಕಪ್ಪುವರ್ಣೀಯರಿಗೆ ಅವರ ಜನ್ಮಸಿದ್ಧ ಅಧಿಕಾರವನ್ನು ದೊರಕಿಸಿಕೊಡುವುದು ಮಂಡೇಲಾ ಅವರ ಹೋರಾಟದ ಮುಖ್ಯ ಉದ್ದೇಶವಾಗಿತ್ತು.

ದಕ್ಷಿಣ ಆಫ್ರಿಕಾದ ಬಿಳಿಯ ರಾಜ್ಯಕರ್ತರಿಂದ ಬಿಡುಗಡೆಗೊಳ್ಳಲು ಅವರೇನೂ ಸಶಸ್ತ್ರ ಸಂಗ್ರಾಮ ಮಾಡಬೇಕಾಗಲಿಲ್ಲ. ಗಾಂಧೀಜಿಯವರ ಹೋರಾಟದಂತೆ ಅದು ಪೂರ್ಣ ಅಹಿಂಸಾತ್ಮಕವೂ ಆಗಿರಲಿಲ್ಲ. ಆದರೆ ಅದು ಸಹನಶಕ್ತಿಯ ಸೀಮೆಯನ್ನು



ಉಲ್ಲಂಘಿಸಿದ ಹೋರಾಟವಾಗಿತ್ತು. ಅಷ್ಟೇ ಅಲ್ಲದೆ ಈ ಹೋರಾಟವನ್ನು ಮಂಡೇಲಾ, ಅವರ ಸಹಕಾರಿಗಳು ಹಾಗೂ ಮತ್ತೆಲ್ಲ ಕಪ್ಪುವರ್ಣೀಯ ಬೆಂಬಲಿಗರು ಗೆದ್ದುಕೊಂಡರು. ಆಂಗ್ಲ ಭಾಷೆಯಲ್ಲಿ ಇದನ್ನೇ Batle of Nerves' ಎನ್ನುವುದುಂಟು. ಈ ಬಗೆಯ ಹೋರಾಟವನ್ನು ಮಹಾತ್ಮ ಗಾಂಧೀಜಿ ಭಾರತದಲ್ಲಿ ಮಾಡಿ ತೋರಿಸಿದರು ಹಾಗೂ ಮಾರ್ಟಿನ್ ಲೂಥರ್ ಕಿಂಗ್ ಅವರು ಅಮೆರಿಕದಲ್ಲಿ ನಡೆಸಿ ಯಶಸ್ವಿಯಾದರು. ಈ ಕಾರಣಕ್ಕಾಗಿಯೇ ಮಂಡೇಲಾ ಅವರನ್ನು ದಕ್ಷಿಣ ಆಫ್ರಿಕಾದ ಗಾಂಧಿ ಎನ್ನುವುದುಂಟು. ಹಾಗಾಗಿ ಅವರ ಸಾವು ಎರಡನೇ ಗಾಂಧಿಯ ಸಾವು ಎನಿಸಿದೆ. 'ಗಾಂಧಿ' ಹೆಸರಿನ ಒಂದು ಸಾಮಾಜಿಕ-ರಾಜಕೀಯ ಬ್ರಾಂಡ್ ಇದೆ. ಮಂಡೇಲಾ ಈ ಬ್ರಾಂಡ್‌ನ ರಾಯಭಾರಿಯಾಗಿದ್ದರು. ಮಂಡೇಲಾ ಹೆಸರಿಗೆ ಶಾಂತಿ, ನ್ಯಾಯ, ಸಹಭಾಗಿತ್ವ, ಸಹನಶೀಲತೆ ವಿಷಯಗಳು ಸೇರುತ್ತವೆ. ದಕ್ಷಿಣ ಆಫ್ರಿಕಾವನ್ನು ಒಂದಾಗಿ ಬೆಸೆದು, ಬಿಳಿಯರು ಮತ್ತು ಕರಿಯರ ನಡುವೆ ಸಾಮರಸ್ಯ ಮೂಡಿಸಿದ ಅವರ ಕಾರ್ಯವು ಯುಗಪ್ರವರ್ತಕ ಕಾರ್ಯವಾಗಿದೆ. ಅವರ ಮಹಾಮಾನವತೆ, ಸಾಕ್ಷಿಪ್ರಜ್ಞೆ

ಅವರ ಸರ್ವೋತ್ಕೃಷ್ಟ ಭಾಷಣವು 'ರೇನ್ಬೋ ಸ್ಪೀಚ್' (Rainbow Speech) ಎಂದರೆ ಕಾಮನಬಿಲ್ಲಿನ ಭಾಷಣ ಎಂದು ಜಗತ್‌ಪ್ರಸಿದ್ಧವಾಗಿದೆ. ಈ ಭಾಷಣದಲ್ಲಿ ಅವರು ತಮ್ಮ ದೇಶವು ಕಾಮನಬಿಲ್ಲಿನ ಬಣ್ಣದ್ದು, ಅಂದರೆ ಅನೇಕ ಭಾಷೆ ಮತ್ತು ಜನಾಂಗದವರಿಂದ ಕೂಡಿದ್ದು ಎಂಬ ವಿಚಾರವನ್ನು ಮಂಡಿಸಿದರು. 1994 ಮೇ 10 ರಂದು ಅವರು ರಾಷ್ಟ್ರಾಧ್ಯಕ್ಷರಾಗಿ ದೇಶವನ್ನುದ್ದೇಶಿಸಿ ಈ ಭಾಷಣ ಮಾಡಿದರು.

'ಈಗ ನಾವು ಎದ್ದು ನಿಲ್ಲಬೇಕಿದೆ. ನಾವು ರಾಜಕೀಯ ವಿಮೋಚನೆ ಹೊಂದಿದ್ದೇವೆ. ಹಾಗೆಂದೇ ನಾವು ನಮ್ಮೊಂದಿಗೆ ಪ್ರತಿಜ್ಞೆ ಮಾಡುವುದೆಂದರೆ-ಹಸಿವು, ಉಪೇಕ್ಷೆ, ದುಃಖ, ಲಿಂಗಭೇದ ಇಂತಹ ಎಲ್ಲ ಭೇದಭಾವಗಳಿಗೆ ಮಂಗಳ ಹಾಡುವೆವು. ನಮಗೆ ಶಾಂತಿಯ ಭರವಸೆ ನೀಡುವ ಒಂದು ಕಾಮನಬಿಲ್ಲಿನ ರಾಷ್ಟ್ರವನ್ನು ನಾವು ಕಟ್ಟಬೇಕಿದೆ. ಈ ಧ್ಯೇಯವನ್ನು ಸಾಕಾರಗೊಳಿಸಲು ನಾವು ಜೊತೆಗೂಡಿ ಕೆಲಸ ಮಾಡಬೇಕಿದೆ. ಎಲ್ಲರಿಗೂ ನ್ಯಾಯ ಸಿಗಬೇಕು. ಸಾರ್ವತ್ರಿಕ ಶಾಂತಿ ನೆಲೆಸಬೇಕು. ಎಲ್ಲರಿಗೂ ಉದ್ಯೋಗ ಒದಗಿಸಬೇಕು. ಎಲ್ಲರಿಗೂ ಆಹಾರ-ನೀರು ಸಿಗಬೇಕು. ಅಲ್ಲದೆ ಪ್ರತಿಯೊಬ್ಬನ ಎಲೆಯಲ್ಲೂ ಉಪ್ಪು ಇರಬೇಕು. ಈ ಸುಂದರ ಭೂಮಿಗೆ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಹಿಂಸಿಸುವ ಅನುಭವ ಮತ್ತೆಂದಿಗೂ, ಮತ್ತೆಂದಿಗೂ, ಮತ್ತೆಂದಿಗೂ ಬಾರದಿರಲಿ, ಮಾನವಕುಲದ ಮೌಲ್ಯಗಳ ಮೇಲೆ ಸೂರ್ಯನೆಂದೂ ಅಸ್ತಮಿಸದಿರಲಿ.'

ಬಿಳಿಯರ ಆಡಳಿತವು ನೆಲ್ಸನ್ ಅವರ ಮೇಲೆ ರಾಜದ್ರೋಹದ ಮೊಕದ್ದಮೆ

ಹೂಡಿ 27 ವರ್ಷ ಕಾರಾಗೃಹದಲ್ಲಿಟ್ಟಿತ್ತು. ದಕ್ಷಿಣ ಆಫ್ರಿಕಾವು ಬಿಳಿಯರ ದೇಶವೇನೂ ಅಲ್ಲ. ಬಿಳಿಯ ಜನರು ವಸಾಹತು ನಿರ್ಮಿಸಿದರು. ಕರಿಯರ ಮೇಲೆ ಭಾರೀ ಪ್ರಮಾಣದ ಬಲಾತ್ಕಾರ, ದಬ್ಬಾಳಿಕೆ ನಡೆಯಿತು.

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಬಹು ಹಿಂದೆಯೇ ಸ್ಥಾಪಿತವಾಗಿತ್ತು. ಮಂಡೇಲಾ ಈ ಕಾಂಗ್ರೆಸ್‌ಗೆ ಸೇರಿದರು. ಆಂದೋಲನಗಳಲ್ಲಿ ಪಾಲ್ಗೊಳ್ಳಲು ಆರಂಭಿಸಿದರು. ಸಶಸ್ತ್ರ ಹೋರಾಟಗಳಲ್ಲೂ ಭಾಗವಹಿಸಿದರು. ಅನೇಕ ವರ್ಷಗಳ ಕಾಲ ಅವರು ಭೂಗತರಾಗಿದ್ದರು. ಕೊನೆಗೆ ಅವರನ್ನು ಸೆರೆಹಿಡಿದು ರಾಬಿನ್ ಐಲ್ಯಾಂಡ್ ಎಂಬಲ್ಲಿ ಜೈಲಿನಲ್ಲಿಡಲಾಯಿತು. ಸುದೀರ್ಘ ಕಾರಾಗೃಹವಾಸದಿಂದಾಗಿ ಅವರೊಳಗಿನ ಚಿಂತಕ ಎಚ್ಚೆತ್ತುಗೊಂಡ. ಕಾರಾಗೃಹದಲ್ಲೂ ಅವರು ಶಾಂತವಾಗಿದ್ದರು. ಮಾನವಕುಲದ ಮೇಲಿನ ಪ್ರೇಮವು ಎಳ್ಳಷ್ಟೂ ಅವರಲ್ಲಿ ಕಡಿಮೆಯಾಗಲಿಲ್ಲ.

ಕರಿಯರನ್ನು ಉನ್ನತೀಕರಣಗೊಳಿಸುವಲ್ಲಿ ದಕ್ಷಿಣ ಆಫ್ರಿಕಾದ ಬಿಳಿಯರು ತಮ್ಮ ಪಾಲಿನ ಕರ್ತವ್ಯ ನಿರ್ವಹಿಸಿದ್ದು ಹಾಗೂ ಸಮಯ ಬಂದಾಗ ಎರಡು ಹೆಜ್ಜೆ ಹಿಂದೆ ಸರಿದಿದ್ದರಿಂದಲೇ ನೈಜ ಅರ್ಥದಲ್ಲಿ ದಕ್ಷಿಣ ಆಫ್ರಿಕಾದ ಕಾಮನಬಿಲ್ಲಿನ ರಾಷ್ಟ್ರ ರೂಪುಗೊಂಡಿದೆ. ಇಂದು ಭೂಗೋಳದ ಮೇಲೆ ಮಂಡೇಲಾರ ಅಸ್ತಿತ್ವವಿಲ್ಲ; ಆದರೆ ಜನಸಮುದಾಯದಲ್ಲಿ 'ಗೋಳು' ಇರುವ ತನಕ ಅವರ ತ್ಯಾಗ ಮತ್ತು ಮಾನವಪ್ರೇಮ ಎಲ್ಲರಿಗೂ ಸ್ಫೂರ್ತಿಯ ಸೆಲೆಯಾಗಿದೆ.

□

**ತಪಸ್ಸು**

ಪ್ರೇಮಗಿರಿ ಕಂದರದ ಗುಹೆಯಲ್ಲಿ ಯೋಗಿಯಾಗುತ ನಿಲ್ಲುವೆ
ದಿವ್ಯ ನಿತ್ಯಾನಂದ ನಿರ್ಝರದಲ್ಲಿ ಧ್ಯಾನದಿ ಮೀಯುವೆ.
ತತ್ವಫಲರಸ ಪಾನಗೈಯುತ ಜ್ಞಾನಸುಧೆಯನು ತಣಿಸುವೆ,
ಪರಮ ಪುರುಷನ ಪಾದವನು ವೈರಾಗ್ಯ ಕುಸುಮದಿ ಪೂಜಿಪೆ

ಎದೆಯ ದಾಹಕೆ ನೀರನೆರೆಯಲು ಕೂಪಜಲವನ್ನರಸದೆ
ಶಾಂತಿವಾರಿಯನೆತ್ತಿ ಹೃದಯದ ಹೊನ್ನಗಿಂಡಿಯ ತುಂಬುವೆ
ನಿನ್ನ ಪಾದಪದ್ಮಗಳ ಸುಧೆಯನು ದಿನವು ದಿನವೂ ಕುಡಿಯುತ,
ನಗುವೆ, ಕುಣಿಯುವೆ, ಅಳುವೆ, ಹಾಡುವೆ, ಪರಮತೋಷದಿ ಮುಳುಗುತ.

**- ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ**

# ಯದುವಂಶದ ಕೊನೆಯ ಕೊಂಡಿ – ಶ್ರೀಕಂಠದತ್ತ ನರಸಿಂಹರಾಜ ಒಡೆಯರ್

**ಈಚನೂರು ಕುಮಾರ್**

ಮೈಸೂರು ಅರಸು ಮನೆತನದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ನಿಧನದಿಂದ ಯದುವಂಶದ ಕೊನೆಯ ಕೊಂಡಿ ಕಳಚಿದಂತಾಯಿತು. (ನಿಧನ 10.12.2013)

ಕರ್ನಾಟಕ ಮತ್ತು ದೇಶದ ರಾಜಕೀಯ ಚರಿತ್ರೆಯಲ್ಲಿ ಮೈಸೂರು ಒಡೆಯರಷ್ಟು ಸುದೀರ್ಘವಾಗಿ ರಾಜ್ಯವಾಳಿದ ಅರಸು ಮನೆತನ ಯಾವುದು ಇಲ್ಲ. ಸುಮಾರು 614 ವರ್ಷಗಳಷ್ಟು ಕಾಲ ಒಡೆಯರ್ ಮನೆತನ ಕನ್ನಡನಾಡನ್ನು ಸೇವೆಗೈದರು. ಇಲ್ಲಿ ಸೇವೆಗೈದರು ಎಂಬ ಮಾತನ್ನು ಪ್ರಜ್ಞಾಪೂರ್ವಕವಾಗಿಯೇ ಬಳಸಲಾಗಿದೆ. ಯಾಕೆಂದರೆ ಈ ದೇಶವನ್ನಾಳಿದ ಬಹುಪಾಲು ರಾಜಪ್ರಭುತ್ವಗಳೂ ಸಮಾಜವಿರುವುದು ತಮ್ಮ ಸೇವೆಗೆಂದೇ ಎಂದು ಭಾವಿಸಿದ್ದವು. ಆದರೆ ಒಡೆಯರು ಸಮಾಜ ಸೇವೆಯೇ ತಮ್ಮ ಆದ್ಯಕರ್ತವ್ಯವೆಂದು ನಂಬಿದ್ದವರು ಹಾಗೇ ಬದುಕಿದ್ದವರು ಕೂಡ. ಈ ಮನೆತನದ 25 ಜನ ರಾಜರು ಪ್ರಭುತ್ವದ ನೇತೃತ್ವ ವಹಿಸಿ ನಾಡಿನ ಸೇವೆಗೈದಿದ್ದಾರೆ. 25ನೆಯ ಹಾಗೂ ರಾಜಪ್ರಭುತ್ವದ ಕೊನೆಯ ದೊರೆಯಾದ ಜಯಚಾಮರಾಜೇಂದ್ರ ಒಡೆಯರ್ ಅವರು, ದೇಶಕ್ಕೆ ಸ್ವಾತಂತ್ರ ಬಂದಾಗ ನಾಡಿನಲ್ಲಿ ಪ್ರಜಾಪ್ರಭುತ್ವ ನೆಲಸಬೇಕು, ಪ್ರಜೆಗಳ ಆಡಳಿತ ಜಾರಿಯಾಗಬೇಕೆಂದು ಭಾವಿಸಿ ಯಾವ ಒತ್ತಡವೂ ಇಲ್ಲದೆ ಸ್ವತಃ ತಾವೇ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ತಮ್ಮ ರಾಜ್ಯವನ್ನು ವಿಲೀನಗೊಳಿಸಿದರು. ಅಂತಹ ರಾಜಜ್ಞಾನಿ, ಯೋಗಿಯ ಸುಪುತ್ರರೇ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ರಾಜಪ್ರಭುತ್ವವನ್ನು ಕಣ್ಣಾರೆ ನೋಡಿದವರು, ಅರಸೊತ್ತಿಗೆಯನ್ನು ಅನುಭವಿಸಿದವರು; ಆದರೆ ಅರಸರಾಗದೇ ಹೋದವರು. ನರಸಿಂಹರಾಜ ಒಡೆಯರ್ ಅವರದ್ದು ಅತ್ಯಂತ ಸಂಕೀರ್ಣ ಬದುಕಾಗಿತ್ತು. ಅವರ ಬೆನ್ನ ಹಿಂದೆ ಇದ್ದ ರಾಜಪರಂಪರೆ, ಕಣ್ಣ ಮುಂದೆ ಪ್ರಜಾಪ್ರಭುತ್ವ. ಅರಸೊತ್ತಿಗೆಯನ್ನು ಸಂಪೂರ್ಣ ತಳಿಹಾಕುವಂತೆಯೂ ಇಲ್ಲ. ಪ್ರಜಾಪ್ರಭುತ್ವದಿಂದ ಹೊರಗೆ ಇರುವಂತೆಯೂ ಇಲ್ಲ. ಈ ಸಂದಿಗ್ಧದಲ್ಲಿ ಇವರು ಅತ್ಯಂತ ಸಂಯಮಿಯಾಗಿ ಈ ತಮ್ಮ ಬದುಕನ್ನು ರೂಪಿಸಿಕೊಂಡಿದ್ದರು. ಅರ್ಧ ರಾಜಪ್ರಭುತ್ವ ಇನ್ನರ್ಧ

ಪ್ರಜಾಪ್ರಭುತ್ವದ ಸಮನ್ವಯಕಾರರಾಗಿದ್ದರು. ಸೇತುವೆಯಾಗಿದ್ದರು. ಸಂಪೂರ್ಣ ಪ್ರಜಾಪ್ರಭುತ್ವದಲ್ಲಿಯೇ ಆಧುನಿಕ ಜನತಂತ್ರದಲ್ಲಿ ಅರಳಿ ಬೆಳಗಿದವರು. ಬೆಳೆದವರು. ಆದರೆ, ಮಹಾಜನರು ಮಾತ್ರ 'ಮಹಾರಾಜ' ಎಂದೇ ಸಂಬೋಧಿಸುತ್ತಿದ್ದರು.

**ಶ್ರೀಸಾಮಾನ್ಯ ಯುವಕನ ಕಥೆ :** ಶ್ರೀಕಂಠದತ್ತರು ಜನಸಾಮಾನ್ಯ ಯುವಕರಂತೆಯೇ ಮೈಸೂರಿನ ಸಿನಿಮಾಮಂದಿರ, ಹೋಟೆಲುಗಳಿಗೆ ಹೋಗುತ್ತಿದ್ದರು. ಜೀನ್ಸ್‌ಧಾರಿಯಾಗಿ, ಟಿ ಶರ್ಟ್ ಧರಿಸಿಯೇ ಓಡಾಡುತ್ತಿದ್ದರು. ಮಹಾರಾಜ ಕಾಲೇಜು ಮೈದಾನದಲ್ಲಿ ತಂದೆ-ತಾತನವರಂತೆಯೇ ಕ್ರಿಕೆಟ್ ಆಡಿದವರು. ತರಗತಿಗಳಲ್ಲಿ, ಹೊರಗಡೆ ನಿರಹಂಕಾರಿ, ನಿರ್ಗರ್ವಿಯಾಗಿ ನಡೆದುಕೊಂಡವರು.

**ಚುನಾವಣೆ ಕಣಕ್ಕೆ, ಕಲ್ಲಹಳ್ಳಿಯಲ್ಲಿ ಆರತಿ :** ದತ್ತರು ಸಂಸತ್ ಚುನಾವಣೆಗೆ ಮೊದಲ ಬಾರಿಗೆ ಸ್ಪರ್ಧಿಸಿದಾಗ ದೇವರಾಜ ಅರಸು ಅವರ ತವರೂರು ಕಲ್ಲಹಳ್ಳಿಯಲ್ಲಿ ಚುನಾವಣಾ ಪ್ರಚಾರ ಆರಂಭಿಸಿದರು. ಅವತ್ತು ಚಂದ್ರಪ್ರಭಾ ಅರಸು ಅವರು ದತ್ತರಿಗೆ ಆರತಿ ಬೆಳಗಿ ಹಣೆಗೆ ತಿಲಕವಿಟ್ಟರು. ನಂತರವೇ ಮನೆಮನೆ ಪ್ರಚಾರ ಆರಂಭಿಸಿದರು.

**ಅನುದಾನ ಹಿಂದುಳಿದ ತಾಲ್ಲೂಕಿಗೆ :** ಸಂಸತ್ ಸದಸ್ಯರಾಗಿದ್ದಾಗ ತಮಗೆ ದೊರಕಿದ ಕ್ಷೇತ್ರಾನುದಾನವನ್ನು ಸಂಪೂರ್ಣವಾಗಿ ಮೈಸೂರು ಜಿಲ್ಲೆಯ ಹಿಂದುಳಿದ ತಾಲ್ಲೂಕು ಹೆಗ್ಗಡದೇವನಕೋಟೆಗೆ ನೀಡಿದುದು ಇವರ ಜನಪರ ಕಾಳಜಿಯನ್ನು ತೋರಿಸುತ್ತದೆ.

**ಟೆಲಿವಿಷನ್ ಕೇಂದ್ರ ಮೇಲ್ದರ್ಜೆ, ಕಂಕಣಧಾರಿಯ ಧರಣಿ :** ದೂರದರ್ಶನ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಆಗ್ರಹಿಸಿ ಕನ್ನಡ ಕ್ರಿಯಾ ಸಮಿತಿ ಹಮ್ಮಿಕೊಂಡಿದ್ದ ಧರಣಿಗೆ ಸಂಸದರಾಗಿ ಭಾಗವಹಿಸುವ ಮೂಲಕ ಸಂವೇದನಾಶೀಲತೆ ಪ್ರದರ್ಶಿಸಿದರು.

ಆವತ್ತು ದಸರೆಯ ಆರಂಭದ ದಿನ. ಬೆಳಗ್ಗೆಯೇ ಕಂಕಣ ಧರಿಸಿದ್ದರು. ಸಾಮಾನ್ಯವಾಗಿ ಕಂಕಣ ಧರಿಸಿದ ರಾಜ, ಮಹಾರಾಜರು ಅರಮನೆಯನ್ನು ಬಿಟ್ಟು ಹೊರಬರುವಂತಿಲ್ಲ. ಆದರೆ, ಕನ್ನಡ ಮತ್ತು ಕನ್ನಡ ಜನರಿಗೆ ಟಿವಿ ಮಾಧ್ಯಮ ಲಭಿಸಬೇಕೆನ್ನುವ ಪ್ರಾಮಾಣಿಕ ಕಾಳಜಿಯಿಂದ ಸಂತೋಷದಿಂದಲೇ ಧರಣಿ ಕುಳಿತರು. ಅದಕ್ಕಾಗಿ ಕ್ರಿಯಾ ಸಮಿತಿ ತನ್ನ ಧರಣಿ ಸ್ಥಳವನ್ನು ಒಡೆಯರ್ ನಿವಾಸ ಸನಿಹದ ಬ್ರಹ್ಮಪುರಿ ಮಹಾದ್ವಾರಕ್ಕೆ ಸ್ಥಳಾಂತರಿಸಿತು.

**ಸರ್ಕಾರದೊಂದಿಗೆ ಸಾಮರಸ್ಯ :** ಸರ್ಕಾರ ಪ್ರಜಾಪ್ರಭುತ್ವವನ್ನೇ ಮುಂದಿಟ್ಟುಕೊಂಡು ರಾಜತ್ವವನ್ನು ಇವರ ತಂದೆ ಜಯಚಾಮರಾಜೇಂದ್ರ ಒಡೆಯರ್ ಕಾಲದಿಂದಲೂ ನಿಧಾನಕ್ಕೆ ಕಡೆಗಣಿಸುತ್ತಲೇ ಬಂದಿತು. ಇಂಥ ಅಲಕ್ಷ್ಯ ಶ್ರೀಕಂಠದತ್ತರ ಕಾಲಘಟ್ಟದಲ್ಲಿ ಪರಾಕಾಷ್ಠೆಗೆ ಏರಿದರೂ ದಸರೆಯ ಸಂದರ್ಭದಲ್ಲಿ ಸಹನೀಯ ಸ್ಪಂದನ ಸಾಧಿಸಿದರು. ಸಾಮರಸ್ಯ ನಿರ್ಮಿಸಿದರು. ತಮ್ಮ ಕೊನೆಯ ದಿನಗಳ ತನಕವೂ ಈ ಸಾಮರಸ್ಯವನ್ನು ಹಾಗೆಯೇ ಉಳಿಸಿಕೊಂಡಿದ್ದರು.



ಮೈಸೂರು ಅರಸರು ಎಲ್ಲ ಧರ್ಮಗಳನ್ನು ಸಮಾನವಾಗಿ ಕಂಡವರು. ಧರ್ಮಗುರುಗಳನ್ನು ಸದಾ ಸೇವಿಸುತ್ತಾ, ಅವರ ಮಾರ್ಗದರ್ಶನವನ್ನೂ ಪಡೆಯುತ್ತಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರಂತೂ ಧರ್ಮ ಕೇಂದ್ರಗಳಿಗೆ, ದೇಗುಲಗಳಿಗೆ ಕೊಡುಗೈ ದಾನಿಗಳಾಗಿದ್ದವರು. ಮುಂದೆ ನಾಲ್ವಡಿಯವರು, ಜಯಚಾಮರಾಜ ಒಡೆಯರ್ ಅವರು ಇದೇ ಮಾದರಿಯನ್ನು ಅನುಸರಿಸಿದರು. ಶ್ರೀ ಜಯಚಾಮರಾಜ ಒಡೆಯರ್ ಅವರಿಗೂ ಸುತ್ತೂರು ಶ್ರೀಮಠಕ್ಕೂ ಅವಿನಾಭಾವ ಸಂಬಂಧವಿತ್ತು. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳ ಬಗ್ಗೆ ಅವರಿಗೆ ಅಪಾರ ಗೌರವ. ಸಮಯಕ್ಕಿದಾಗಲೆಲ್ಲಾ ಅವರು ಪೂಜ್ಯರ ಜೊತೆ ಚರ್ಚಿಸಲು, ಲೋಕಾಭಿರಾಮವಾಗಿ ಮಾತನಾಡಲು ಬಯಸುತ್ತಿದ್ದರು. ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದರು. ಪೂಜ್ಯರು ಅರಮನೆಯ ಬಳಿಯೇ ಇರಬೇಕೆಂದು ಬಯಸಿ ಗನ್ ಹೌಸ್ ವೃತ್ತದ (ಈಗ ಶಿವರಾತ್ರಿ ರಾಜೇಂದ್ರ ವೃತ್ತ) ಬಳಿ ಅಲ್ಲಿ ಇದ್ದ ಅರಮನೆ ಕಟ್ಟಡದಲ್ಲಿ ವ್ಯವಸ್ಥೆ ಮಾಡಿದರು. (ಈಗ ಇರುವ ಜೆಎಸ್‌ಎಸ್ ಮಹಾವಿದ್ಯಾಪೀಠದ ಸ್ಥಳದಲ್ಲಿ ಹಿಂದೆ ಇದ್ದ ಶ್ರೀಮಠದ ಕಟ್ಟಡ ಇತ್ತು. ಅದೇ ಮುಂದೆ ನವೀಕರಣಕ್ಕೆ ಒಳಪಟ್ಟಿತು.)

ಸುತ್ತೂರು ಶ್ರೀಮಠ, ಮೈಸೂರನ್ನು ಕೇಂದ್ರವನ್ನಾಗಿಸಿಕೊಂಡು ತೊಡಗಿಸಿಕೊಂಡ ಶೈಕ್ಷಣಿಕ ಚಟುವಟಿಕೆಗಳಿಗೆ ಜಯಚಾಮರಾಜ ಒಡೆಯರ್ ಅವರು ನೀಡಿದ ಕೊಡುಗೆ ಅಪಾರವಾಗಿದೆ. ಅನ್ನದಾಸೋಹ ನಡೆಯುತ್ತಿದ್ದ ಆನೆಕರೋಟಿ (ಇಂದಿನ ಜೆಎಸ್‌ಎಸ್ ಆಸ್ಪತ್ರೆ ಆವರಣ) ಅರಮನೆಗೆ ಸೇರಿದ ಆಸ್ತಿ. ಪೂಜ್ಯರ ದಾಸೋಹವನ್ನು ಕಣ್ಣಾರೆಕಂಡಿದ್ದ ಜಯಚಾಮರಾಜ ಒಡೆಯರ್ ಅವರು ಅದನ್ನು ಶ್ರೀಮಠಕ್ಕೆ ಅಂದಿನ ದರಕ್ಕೆ ಹೋಲಿಸಿಕೊಂಡರೆ ಕಡಿಮೆ ಮೌಲ್ಯಕ್ಕೆ ಮಠಕ್ಕೆ ವಿಕ್ರಯಿಸಿದರು ಹಾಗೆಯೇ ಇಂದು ಇರುವ ಪ್ರತಿಷ್ಠಿತ ಎಸ್‌ಜೆಸಿಇ ಆವರಣ ಸಹ ಅರಮನೆಗೆ ಸೇರಿದುದೇ ಆಗಿದೆ. ಅದನ್ನು ಸಹ ಕಡಿಮೆ ಮೌಲ್ಯಕ್ಕೆ ಶ್ರೀಮಠಕ್ಕೆ ಕೊಟ್ಟು ತಮ್ಮ ಉದಾರತೆಯನ್ನು ಮೆರೆದರು. ಆ ಕಾರಣಕ್ಕಾಗಿಯೇ ಅದಕ್ಕೆ 'ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು' ಎಂದು ನಾಮಕರಣ ಮಾಡುವುದರ ಮೂಲಕ ಶ್ರೀಮಠ ಅವರ ಹೆಸರನ್ನು ಶಾಶ್ವತಗೊಳಿಸಿತು. ಇಂತಹ ಅವರ ಗುಣಗಳೇ ಅವರನ್ನು ನಾಡವರ ಹೃದಯದಲ್ಲಿ ಶಾಶ್ವತವಾಗಿ ನೆಲೆಸುವಂತೆ ಮಾಡಿದೆ.

□

# ಕರ್ನಾಟಕ ಸಂಗೀತ ಪಿತಾಮಹ: ಭಕ್ತಿಭಂಡಾರಿ ಬಸವೇಶ್ವರರು

**ವಿದ್ವಾನ್ ಬಿ.ಎಸ್. ವಿಜಯರಾಘವನ್**

ಸಂಗೀತದ ಇತಿಹಾಸ ಬಹು ಪುರಾತನವಾದದ್ದು. ಇದರಲ್ಲಿ ಕರ್ನಾಟಕದ ಶರಣರು ಮತ್ತು ಹರಿದಾಸರು ಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಆದ್ದರಿಂದಲೇ ಇದಕ್ಕೆ 'ಕರ್ನಾಟಕ ಸಂಗೀತ' ಎಂದು ಹೆಸರು ಬಂತು. ಅಲ್ಲದೆ ಕರ್ನಾಟಕ ಸಂಗೀತದ ಆದ್ಯಪ್ರವರ್ತಕರಾದ ಭಕ್ತಿಭಂಡಾರಿ ಬಸವೇಶ್ವರರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂಬ ಈ ಮಾತನ್ನು ವಿದ್ವಾನ್ ವಿಜಯರಾಘವನ್ ಹೇಳಿದರು.

ಈಗ ಕರ್ನಾಟಕ ಸಂಗೀತಕ್ಕೆ ಶಿವಶರಣರ ಕೊಡುಗೆಯನ್ನು ಗಮನಿಸೋಣ. ಕರ್ನಾಟಕದ ಇತಿಹಾಸ ಬಹು ಪುರಾತನವಾದದ್ದು. ಸುಮಾರು 12ನೇ ಶತಮಾನದಲ್ಲಿಯೇ ಶಿವಶರಣರಲ್ಲಿ ಪ್ರಮುಖರಾದ ಬಸವಣ್ಣನವರು, ಅಲ್ಲಮಪ್ರಭುಗಳು, ಮಹಾದೇವಿಯಕ್ಕ ಅವರುಗಳು 'ವಚನ ಸಾಹಿತ್ಯ'ವನ್ನು ರಚಿಸಿದರು. ಜನಮನದಲ್ಲಿ ಈ ವಚನಗಳು ಮಹಾಪ್ರಭಾವವನ್ನೇ ಉಂಟುಮಾಡಿತು, ಈ ಸಾಹಿತ್ಯ ಜನಪ್ರಿಯವಾಯಿತು. ಎಲ್ಲರೂ ಇವುಗಳನ್ನು ಹಾಡುವುದಕ್ಕೆ ಪ್ರಾರಂಭ ಮಾಡಿದರು.

ಶಿವಶರಣರು ವಚನಗಳನ್ನಲ್ಲದೆ ಹಾಡುಗಳನ್ನೂ ರಚಿಸಿದ್ದಾರೆ ಮತ್ತು ಅವುಗಳನ್ನು 'ಸ್ವರವಚನಗಳು' ಎಂದು ಕರೆದಿದ್ದಾರೆ ಎಂಬುದಾಗಿ ಇತ್ತೀಚಿನ ವಿದ್ವಾಂಸರ ಸಂಶೋಧನೆಯಿಂದ ತಿಳಿದು ಬಂದಿದೆ.

ನಾನು ಕನ್ನಡ ಎಂ.ಎ. ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ, ನನ್ನ ಗುರುಗಳಾದ ಪ್ರೊ. ತೀ.ನಂ. ಶ್ರೀಕಂಠಯ್ಯನವರು ಈ ವಿಷಯವನ್ನು ಕುರಿತು ಮೊಟ್ಟಮೊದಲು ಸಂಶೋಧನೆ ಮಾಡಿದರು. ತಮ್ಮ 'ಸಮಾಲೋಕನ' ಎಂಬ ಪುಸ್ತಕದಲ್ಲಿ ಅವರು ಮಹಾದೇವಿಯಕ್ಕನ ಒಂದು ವಚನವನ್ನು ಗಮನಿಸಿ, 'ಇದು ವಚನವಲ್ಲ, ಅಕ್ಕ

ಸುತ್ತೂರು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ 20ನೇ ಸಂಗೀತ ಸಮ್ಮೇಳನವು 2013 ಡಿಸೆಂಬರ್ 1 ರಿಂದ 6 ರವರೆಗೆ ಮೈಸೂರಿನಲ್ಲಿ ನಡೆಯಿತು. ಇದರ ಸಮ್ಮೇಳನಾಧ್ಯಕ್ಷತೆ ವಹಿಸಿದ್ದ ಸುಪ್ರಸಿದ್ಧ ವಿದ್ವಾನ್ ಬಿ.ಎಸ್. ವಿಜಯರಾಘವನ್‌ರವರು ಮಾಡಿದ ಭಾಷಣದ ಪೂರ್ಣ ಪಾಠ.



ಇದನ್ನು ಮೊದಲು ಹಾಡಾಗಿ ರಚಿಸಿರಬೇಕು' ಎಂಬ ನಿರ್ಣಯಕ್ಕೆ ಬಂದರು. ಆ ಹಾಡಿನ ಮೇಲೆ ಕಾಂಬೋಧಿ ರಾಗದ ಹೆಸರೂ ಇದೆ. ಈ ಜಾಡನ್ನು ಹಿಡಿದು, ಮುಂದೆ ನನ್ನ ಇನ್ನೊಬ್ಬ ಗುರುಗಳಾದ ಡಾ. ಎಲ್. ಬಸವರಾಜು ಅವರು ಸಂಶೋಧನೆಯನ್ನು ಮುಂದುವರಿಸಿ, 'ಶೂನ್ಯಸಂಪಾದನೆ' ಮೊದಲಾದ ಗ್ರಂಥಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ 'ಶಿವದಾಸ ಗೀತಾಂಜಲಿ' ಎಂಬ ಮಹಾಗ್ರಂಥವನ್ನು ಬರೆದಿದ್ದಾರೆ. ಇದನ್ನು ಪರಮಪೂಜ್ಯ ಲಿಂಗೈಕ್ಯ ಜಗದ್ಗುರುಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೆ ಅರ್ಪಣೆ ಮಾಡಿರುತ್ತಾರೆ. ಶ್ರೀಗಳು ತಮ್ಮ ಸಂತೋಷವನ್ನು ಆ ಕೃತಿಯಲ್ಲಿ ಹೀಗೆ ವ್ಯಕ್ತಮಾಡಿದ್ದಾರೆ:

"ಈ ಗ್ರಂಥಸಂಪಾದಕರಾದ ಶ್ರೀ ಎಲ್. ಬಸವರಾಜು ನಮ್ಮ ಬಳಿಗೊಂದು ದಿನ ಬಂದು ಬಸವಾದಿ ಪ್ರಮಥರೂ ರಾಗತಾಳ ಸಹಿತವಾದ ಹಾಡುಗಳನ್ನು ಬರೆದಿರುವರೆಂದು ಹೇಳಿದರು. ಕೇಳಿ ನಮಗೆ ಅತ್ಯಾಶ್ಚರ್ಯವಾಯಿತು. ಆಮೇಲೆ ಅವರು ತಮ್ಮ ಹೇಳಿಕೆಯನ್ನು ಸೋದಾಹರಣವಾಗಿ ವಿವರಿಸಿದರು. ನಮಗೆ ಅತ್ಯಾನಂದವಾಯಿತು. ನಮ್ಮ ಸಂಸ್ಕೃತಿಗೆ, ಅಮೃತತೀರ್ಥಸ್ವರೂಪರಾದ ಪ್ರಮಥರ ಗೇಯಕೃತಿಗಳು ಇಡೀ ಮಾನವಲೋಕದ ಸಾರಸ್ವತ ಸ್ವತ್ತೆಂದು ಅವನ್ನು ಪ್ರಕಟಿಸಲು ಸಂಕಲ್ಪಿಸಿದೆವು.

ಶ್ರೀ ಎಲ್. ಬಸವರಾಜು ಅವರು ತಮ್ಮ ಈ ಗ್ರಂಥದ ಪ್ರಥಮಾವೃತ್ತಿಯನ್ನು ನಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸಲು ಅನುವು ಮಾಡಿ, ಅದರ ಅಚ್ಚಿನ ಕಾರ್ಯಭಾರವನ್ನೆಲ್ಲ ಹೊತ್ತುದಕ್ಕಾಗಿ ಅವರಿಗೆ ನಮ್ಮ ಆಶೀರ್ವಾದಗಳು.

ಈ ಗ್ರಂಥಸಂಪಾದಕರ ಸಾಹಿತ್ಯಸಂಶೋಧನ ಜೀವನ ಉತ್ತರೋತ್ತರ ವಿಶಾಲವೂ ರಾಷ್ಟ್ರಹಿತಕಾರಿಯೂ ಆಗಲೆಂದು ಹಾರೈಸುವೆವು.

ಶಿವಶರಣರು ರಚಿಸಿರುವ ಸ್ವರವಚನಗಳ ಸ್ವರೂಪ ಸ್ಥೂಲವಾಗಿ ಹೀಗಿದೆ: ಮೊದಲು ಪಲ್ಲವಿ, ಬಳಿಕ ಮೂರು ಅಥವಾ ಐದು ಚರಣಗಳು. ಸ್ವರವಚನಗಳಿಗೆ ಅವರು ಬಳಸಿರುವ ರಾಗಗಳ ಹೆಸರು ಹೀಗಿವೆ: ಆಹಿರಿ, ಆರಭಿ, ಕಾಂಬೋಧಿ, ಕೈಶಿಕಿಮಂಗಳ, ದೇವಗಾಂಧಾರಿ, ಘೂರ್ಜರಿ, ಗುಂಡಕ್ರಿಯ, ಗೌಳ, ಕನ್ನಡಗೌಳ, ನಾರಾಯಣಿ, ಮಾಳವಿ, ಗೌಳಿಪಂತು, ಜಂಝೂಟಿ, ಪುನ್ನಾಗವರಾಳಿ, ಫಲಮಂಜರಿ, ಭೌಳಿ, ದೇಶಾಕ್ಷಿ, ದೇಶಿ, ಧನ್ಯಾಸಿ, ನಾಟಿ, ನಾದನಾಮಕ್ರಿಯೆ, ಪಹಾಡಿ, ಪಂತುವರಾಳಿ, ಭೂಪಾಳಿ, ಭೈರವಿ, ಸಾರಂಗ, ಮಲಹರಿ, ಮಧುಮಾದವಿ, ರಾಮಕ್ರಿಯ, ಲಲಿತ, ವರಾಳಿ, ವಸಂತ, ಮಾಳವಗೌಳ, ಹಿಂದೋಳ, ಶಂಕರಾಭರಣ, ಶ್ರೀರಾಗ, ಸೌರಾಷ್ಟ್ರ - ಹೀಗೆ ಇಂದು ನಮ್ಮ ಕರ್ನಾಟಕ ಸಂಗೀತದಲ್ಲಿ ಪ್ರಸಿದ್ಧವಾಗಿರುವ ಎಲ್ಲ ರಾಗಗಳನ್ನೂ ಬಳಸಿಕೊಂಡು 'ಸ್ವರವಚನ'ಗಳನ್ನು ರಚಿಸಲಾಗಿದೆ. ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಮೇಲ್ಕಂಡ ರಾಗಗಳನ್ನು 'ಬತ್ತೀಸ ರಾಗಗಳು' ಎಂದು ಬಣ್ಣಿಸಿದ್ದಾರೆ. ತಾಳಗಳಲ್ಲಿ ಆದಿತಾಳ, ರೂಪಕತಾಳ, ಅಟ್ಟತಾಳ ಮತ್ತು ಝಂಪೆ ತಾಳಗಳನ್ನು ಬಳಸಲಾಗಿದೆ.

ಅನಂತರ 16ನೇ ಶತಮಾನದಲ್ಲಿ ಬಂದ ಹರಿದಾಸರು ಇದೇ 'ಬತ್ತೀಸ' ರಾಗ-ತಾಳಗಳನ್ನು ಬಳಸಿಕೊಂಡು 'ಪದ'ಗಳನ್ನು ರಚಿಸಿರುವುದನ್ನು ತಾವು ಗಮನಿಸಬಹುದು. ಇದಲ್ಲದೆ, ಶಿವಶರಣರ ವಚನಗಳು ಹರಿದಾಸರ ಮೇಲೆ ತುಂಬಾ ಪ್ರಭಾವವನ್ನು ಬೀರಿವೆ. ಅವರ ವಚನಗಳನ್ನು ಅನುಸರಿಸಿ, ಅನುಕರಿಸಿ ಹರಿದಾಸರು ಉಗಾಭೋಗಗಳನ್ನು ರಚಿಸಿದ್ದಾರೆ. ಕೆಲವು ಉದಾಹರಣೆಗಳನ್ನು ಗಮನಿಸಿ:

**ವಚನ**

ನಾಳೆ ಬಪ್ಪುದು ನಮಗಿಂದೇ ಬರಲಿ
ಇಂದು ಬಪ್ಪುದು ನಮಗೀಗಲೆ ಬರಲಿ
ಇದಕಾರಂಜುವರು, ಇದಕಾರಳುಕುವರು
'ಜಾತಸ್ಯ ಮರಣಂ ಧ್ರುವಂ' ಎಂಬುದಾಗಿ
ನಮ್ಮ ಕೂಡಲಸಂಗಮದೇವರು ಬರೆದ
ಬರಹವ ತಪ್ಪಿಸುವರೆ ಹರಿಬ್ರಹ್ಮಾದಿಗಳಿಗಳವಲ್ಲ

-ಬಸವಣ್ಣ

**ಉಗಾಭೋಗ**

ಇದಕಾರಂಜುವರೋ ಗೋಪಾಲ?
ಇದಕಾರಂಜುವರೋ, ನಾಳೆ ಬಾಹೋದು
ಎಮಗಿಂದೆ ಬರಲಿ, ಇಂದೆ ಬಾಹೋದು
ನಾಳೆ ಬರಲಿ, ಆಗ ಬಾಹೋದು
ಎಮಗೀಕ್ಷಣ ಬರಲಿ ಯಾತರ ಭಯವು

- ಅಚಲಾನಂದವಿಠಲ

ಇನ್ನೊಂದು ಉದಾಹರಣೆಯನ್ನು ನೋಡಿ :

**ವಚನ**

ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ
ಸುರಗಿಯ ಮೊನೆಗಂಜೆ; ಒಂದಕ್ಕಂಜುವೆ,
ಒಂದಕ್ಕಳುಕುವೆ, ಪರಸ್ತ್ರೀ ಪರಧನವೆಂಬೀ
ಜೂಬಿಗಂಜುವೆ, ಮುನ್ನಂಜದ ರಾವಣನೇ ವಿಧಿಯಾದ!
ಅಂಜುವೆನಯ್ಯಾ ಕೂಡಲಸಂಗಮದೇವ

-ಬಸವಣ್ಣ

**ಉಗಾಭೋಗ**

ಉರಿಗಂಜೆ, ಸಿರಿಗಂಜೆ
ಶರೀರದ ಭಯಕಂಜೆ



ಪರಧನ ಪರಸತಿ ಎರಡಕ್ಕಂಜುವೆನಯ್ಯ
ಹಿಂದೆ ಮಾಡಿದ ರಾವಣನೇನಾಗಿ ಪೋದನು
ಮುಂದೆನ್ನ ಸಲಹಯ್ಯ ಪುರಂದರವಿಠಲ

-ಪುರಂದರದಾಸ

ಈ ಮೇಲ್ಕಂಡ ಉದಾಹರಣೆಗಳನ್ನು ಗಮನಿಸಿದಾಗ ಹರಿದಾಸರ ಮೇಲೆ ಶಿವಶರಣರ ವಚನಗಳ ಪ್ರಭಾವ ಗಾಢವಾಗಿಯೇ ಆಗಿದೆ ಎಂಬುದನ್ನು ನೋಡಬಹುದು.

ಭಾವಜೀವಿಯಾದ ಬಸವಣ್ಣನವರಿಗೆ 'ನಾದದ ಜೀವಾಳ' ಚೆನ್ನಾಗಿಯೇ ತಿಳಿದಿತ್ತು. ಅದು ಶಿವಸಾಕ್ಷಾತ್ಕಾರಕ್ಕೆ ಪವಿತ್ರ ಸಾಧನವೆಂಬುದನ್ನು ಅವರು ಅರಿತಿದ್ದರು. ತಮ್ಮ ದೇಹವೇ ಒಂದು ವೀಣೆಯಾಗಿ, ಪರಮ ವೈಣಿಕನಾದ ಆ ಶಿವನಿಗೆ ದೊರೆಯಬೇಕೆಂಬ ಹಂಬಲ ಅವರಿಗಿತ್ತು. ಆದ್ದರಿಂದಲೇ ಅವರಿಗೆ ಶಿವನೆಂದರೆ-

ನಾದಪ್ರಿಯ ನಂದಿಯನೇರಿಕೊಂಡು ಅತೀತನ ಮೇಲೆ
ಆನಂದ ಸಿಂಹಾಸನವಿಕ್ಕಿ ಕುಳಿತವನು (ಬ.ಷ.ವ. 931)

ಎಂಬ ಭಾವವಿತ್ತು. ಚಿತ್ತಸ್ಥೈರ್ಯ ಅಥವಾ ಚಿತ್ತೈಕಾಗ್ರತೆಯನ್ನು ಸಾಧಿಸಲು ಬಸವಣ್ಣನವರು ಜಪಕ್ಕಿಂತಲೂ ಸಂಗೀತಕ್ಕೆ ಹೆಚ್ಚಿನ ಸ್ಥಾನವನ್ನು ಕೊಟ್ಟಿದ್ದಾರೆ:

ಕೋಟ್ಯನುಕೋಟಿ ಜಪವನು ಮಾಡಿ
ಕೋಟಲೆಗೊಳ್ಳಲದೇಕೆ ಮನವೇ?
ಕಿಂಚಿತು ಗೀತವೊಂದನಂತಕೋಟಿ ಜಪ!
ಜಪವೆಂಬುದೇಕೆ ಮನವೇ?
ಕೂಡಲಸಂಗನ ಶರಣರ ಕಂಡು
ಆಡಿ ಹಾಡಿ ಬದುಕು ಮನವೇ

ಎಂಬುದೇ ಬಸವಣ್ಣನವರ ನಿಲುವು. ಶಿವಶರಣರು ರಚಿಸಿರುವ ಸ್ವರವಚನಗಳ ಪ್ರಾಮುಖ್ಯತೆಯ ಬಗೆಗೆ ಹಿಂದೆ ನಡೆದ ಒಂದು ಘಟನೆಯ ಮೂಲಕ ತಿಳಿಸುತ್ತೇನೆ.

ಈ ಘಟನೆ ನಡೆದದ್ದು ಮೈಸೂರು ಸಂಸ್ಥಾನವನ್ನು ಆಳಿದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ. ದೊರೆಗಳ ಆಸ್ಥಾನದಲ್ಲಿದ್ದ ಸಂಗೀತ ವಿದ್ವಾಂಸರು ಬರೀ ಸಂಸ್ಕೃತ ಮತ್ತು ತೆಲುಗು ಭಾಷೆಗಳ ಕೀರ್ತನೆಗಳನ್ನೇ ಹೆಚ್ಚಾಗಿ ಹಾಡುವುದನ್ನು ಕೇಳಿ ಕೇಳಿ ಮಹಾರಾಜರಿಗೆ ಬೇಸರವಾಗಿತ್ತು! ಒಮ್ಮೆ ಆಸ್ಥಾನ ವಿದ್ವಾಂಸರುಗಳಲ್ಲಿ ಹಿರಿಯರಾದ ಶ್ರೀ ವಾಸುದೇವಾಚಾರ್ಯರನ್ನು ಕರೆಸಿ, "ನಿಮ್ಮ ರಚನೆಗಳೆಲ್ಲವೂ ಸಂಸ್ಕೃತ, ತೆಲುಗು ಭಾಷೆಗಳಲ್ಲಿವೆ. ಹುಟ್ಟುಕನ್ನಡಿಗರಾದ ನೀವು ಕನ್ನಡದಲ್ಲಿ ಕೃತಿರಚನೆ ಮಾಡದಿರಲು ಕಾರಣವೇನು?

ಮಾಡಬೇಕಾದ್ದು ನಿಮ್ಮ ಧರ್ಮವಲ್ಲವೆ?" ಎಂದು ಸ್ವಲ್ಪ ನಿಷ್ಠುರವಾಗಿಯೇ ಕೇಳಿದರು! ಅವರು ಕೊಟ್ಟ ಉತ್ತರ ಪ್ರಭುಗಳಿಗೆ ತೃಪ್ತಿ ಕೊಡಲಿಲ್ಲ.

ಈ ಸಂದರ್ಭದಲ್ಲಿ, ತಮಿಳುನಾಡಿನಿಂದ ಬಂದ ವಿದ್ವಾಂಸರೊಬ್ಬರು ಮಹಾರಾಜರ ಭೇಟಿಗಾಗಿ ಕಾಯುತ್ತಿದ್ದರು. ಆದರೆ ಮಹಾರಾಜರ ಭೇಟಿ ಸಿಗುವುದು ಅಷ್ಟು ಸುಲಭವಾಗಿರಲಿಲ್ಲ. ಮಹಾರಾಜರು ಪ್ರತಿನಿತ್ಯವೂ ದೇವಿಯ ದರ್ಶನಕ್ಕಾಗಿ ಚಾಮುಂಡಿ ಬೆಟ್ಟಕ್ಕೆ ಆಗಮಿಸುತ್ತಿದ್ದರು. ಈ ವಿಷಯ ವಿದ್ವಾಂಸರಿಗೆ ಗೊತ್ತಾಗಿ, ಪ್ರಭುಗಳು ಬರುವುದಕ್ಕೆ ಮುಂಚೆಯೇ ಬೆಟ್ಟಕ್ಕೆ ಹೋಗಿ, ದೇವಿಯ ಮುಂದೆ ಹಾಡುತ್ತ ಕುಳಿತರು. ಪ್ರಭುಗಳು ಆಗಮಿಸಿದರು. ಮೌನವಾಗಿ ನಿಂತು, ಆ ವಿದ್ವಾಂಸರು ಹಾಡುವುದನ್ನು ಆಲಿಸಿದರು. ಪ್ರಭುಗಳಿಗೆ ತೃಪ್ತಿಯಾಯಿತು! ಬಳಿಕ ಮಹಾರಾಜರು ಆ ವಿದ್ವಾಂಸರಿಗೆ, "ಕನ್ನಡದಲ್ಲಿ ನೀವು ಕೃತಿರಚನೆ ಮಾಡಬಲ್ಲಿರಾ?" ಎಂದು ಪ್ರಶ್ನಿಸಿದರು. ಆ ವಿದ್ವಾಂಸರು ಸ್ವತಃ ತಮಿಳರಾದರೂ ಸ್ವಲ್ಪವೂ ಹಿಂದೆಗೆಯದೆ, "ಆಗಲಿ ಮಹಾಪ್ರಭು, ರಚಿಸುತ್ತೇನೆ" ಎಂದು ನುಡಿದರು. ಸ್ವಲ್ಪ ಸಮಯ ಪಡೆದು ಕನ್ನಡ ಪಂಡಿತರೊಬ್ಬರನ್ನು ಆಶ್ರಯಿಸಿ, ಅವರಿಂದ ಕನ್ನಡ ಕೀರ್ತನೆಗಳನ್ನು ಬರೆಸಿ, ಸಂಗೀತ ಸಂಯೋಜನೆ ಮಾಡಿದರು. "ಶ್ರೀ ಚಾಮುಂಡೇಶ್ವರಿ ಅಷ್ಟೋತ್ತರ ಕೃತಿಗಳು" ಮತ್ತು "ಶಿವಾಷ್ಟೋತ್ತರ" ಕೃತಿಗಳನ್ನು ರಚಿಸಿ, ಮಹಾರಾಜರ ಸಮ್ಮುಖದಲ್ಲಿ ಹಾಡಿದರು. ಪ್ರಭುಗಳಿಗೆ ಅತ್ಯಾನಂದವಾಯಿತು! ಆ ಗಾಯಕರಿಗೆ "ಗಾಯಕ ಶಿಖಾಮಣಿ" ಎಂಬ ಬಿರುದನ್ನೂ, ಚಿನ್ನದ ಪದಕವನ್ನೂ ನೀಡಿ, ಅವರನ್ನು ಆಸ್ಥಾನ ವಿದ್ವಾಂಸರನ್ನಾಗಿ ಮಾಡಿ ಗೌರವಿಸಿದರು. ಅವರೇ "ಗಾಯಕ ಶಿಖಾಮಣಿ" ಮುತ್ತಯ್ಯ ಭಾಗವತರು.

ಈ ಪ್ರಸಂಗ ನಡೆದ ಮೇಲೆ ಮಹಾರಾಜರು ಆಸ್ಥಾನ ವಿದ್ವಾಂಸರೆಲ್ಲರನ್ನೂ ಕರೆಸಿ "ಎಲ್ಲರೂ ಕನ್ನಡದಲ್ಲಿ ಸಂಗೀತ ಕೃತಿಗಳನ್ನು ರಚಿಸಬೇಕು" ಎಂದು ಆಜ್ಞಾಪಿಸಿದರು. ನಂತರ ವೀಣೆ ಶೇಷಣ್ಣನವರು, ಬಿಡಾರಂ ಕೃಷ್ಣಪ್ಪನವರು, ವೀಣೆ ಸುಬ್ಬಣ್ಣನವರು, ವೆಂಕಟಗಿರಿಯಪ್ಪನವರು, ನನ್ನ ದೊಡ್ಡಪ್ಪನವರಾದ ಬಿ. ದೇವೇಂದ್ರಪ್ಪನವರು, ಪಿಟೀಲು ಚೌಡಯ್ಯನವರು, ಆರ್.ಎಸ್. ಕೇಶವಮೂರ್ತಿಗಳು ಮತ್ತು ಆರ್.ಎನ್. ದೊರೆಸ್ವಾಮಿಗಳು ಕನ್ನಡದಲ್ಲಿ ಕೃತಿರಚನೆ ಮಾಡಿದರು. ಈ ವಿದ್ವಾಂಸರುಗಳು ರಚಿಸಿದ ಸ್ವರಜತಿ, ವರ್ಣ, ದರು, ಕೀರ್ತನೆ ಮತ್ತು ತಿಲ್ಲಾನಗಳು ಕ್ರಮೇಣ ಜನಪ್ರಿಯವಾದುವು.

ವಚನಸಾಹಿತ್ಯ ಮತ್ತು ಸ್ವರವಚನಗಳು ಹರಿದಾಸರ ರಚನೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಅದರಲ್ಲೂ ಪುರಂದರದಾಸರ ಮೇಲೆ ಮೋಡಿ ಮಾಡಿದೆ! ಎಷ್ಟರಮಟ್ಟಿಗೆ ಅವರು ಪ್ರಭಾವಿತರಾಗಿದ್ದಾರೆ ಎಂದರೆ, ಒಂದು ದೇವರನಾಮದಲ್ಲಿ ತಮ್ಮನ್ನು ಜಂಗಮರು, ಲಿಂಗವಂತರು ಎಂದು ಹೇಳುವ ಮೂಲಕ ಬಸವಣ್ಣನವರಿಗೆ ಪರೋಕ್ಷವಾಗಿ ತಮ್ಮ ಗೌರವವನ್ನು ಸೂಚಿಸಿದ್ದಾರೆ. ಆ ದೇವರನಾಮ ಹೀಗಿದೆ:



ಜಂಗಮರು ನಾವು ಜಗದೊಳು
ಜಂಗಮರು ನಾವು ಲಿಂಗಾಂಗಿಗಳು
ಮಂಗಳವಂತರು ಭವಿಗಳೆಂತೆಂಬಿರಿ

ಹರು ಗುರು ದೈವಕೇಶವ ನಮ್ಮ ಮನೆದೈವ
ವರದ ಮೋಹನ ಗುರುಶಾಂತೇಶ
ಹರಗುರು ದ್ರೋಹ ಮಾಡಿದ ಪರವಾದಿಯು
ರೌರವ ನರಕದಿ ಮುಳುಗುವುದೆ ಸಿದ್ಧ

ವಿಭೂತಿ ನಮಗುಂಟು ವಿಶ್ವೇಶ ನಮಗುಂಟು
ಶೋಭನನಾಮ ಮುದ್ರೆಗಳುಂಟು
ಶ್ರೀಭಾಗೀರಥಿಯಗಣಿತ ಮಜ್ಜನವುಂಟು
ಸೌಭಾಗ್ಯವೀವ ಮಹಂತನ ಮಠದವರು ನಾವು

ವಿರಕ್ತರು ನಾವು ಶೀಲವಂತರು ನಾವು
ವೀರಭದ್ರಪ್ರಿಯ ಭಕ್ತರು ನಾವು
ಕಾರಣಕರ್ತ ಶ್ರೀ ಪುರಂದರವಿಠಲನ
ಕಾರುಣ್ಯಕೆ ಮುಖ್ಯಪಾತ್ರರು ನಾವು

ಕರ್ನಾಟಕ ಸಂಗೀತದ ಆದ್ಯಪ್ರವರ್ತಕರಾದ ಭಕ್ತಿಭಂಡಾರಿ ಬಸವೇಶ್ವರರನ್ನು ಈ ಸಂಗೀತ ಸಮ್ಮೇಳನದಲ್ಲಿಯೇ "ಕರ್ನಾಟಕ ಸಂಗೀತ ಪಿತಾಮಹ" ಎಂಬುದಾಗಿ ಘೋಷಿಸಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಸಭೆಯನ್ನು ಕೋರುತ್ತೇನೆ. ಬಸವೇಶ್ವರರ ಜಯಂತಿ ಸಂದರ್ಭದಲ್ಲಿ "ಶಿವಶರಣರ ಸಂಗೀತೋತ್ಸವ"ವನ್ನು ಏರ್ಪಡಿಸಿ, ಎಲ್ಲ ವಿದ್ವಾಂಸರುಗಳೂ ಶಿವಶರಣರ ಸಂಗೀತಕೃತಿಗಳನ್ನು ಹಾಡುವುದಕ್ಕೆ ಅವಕಾಶ ಕಲ್ಪಿಸಿದರೆ, ಈ ಕನ್ನಡ ರಚನೆಗಳು ಜನಪ್ರಿಯವಾಗುವುದರಲ್ಲಿ ಸಂಶಯವಿಲ್ಲ ಎಂದು ತಿಳಿಸಿದರು.

ಮೈಸೂರಿನಲ್ಲಿ ಆರು ದಿನಗಳ ಕಾಲ ವಿಜೃಂಭಣೆಯಿಂದ ಸಂಗೀತ ಸಮ್ಮೇಳನ ಜರುಗಿತು. ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಮ್ಮೇಳನದ ಅಂಗವಾಗಿ ಪ್ರತಿದಿನ ಸಂಜೆ ಖ್ಯಾತ ಸಂಗೀತಗಾರರಿಂದ ಸಂಗೀತ ಕಛೇರಿಗಳು ಏರ್ಪಾಡಾಗಿದ್ದವು. ಜೊತೆಗೆ ಬೆಳಗಿನ ವಿದ್ವತ್ ಗೋಷ್ಠಿಗಳಲ್ಲಿ ಸಂಗೀತ ವಿದ್ವಾಂಸರು ಮತ್ತು ಶಾಸ್ತ್ರಜ್ಞರುಗಳು ಉಪನ್ಯಾಸ, ವಿಚಾರಗೋಷ್ಠಿ ಹಾಗೂ ಪ್ರಾತ್ಯಕ್ಷಿಕೆಗಳು ನಡೆದವು.

□

# ವಾರ್ತಾವಿಹಾರ

## ಭವ್ಯ ಭಾರತ ನಿರ್ಮಾಣಕ್ಕೆ ಯುವಜನತೆ ಶ್ರಮಿಸಬೇಕಿದೆ

23.11.2013 ರಂದು ಸ್ವಾಮಿ ವಿವೇಕಾನಂದರ 150ನೇ ಜನ್ಮ ದಿನಾಚರಣೆ ಹಾಗೂ ವಿವೇಕಾನಂದರ ಸಂದೇಶ ಸಾರುವ ಹಿನ್ನೆಲೆಯಲ್ಲಿ ರಥಯಾತ್ರೆಯು ಮೈಸೂರಿಗೆ ಆಗಮಿಸಿದ್ದ ಸಂದರ್ಭದಲ್ಲಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ನೇತೃತ್ವದಲ್ಲಿ ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳು ಮಾತನಾಡಿದರು.

ಇಂದಿನ ಸಮಾಜಕ್ಕೆ ವಿವೇಕಾನಂದರ ಸಂದೇಶಗಳು ಉಪಯುಕ್ತವಾಗಿವೆ. ಮುಖ್ಯವಾಗಿ ಯುವಕರಿಗೆ ಅಗತ್ಯವಾದ ಸಂದೇಶಗಳು ಇದರಲ್ಲಿವೆ. ಪ್ರತಿಯೊಬ್ಬರು ಅದನ್ನು ಆದರ್ಶವಾಗಿ ಸ್ವೀಕರಿಸುವ ಅಗತ್ಯವಿದೆ ಎಂದರು.

ಬ್ರಿಟಿಷರ ದಾಸ್ಯಕ್ಕೆ ಒಳಪಟ್ಟು ದಟ್ಟದಾರಿದ್ರ್ಯದ ಕೂಪದಲ್ಲಿದ್ದ ಈ ದೇಶದ ಜನರನ್ನು ಎಚ್ಚರಗೊಳಿಸಬೇಕೆಂದು ಸ್ವಾಮಿ ವಿವೇಕಾನಂದರು ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ತಮ್ಮ ನಿಸ್ವಾರ್ಥ ಸೇವೆಯಿಂದ 'ದರಿದ್ರ ನಾರಾಯಣೋ ಭವ' ಎನ್ನುವ ಹೊಸ ಕಲ್ಪನೆ ನೀಡಿ, ಸಮಾಜದ ಬದಲಾವಣೆಗೆ ಕಾರಣರಾದರು ಎಂದರು.

ಬಾಲ್ಯದಿಂದಲೇ ಪ್ರಾಮಾಣಿಕತೆ, ಎದೆಗಾರಿಕೆ, ಸೇವಾಗುಣಗಳನ್ನು ಮೈಗೂಡಿಸಿ ಕೊಂಡಿದ್ದ ವಿವೇಕಾನಂದರು ಭಾರತದ ದಾರಿದ್ರ್ಯವನ್ನು ತೊಳೆದ ವೀರಸನ್ಯಾಸಿ ಎಂದು ಬಣ್ಣಿಸಿದರು.

ಸ್ವಾಮಿ ತತ್ವರೂಪಾನಂದಜೀ, ಸ್ವಾಮಿ ಶ್ರೀ ಮುಕ್ತಿದಾನಂದಜೀ, ಸ್ವಾಮಿ ಶ್ರೀ ಸುರೇಶಾನಂದಜೀ, ಬೆಂಗಳೂರು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶ್ರೀ ತ್ಯಾಗೀಶ್ವರಾನಂದಜೀ, ಸ್ವಾಮಿ ಶ್ರೀ ಜಗದಾತ್ಮಾನಂದಜೀ, ಶ್ರೀ ವೀರೇಶಾನಂದಜೀ, ವಿಧಾನ ಪರಿಷತ್ ಸದಸ್ಯ ಶ್ರೀ ವಿಜಯಶಂಕರ್, ಶಾಸಕ ಶ್ರೀ ವಾಸು, ಮಾಜಿ ಶಾಸಕ ಶ್ರೀ ಮಾದೇಗೌಡ ಹಾಗೂ ನಾನಾ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಪರಮಪೂಜ್ಯ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ 20ನೇ ಸಂಗೀತ ಸಮ್ಮೇಳನ

ಪರಮಪೂಜ್ಯ ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ 20ನೇ ರಾಜ್ಯಮಟ್ಟದ ಸಂಗೀತ ಸಮ್ಮೇಳನವು ಡಿಸೆಂಬರ್ 1 ರಿಂದ 6 ರವರೆಗೆ ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ



ಸಭಾಂಗಣದಲ್ಲಿ ವಿಜೃಂಭಣೆಯಿಂದ ಜರುಗಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಅಂಗಸಂಸ್ಥೆಯಾದ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಮ್ಮೇಳನದ ಅಂಗವಾಗಿ ಪ್ರತಿದಿನ ಸಂಜೆ ಖ್ಯಾತ ಸಂಗೀತಗಾರರಿಂದ ಸಂಗೀತ ಕಚೇರಿಗಳು ಏರ್ಪಾಡಾಗಿದ್ದವು. ಜೊತೆಗೆ, ಬೆಳಗಿನ ವಿದ್ವತ್‌ಗೋಷ್ಠಿಗಳಲ್ಲಿ ಸಂಗೀತ ವಿದ್ವಾಂಸರು ಮತ್ತು ಶಾಸ್ತ್ರಜ್ಞರು ಕರ್ನಾಟಕ ಶಾಸ್ತ್ರೀಯ ಸಂಗೀತದ ವಿವಿಧ ಆಯಾಮಗಳ ಮೇಲೆ, ಮುಖ್ಯವಾಗಿ ಶಾಸ್ತ್ರೀಯ ಸಂಗೀತದ ಲಕ್ಷ್ಯ ಮತ್ತು ಲಕ್ಷಣ ಸಂಪ್ರದಾಯಗಳ ಮೇಲೆ, ಬೆಳಕು ಚೆಲ್ಲುವಂತಹ ಉಪನ್ಯಾಸ, ವಿಚಾರಗೋಷ್ಠಿ ಹಾಗೂ ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟರು. ಸಮ್ಮೇಳನಾಧ್ಯಕ್ಷರಿಗೆ 'ಸಂಗೀತ ವಿದ್ಯಾನಿಧಿ' ಬಿರುದು ಸಮರ್ಪಣೆ ಹಾಗೂ ಆಯ್ದ ಸಂಗೀತ ಪೋಷಕರಿಗೆ 'ಸಂಗೀತ ಸೇವಾನಿಧಿ' ಬಿರುದು ನೀಡಿ ಸನ್ಮಾನಿಸಲಾಯಿತು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು 1.12.2013 ರಂದು ಸಂಜೆ ನಡೆದ ಸಮ್ಮೇಳನದ ಉದ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪನವರು ಸಮ್ಮೇಳನವನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದರು.

ಸಮ್ಮೇಳನಾಧ್ಯಕ್ಷರಾದ ವಿದ್ವಾನ್ ಪ್ರೊ. ಬಿ.ಎಸ್. ವಿಜಯರಾಘವನ್‌ರವರು, "ಕರ್ನಾಟಕ ಸಂಗೀತವು ಪ್ರಾಚೀನ ಇತಿಹಾಸ ಹೊಂದಿದೆ. ನಮ್ಮ ನಾಡಿನಲ್ಲಿ ಶರಣರು ಮತ್ತು ಹರಿದಾಸರು ಸಂಗೀತವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ವೀಣೆ ಶೇಷಣ್ಣ, ಬಿಡಾರಂ ಕೃಷ್ಣಪ್ಪ, ವೀಣೆ ಸುಬ್ಬಣ್ಣ, ಪಿಟೀಲು ಚೌಡಯ್ಯ ಮೊದಲಾದ ವಿದ್ವಾಂಸರು ಕನ್ನಡದಲ್ಲಿ ಕೃತಿಗಳನ್ನು ರಚಿಸಿದ್ದಾರೆ" ಎಂದು ನುಡಿದರು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಅನನ್ಯ ಜಿ.ಎಂ.ಎಲ್. ಸಾಂಸ್ಕೃತಿಕ ಅಕ್ಯಾಡೆಮಿಯ ಡಾ. ಆರ್.ವಿ. ರಾಘವೇಂದ್ರರವರಿಗೆ "ಸಂಗೀತ ಸೇವಾನಿಧಿ" ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಹಾಜನ ವಿದ್ಯಾಸಂಸ್ಥೆಯ ಗೌರವಾಧ್ಯಕ್ಷ ಶ್ರೀ ಆರ್. ವಾಸುದೇವಮೂರ್ತಿ ಯವರು 'ನಾದನಮನ' ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಿದರು.

ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಈ ಬಾರಿಯ ಸಮ್ಮೇಳನಾಧ್ಯಕ್ಷರಾದ ವಿದ್ವಾನ್ ಪ್ರೊ. ಬಿ.ಎಸ್. ವಿಜಯರಾಘವನ್ ಅವರಿಗೆ "ಸಂಗೀತ ವಿದ್ಯಾನಿಧಿ" ಬಿರುದನ್ನು ನೀಡಿ ಗೌರವಿಸಿದರು. ಕರ್ನಾಟಕ ಸರ್ಕಾರದ ವಿಧಾನಸಭಾ ಸದಸ್ಯರಾದ ಶ್ರೀ ವಾಸು, ಚೌಡಯ್ಯ ಪ್ರಶಸ್ತಿ ಪುರಸ್ಕೃತರು, ವಿದ್ವಾನ್ ಎಸ್. ಮಹದೇವಪ್ಪನವರು ಹಾಗೂ ಕಲಾಪೋಷಕರಾದ ಸಂಗೀತ ಸೇವಾನಿಧಿ ಶ್ರೀ ಕೆ.ವಿ. ಮೂರ್ತಿಯವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕಲಾವಿದರಾಗಿ, ಪೋಷಕರಾಗಿ ಸಂಗೀತ ಕ್ಷೇತ್ರಕ್ಕೆ ಮಹತ್ವದ ಕೊಡುಗೆ

ನೀಡಿರುವವರನ್ನು ಅಭಿನಂದನಾ ಪತ್ರ ನೀಡುವ ಮೂಲಕ ಸನ್ಮಾನಿಸಲಾಯಿತು. ವಿದುಷಿ ಡಾ. ಸುಕನ್ಯಾ ಪ್ರಭಾಕರ್, ನಾದಸ್ವರ ವಿದ್ವಾಂಸರಾದ ವಿದ್ವಾನ್ ಪಿ. ರಾಜಗೋಪಾಲ್, ಗಾಯಕರಾದ ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ, ಮೃದಂಗ ವಿದ್ವಾಂಸರಾದ ವಿದ್ವಾನ್ ಟಿ.ಎಚ್. ಆನಂದರಾಮ ವಿಶ್ವಕರ್ಮ ಮತ್ತು ಸುದ್ದಿಮಾಧ್ಯಮದಲ್ಲಿ ಸಂಗೀತದ ವಿಷಯಗಳನ್ನು ಪ್ರಚುರಪಡಿಸುವ ಶ್ರೀ ಕೆ.ಆರ್. ಮೋಹನ್ ಈ ಪುರಸ್ಕಾರಕ್ಕೆ ಭಾಜನರಾದವರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ವಾಸುರವರು ಭಾಷಣ ಮಾಡಿದರು. ಬಳಿಕ ಪೂಜ್ಯ ಶ್ರೀಗಳವರು ಆಶೀರ್ವಚನ ನೀಡಿದರು. "ಗಾಯಕರು ಮತ್ತು ಶ್ರೋತೃಗಳ ನಡುವೆ ಭಾವನಾತ್ಮಕ ಸಮ್ಮಿಲನ ಉತ್ತುಂಗದ ಸ್ಥಿತಿ ತಲುಪಿದಾಗ ಮಾತ್ರ ಸಂಗೀತ ರಸಾಸ್ವಾದನೆ ಸಾಧ್ಯವಾಗುತ್ತದೆ. ಎಲ್ಲ ಮಾನಸಿಕ ವೇದನೆಗಳಿಗೆ ಸಂಗೀತ ಪರಿಹಾರ ನೀಡಬಲ್ಲದು. ಸಂಗೀತಕ್ಕೆ ಜಗತ್ತನ್ನು ಮರೆಯಿಸುವ ಅಗಾಧ ಸಾಮರ್ಥ್ಯವಿದೆ. ಕಲೆ ಮನುಷ್ಯನಲ್ಲಿ ಸಂಸ್ಕಾರ ರೂಪಿಸುವ ಒಂದು ಭಾವನಾತ್ಮಕ ಸಾಧನ" ಎಂದು ಅವರು ನುಡಿದರು.

## 'ಕದಳಿಶ್ರೀ' ಪ್ರಶಸ್ತಿ ಪ್ರದಾನ

ಮೈಸೂರು ನಗರದ ಸರಸ್ವತಿಪುರಂ ಜೆಎಸ್‌ಎಸ್ ಪ್ರಾಥಮಿಕ ಶಾಲಾ ಆವರಣದಲ್ಲಿ 19.12.2013ರಲ್ಲಿ ನಡೆದ 'ಕದಳಿಶ್ರೀ' ಪ್ರಶಸ್ತಿ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪೂಜ್ಯ ಜಗದ್ಗುರು ಶ್ರೀಗಳವರು ಮಾತನಾಡಿ, ಇಂದಿನ ಧಾವಂತದ ಮಾರುಕಟ್ಟೆ ಸಂಸ್ಕೃತಿಯ ದಿನಮಾನಗಳಲ್ಲಿ ನಮ್ಮ ಮಹಿಳೆಯರಿಗೆ ಹನ್ನೆರಡನೆ ಶತಮಾನದ ಶರಣೆಯರು ಮಾದರಿಯಾಗಬೇಕಾಗಿದೆ ಎಂದು ತಿಳಿಸಿದರು.

'ಕದಳಿಶ್ರೀ' ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಡಾ. ಮೀನಾಕ್ಷಿ ಬಾಳಿಯವರು ಹೆಣ್ಣುಗಂಡಾದಿಯಾಗಿ, ಜಾತಿ, ವರ್ಣ, ಗುಂಪು ಭೇದಭಾವವಿಲ್ಲದೆ ಎಲ್ಲರೂ ಸಮಾನರು, ಎಲ್ಲರಿಗೂ ಸಮನಾಗಿ ಬದುಕುವ ಹಕ್ಕು, ದುಡಿಯುವ ಹಕ್ಕು, ಚಿಂತಿಸುವ ಹಕ್ಕು ಇದೆ ಎಂದು ತೋರಿಸಿಕೊಟ್ಟು, ವೈದಿಕ ಸಂಪ್ರದಾಯದ ಬಿಗಿ ಕಟ್ಟುಪಾಡುಗಳ ವಿರುದ್ಧ ಕ್ರಾಂತಿಕಾರಕ ಹೋರಾಟವನ್ನು 12ನೆಯ ಶತಮಾನದಲ್ಲಿ ವಚನಕಾರರು ನಡೆಸಿದರು. ಆ ವಚನಕಾರರ ಉತ್ಕೃಷ್ಟ ಪರಂಪರೆ, ಚಿಂತನೆಗಳು ಏಕೋ ಏನೋ ನಮ್ಮಲ್ಲೇ ಉಳಿದುಬಿಟ್ಟಿವೆ. ಈ ವಚನಕಾರರ ಪರಂಪರೆಯನ್ನು, ಅವರು ಸಮಾಜಕ್ಕೆ ನೀಡಿದ ಸಂಸ್ಕಾರವನ್ನು ಜಗತ್ತಿನ ಕೊನೆಯ ವ್ಯಕ್ತಿಗೂ ಮುಟ್ಟಿಸಬೇಕಾದ ಅಗತ್ಯ ಇದೆ. ಹಾಗಾದಾಗ ಮಾತ್ರ ಸಮಾಜದಲ್ಲಿ ಮನುಕುಲದಲ್ಲಿ ಶಾಂತಿ, ನೆಮ್ಮದಿ, ಸಮಾನತೆ ದೊರೆಯಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ದಕ್ಷಿಣ ವಲಯ ಡಿವೈಎಸ್‌ಪಿ ಡಾ. ಧರಣೀದೇವಿ ಮಾಲಗತ್ತಿ ಹಾಗೂ ಪ್ರಾಧ್ಯಾಪಕಿ ಡಾ. ಪ್ರೀತಿ ಶುಭಚಂದ್ರ ಅವರನ್ನು ಸನ್ಮಾನಿಸಲಾಯಿತು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪ ಅಧ್ಯಕ್ಷತೆ ವಹಿಸಿದ್ದರು.



## ಮಹಾತ್ಮರನ್ನು ನೆನೆಯಲು ಸಮ್ಮೇಳನ ಉತ್ತಮ ವೇದಿಕೆ

27.12.2013 ರಂದು ಧಾರವಾಡದಲ್ಲಿ ಪ್ರಾರಂಭವಾದ ಅಖಿಲ ಭಾರತ ಹನ್ನೊಂದನೆಯ ಶರಣ ಸಾಹಿತ್ಯ ಸಮ್ಮೇಳನದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯರು, ಮಹಾತ್ಮರನ್ನು ನೆನೆಯಲು ಸಮ್ಮೇಳನ ಉತ್ತಮ ವೇದಿಕೆ. ವೈಚಾರಿಕ ಪ್ರಜ್ಞೆಯ ಮೂಲಕ ಸಮಾಜದಲ್ಲಿ ಸಮಾನತೆ ಮೂಡಿಸಲು ಶರಣರು ಶ್ರಮಿಸಿದ್ದಾರೆ. ಅಂತಹ ಶರಣರ ಆದರ್ಶವನ್ನು ನಾವು ಪಾಲಿಸಬೇಕಿದೆ ಎಂದು ತಿಳಿಸಿದರು.

ಸಮ್ಮೇಳನದ ಸರ್ವಾಧ್ಯಕ್ಷರಾದ ನಿವೃತ್ತ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾದ ಡಾ. ಅಜಯ್‌ಕುಮಾರ್ ಸಿಂಗ್ ಅವರು ಸಮಾನತೆ, ಅಹಿಂಸೆ, ಪ್ರೇಮ ಮತ್ತು ಭ್ರಾತೃತ್ವ, ಪರಿಶುದ್ಧ ಮನಸ್ಸು, ಅಹಂಕಾರದ ನಿಯಂತ್ರಣ, ಪ್ರಾಮಾಣಿಕತೆ ಮತ್ತು ಕ್ರಿಯಾಶೀಲತೆ ಹಾಗೂ ಆಸೆ-ಆಕಾಂಕ್ಷೆಗಳ ಮೇಲೆ ನಿಯಂತ್ರಣ ಸಾಧಿಸುವುದೇ ಶರಣ ಸಾಹಿತ್ಯದ ಮೂಲ ಸಂದೇಶ ಎಂದು ಪ್ರತಿಪಾದಿಸಿದರು.

ಗ್ರಾಮೀಣಾಭಿವೃದ್ಧಿ ಸಚಿವ ಶ್ರೀ ಹೆಚ್.ಕೆ. ಪಾಟೀಲ್‌ರವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದರು.

ಆದಿಚುಂಚನಗಿರಿ ಸಂಸ್ಥಾನ ಮಠದ ಪೂಜ್ಯ ಶ್ರೀ ನಿರ್ಮಲಾನಂದ ಸ್ವಾಮಿಗಳು ಸಮ್ಮೇಳನಕ್ಕೆ ಚಾಲನೆ ನೀಡಿದರು. ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಮಾಜಿ ಸಚಿವ ಶ್ರೀ ಬಸವರಾಜ ಹೊರಟ್ಟಿ, ಮಾಜಿ ಸಭಾಪತಿ ಶ್ರೀ ವೀರಣ್ಣ ಮತ್ತಿಕಟ್ಟಿ, ಮಾಜಿ ಸಚಿವ ಶ್ರೀ ಎಸ್.ಎಸ್. ಪಾಟೀಲ್, ನಾಡೋಜ ಡಾ. ಚನ್ನವೀರ ಕಣವಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶ್ರೀ ಗೊ.ರು. ಚನ್ನಬಸಪ್ಪ ಮುಂತಾದವರು ಉಪಸ್ಥಿತರಿದ್ದರು.

## ಆಯಸ್ಸು ಮತ್ತು ಆರೋಗ್ಯಗಳ ವೃದ್ಧಿ ಆಯುರ್ವೇದ ಔಷಧಿಯ ಬಳಕೆಯಿಂದ ಮಾತ್ರ ಸಾಧ್ಯ

ಪರಮಪೂಜ್ಯರು 28.12.2013ರಂದು ನಂಜನಗೂಡಿನ ಬಿ.ವಿ. ಪಂಡಿತರ ಸದ್ವೈದ್ಯಶಾಲೆಯ ಶತಮಾನೋತ್ಸವ ಸಮಾರಂಭದ ಸಾನ್ನಿಧ್ಯವನ್ನು ವಹಿಸಿದ್ದರು. ಒಂದು ಕಾಲದಲ್ಲಿ ನಂಜನಗೂಡು ಎಂದರೆ ಹಲ್ಲುಪುಡಿಗೆ ಪ್ರಸಿದ್ಧವಾಗಿತ್ತು. ನಂಜನಗೂಡಿಗೆ ಬರುವ ರೈಲನ್ನು ಟೂತ್ ಪೌಡರ್ ಎಕ್ಸ್‌ಪ್ರೆಸ್ ಎಂದೇ ಕೆಲವರು ಕರೆಯುತ್ತಿದ್ದರು. ಅಷ್ಟರಮಟ್ಟಿಗೆ ಬಿ.ವಿ. ಪಂಡಿತರ ಹಲ್ಲುಪುಡಿ ಪ್ರಸಿದ್ಧಿ ಪಡೆದಿತ್ತು. ಇಂದಿನ ದಿನಗಳಲ್ಲಿ ಅಲೋಪತಿ ಔಷಧಿ ಎಷ್ಟೇ ಇದ್ದರೂ, ಅದಕ್ಕೆ ಸರಿಸಮಾನವಾಗಿ ಆಯುರ್ವೇದ ಔಷಧಿಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಇದು ಒಂದು ರೀತಿಯಲ್ಲಿ ಸಾಮಾಜಿಕ ಆರೋಗ್ಯದ ಲಕ್ಷಣವೂ ಹೌದು. ಆಯುರ್ವೇದ ನಮ್ಮ ದೇಶೀ ಪದ್ಧತಿ. ಅಲೋಪತಿಗೆ ವಾಸಿಯಾಗದ ಅನೇಕ ರೋಗಗಳು ಆಯುರ್ವೇದ ಔಷಧಿಯಿಂದ ಗುಣವಾದ ಉದಾಹರಣೆಗಳಿವೆ. ಇಂಥದ್ದಕ್ಕೆ ನೂರು ವರ್ಷಗಳ ಹಿಂದೆಯೇ ಭದ್ರ ಬುನಾದಿ ಹಾಕಿದವರು ನಂಜನಗೂಡಿನ ಬಿ.ವಿ. ಪಂಡಿತರು.

ಅವರ ಮುಂದಿನ ಪೀಳಿಗೆಯು ಅದನ್ನು ಅಷ್ಟೇ ಸಮರ್ಥವಾಗಿ ಮುಂದುವರೆಸಿಕೊಂಡು ಬರುತ್ತಿರುವುದು ಸಂತೋಷದ ಸಂಗತಿ ಎಂದು ಪೂಜ್ಯರು ಸದ್ವೈದ್ಯಶಾಲೆಯ "ನೂರರ ನೆನಪು" ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷರಾದ ಬಿ.ವಿ. ಪಂಡಿತರ ಪುತ್ರ ವಿಜ್ಞಾನಿ, ಪದ್ಮಭೂಷಣ ಡಾ. ಬಿ.ವಿ. ಶ್ರೀಕಂಠನ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಂದಾಯ ಸಚಿವರಾದ ಶ್ರೀ ವಿ. ಶ್ರೀನಿವಾಸ ಪ್ರಸಾದ್ ಸಮಾರಂಭವನ್ನು ಉದ್ಘಾಟಿಸಿದರು. ಸಂವಿಧಾನ ತಜ್ಞ ಡಾ. ಸಿ.ಕೆ.ಎನ್. ರಾಜ ಅವರು ಸಮಾರಂಭದಲ್ಲಿ ಮಾತನಾಡಿದರು.

ಸಮಾರಂಭದಲ್ಲಿ ಬಿ.ವಿ. ಪಂಡಿತರ ಕುಟುಂಬದ ಡಾ. ಬಿ.ವಿ. ವೆಂಕಟೇಶಮೂರ್ತಿ, ಶ್ರೀ ಬಿ.ವಿ. ರಾಮಗೋಪಾಲ್, ಡಾ. ಬಿ.ವಿ. ರಾಜಗೋಪಾಲ್ ಮತ್ತು ಶ್ರೀ ಬಿ.ಎಸ್. ಜಯಂತ್ ಉಪಸ್ಥಿತರಿದ್ದರು.

## 'ಮಹಾಮನೆ' ಉದ್ಘಾಟನೆ

29.12.2013 ರಂದು ಚಾಮರಾಜನಗರದ ವೀರಶೈವ ನೌಕರರ ಕ್ಷೇಮಾಭಿವೃದ್ಧಿ ಸಂಘ ನಿರ್ಮಿಸಿರುವ 'ಮಹಾಮನೆ' ಕಟ್ಟಡದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡುತ್ತ ಬಸವಣ್ಣನಂತಹ ಮಹಾಪುರುಷರ ಮಾರ್ಗದರ್ಶನವಿರುವ ಲಿಂಗಾಯತ ಸಮಾಜ ಸಂಘಸಂಸ್ಥೆಗಳ ಮೂಲಕ ನಾಡಿನ ಸರ್ವರಿಗೂ ಶಿಕ್ಷಣ ನೀಡುತ್ತಿದೆ. ಕಲ್ಲು ಮನಸ್ಸಿನ ಕಳ್ಳರ ಮನ ಪರಿವರ್ತನ ಮಾಡಿದ ಬಸವಣ್ಣನವರ ಮಹಾಮನೆ ಹೆಸರನ್ನು ವೀರಶೈವ ನೌಕರರ ಸಂಘ ತಮ್ಮ ಕಟ್ಟಡಕ್ಕೆ ಇಟ್ಟಿರುವುದು ಉತ್ತಮವಾದ ಕೆಲಸ. ಹಾಗೆಯೇ ಇದು ಬಸವಣ್ಣನವರ ಮಹಾಮನೆಯ ಮಾದರಿಯಲ್ಲಿಯೇ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಕಟ್ಟಡವನ್ನು ಉದ್ಘಾಟನೆ ಮಾಡಿದ ರಾಜ್ಯಸಭಾ ಸದಸ್ಯ ಹಾಗೂ ಬೆಳಗಾವಿಯ ಕೆಎಲ್ಇ ವಿಶ್ವವಿದ್ಯಾನಿಲಯದ ಕುಲಾಧಿಪತಿ ಡಾ. ಪ್ರಭಾಕರ ಕೋರೆ ಅವರು ಲಿಂಗಾಯತ ಸಮಾಜ ಇನ್ನೂ ಸಂಪೂರ್ಣ ಸಾಕ್ಷರತೆ ಸಾಧಿಸಿಲ್ಲ. ಉತ್ತರ ಕರ್ನಾಟಕದಲ್ಲಿ ಶೇ. 30ಕ್ಕೂ ಹೆಚ್ಚು ಮಂದಿ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಹೆಣ್ಣುಮಕ್ಕಳು ಮೌಢ್ಯದಿಂದ ಹೊರ ಬಂದಿಲ್ಲ ಎಂದು ತಿಳಿಸಿದರು. ವೀರಶೈವ-ಲಿಂಗಾಯತ ಸಂಸ್ಥೆಗಳು ದಾಸೋಹ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನಾಡಿಗೆ ಅಪಾರ ಕೊಡುಗೆ ನೀಡಿವೆ ಎಂದರು.

ಸಮಾರಂಭದಲ್ಲಿ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ವಿಶ್ರಾಂತ ಕುಲಪತಿ ಪದ್ಮಶ್ರೀ ಡಾ. ಎಂ. ಮಹದೇವಪ್ಪ, ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಮರಿಯಾಲದ ಶ್ರೀ ಇಮ್ಮಡಿ ಮುರುಘಾರಾಜೇಂದ್ರ ಸ್ವಾಮೀಜಿ, ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಜಿಲ್ಲಾ ಪಂಚಾಯತಿ ಅಧ್ಯಕ್ಷೆ ಶ್ರೀಮತಿ ಯಶೋಧ ಪ್ರಭುಸ್ವಾಮಿ, ಸದಸ್ಯೆ ನಾಗಶ್ರೀ ಪ್ರತಾಪ್, ಸಂಘದ ರಾಜ್ಯಾಧ್ಯಕ್ಷ ಶ್ರೀ ಬಸವಲಿಂಗಯ್ಯ, ಸಂಸ್ಥಾಪಕ ಅಧ್ಯಕ್ಷ ಶ್ರೀ ಡಿ. ಬಸಪ್ಪ, ಸಂಘದ ಅಧ್ಯಕ್ಷ ಶ್ರೀ ಆರ್.ಎಂ. ಸ್ವಾಮಿ, ಶ್ರೀ ಶಿವಕುಮಾರ್, ಶ್ರೀ ಎಲ್. ದೇವಣ್ಣ, ಶ್ರೀ ಬಿ.ಪಿ. ಪ್ರಕಾಶ್, ಶ್ರೀ ಬಿ. ದುಂಡುಮಾದಪ್ಪ, ಶ್ರೀ ಆರ್. ನಾಗಭೂಷಣ, ಶ್ರೀ ಬಿ. ಹೊನ್ನಪ್ಪ ಮುಂತಾದವರು ಉಪಸ್ಥಿತರಿದ್ದರು.



## ಜೆಎಸ್ಎಸ್ ರಂಗೋತ್ಸವ

ಮಕ್ಕಳಲ್ಲಿ ನಾಟಕಾಭಿರುಚಿಯನ್ನು ಮೂಡಿಸುವ ಉದ್ದೇಶದಿಂದ ಜೆಎಸ್ಎಸ್ ಕಲಾಮಂಟಪವು ನಗರದ ಸರಸ್ವತಿಪುರಂ ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ರಂಗೋತ್ಸವಕ್ಕೆ ದಿನಾಂಕ 26.12.2013 ಗುರುವಾರದಂದು ಚಾಲನೆ ನೀಡಲಾಯಿತು.

ಚಂಡೆ ಬಾರಿಸುವ ಮೂಲಕ ರಂಗೋತ್ಸವಕ್ಕೆ ನಾಂದಿ ಹಾಡಿದ ರಂಗಾಯಣದ ನಿರ್ದೇಶಕ ಶ್ರೀ ಜನಾರ್ದನ್‌ರವರು ಮಾತನಾಡಿ "ನಾಟಕವು ಸತ್ಯವನ್ನು ಸಾರುವ ಮಾಧ್ಯಮ. ಬಣ್ಣ, ಪರದೆ, ವಸ್ತ್ರ ಮೊದಲಾದವುಗಳೊಂದಿಗೆ ನಾಯಕ, ಖಳನಾಯಕನ ರೂಪಗಳನ್ನು ತೋರಿಸುತ್ತೇವೆ. ಕೆಟ್ಟದ್ದು ಸೋಲಬೇಕು, ಒಳ್ಳೆಯದು ಜಯಿಸಬೇಕು ಎನ್ನುವುದೇ ನಾಟಕದ ಮೂಲ ಉದ್ದೇಶ. ವಿದ್ಯಾರ್ಥಿಗಳ ನಿಜವಾದ ಕಲಿಕೆ ಎಂದರೆ ಅವರಲ್ಲಿ ಕಾವ್ಯಪ್ರಜ್ಞೆ ಮತ್ತು ಸಂಸ್ಕೃತಿಪ್ರಜ್ಞೆಯನ್ನು ಮೂಡಿಸುವುದು. ಪರೀಕ್ಷೆಯಲ್ಲಿ ಗಳಿಸುವ ಅಂಕಗಳಷ್ಟೇ ಮುಖ್ಯವಲ್ಲ. ಸಮಾಜ ನೀಡುವ ಅಂಕ ಗಳಿಸಬೇಕಾದರೆ, ಒಳ್ಳೆಯ ನಾಟಕವನ್ನು ನೋಡಬೇಕು ಮತ್ತು ಆಡಬೇಕು. ಮಕ್ಕಳಲ್ಲಿ ನಾಟಕಾಭಿರುಚಿಯನ್ನು ಬಿತ್ತುವುದು, ಒಳ್ಳೆಯ ನಡೆನುಡಿಯನ್ನು ಬೆಳೆಸುವುದು ಬಹಳ ಮುಖ್ಯ. ಮಾನವೀಯ ಮೌಲ್ಯಗಳನ್ನು ನಿರಂತರವಾಗಿ ಕೊಂಡೊಯ್ಯುವುದು ಎಲ್ಲರ ಜವಾಬ್ದಾರಿ ಹಾಗೂ ಕರ್ತವ್ಯ" ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗದುಗಿನ ರಂಗತಜ್ಞ ಡಾ. ನಿಂಬು ಸೊಲಗಿಯವರು ಮಾತನಾಡಿ "ರಂಗಚಟುವಟಿಕೆ ಗಳಲ್ಲಿ ತೊಡಗುವುದರಿಂದ ಮಕ್ಕಳಲ್ಲಿ ಭೌತಿಕ ಮತ್ತು ಭಾವನಾತ್ಮಕ ವಿಕಾಸಗಳು ಜೊತೆಜೊತೆಗೆ ಬೆಳೆಯಲು ಸಾಧ್ಯ. ಹಿಂದೆ ಮಕ್ಕಳು ಬಾಲ್ಯದ ಆಟಗಳ ಮೂಲಕವೇ ಜೀವನಕೌಶಲವನ್ನು ಕಲಿಯುತ್ತಿದ್ದರು. ಇಂದಿನ ಮಕ್ಕಳಲ್ಲಿ ಸೃಜನಶೀಲತೆ, ಕ್ರಿಯಾಶೀಲತೆ ಮರೆಯಾಗುತ್ತಿವೆ. ರಿಯಾಲಿಟಿ ರೀಲ್‌ನಿಂದ ಮಕ್ಕಳು ಹೊರಬರಬೇಕಿದೆ. ಜಾಹಿರಾತಿನ ಜಾಲದಿಂದ ಹೊರಬರದಿದ್ದರೆ ಭವಿಷ್ಯದಲ್ಲಿ ಮಕ್ಕಳ ರಂಗಭೂಮಿ ಬೆಳೆಯಲು ಸಾಧ್ಯವಾಗದು. ರಂಗಭೂಮಿ ಎನ್ನುವುದು ಕೇವಲ ಪ್ರದರ್ಶನ ವಸ್ತುವಲ್ಲ. ಅದೊಂದು ಅದ್ಭುತ ಪ್ರಕ್ರಿಯೆ ಎನ್ನುವುದನ್ನು ಅರಿತುಕೊಳ್ಳಬೇಕಾಗಿದೆ" ಎಂದು ನುಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆಎಸ್ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಕೆ. ಶಾಂತಯ್ಯನವರು "ಗಾಂಧೀಜಿಯ ವರು ಸತ್ಯ ಹರಿಶ್ಚಂದ್ರ ನಾಟಕವನ್ನು ನೋಡಿ ಪ್ರಭಾವಿತರಾ ದರು. ನಾಟಕ ತುಂಬ ಪ್ರಭಾವಶಾಲಿಯಾದ ಮಾಧ್ಯಮ. ಮಕ್ಕಳು ತಮ್ಮ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳಲು ನಾಟಕ ಪ್ರೇರಣೆ ನೀಡಬಲ್ಲದು. ನಾಟಕದ ಪರಿಕಲ್ಪನೆ, ಉದ್ದೇಶಗಳನ್ನು ಸಂಸ್ಥೆಯ ವಿದ್ಯಾರ್ಥಿಗಳಲ್ಲಿ

ಮೂಡಿಸಲು ಜೆಎಸ್‌ಎಸ್ ಸಂಸ್ಥೆಯು ನೂತನ ಯೋಜನೆಗಳನ್ನು ಹಮ್ಮಿಕೊಂಡಿದೆ" ಎಂದು ತಿಳಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರ ಸ್ಮರಣಾರ್ಥ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

**ರಂಗೋತ್ಸವ ಸಮಾರೋಪ**

ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ 28.12.2013 ರಂದು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ರಂಗೋತ್ಸವ ಸಮಾರೋಪ ಸಮಾರಂಭ ನಡೆಯಿತು.

ಮೂರು ದಿನಗಳ ಕಾಲ ನಡೆದ ರಂಗೋತ್ಸವದ ಸಮಾರೋಪ ಭಾಷಣವನ್ನು ರಂಗಾಯಣ ಕಲಾವಿದ ಶ್ರೀ ಮಂಜುನಾಥ್ ಬೆಳಕೆರೆಯವರು ಮಾಡಿದರು. ರಂಗಪರಂಪರೆಗೆ ಗುರುಪರಂಪರೆಯ ಇತಿಹಾಸವಿದೆ. ರಾಜಾಶ್ರಯದಲ್ಲಿ ಬೆಳೆದು ಬಂದಿರುವ ನಾಟಕ ಮಾಧ್ಯಮ ಯಾವುದಾದರೂ ವಿಷಯವನ್ನು ಸಮಾಜಕ್ಕೆ ಸಮರ್ಪಕವಾಗಿ ತಿಳಿಸಬಲ್ಲದು. ವ್ಯಕ್ತಿತ್ವ ವಿಕಸನ, ಆತ್ಮಸ್ಥೈರ್ಯ, ಮಾನವೀಯತೆ ಹಾಗೂ ಜಾತ್ಯತೀತ ಮನೋಭಾವವನ್ನು ಮೂಡಿಸಲಿದ್ದು, ಇದರಿಂದಾಗಿ ಮಕ್ಕಳಲ್ಲಿನ ರಂಗಾಸಕ್ತಿಯನ್ನು ಪೋಷಕರು ಪ್ರೋತ್ಸಾಹಿಸಲಿ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮೈಸೂರು ರಾಜರು ಅರಮನೆ ನಾಟಕ ಮಂಡಳಿಯನ್ನು ಸ್ಥಾಪಿಸಿ ಅವರೇ ನಾಟಕ ಅಭಿನಯಿಸುವುದರ ಜತೆಗೆ ನಾಟಕ ಮಾಡಿಸಿ ರಂಗಭೂಮಿಗೆ ಪ್ರೋತ್ಸಾಹ ನೀಡುತ್ತಿದ್ದರು ಎಂದರು.

ಸಮಾರಂಭದಲ್ಲಿ ಆಸ್ಟ್ರೇಲಿಯಾದಿಂದ ಆಗಮಿಸಿದ್ದ ಎಂಜಿನಿಯರ್ ಶ್ರೀಶೈಲ ಉಟಗಿ ಹಾಗೂ ಡಾ. ಭಾರತಿ ಉಟಗಿ ಮತ್ತಿತರರು ಉಪಸ್ಥಿತರಿದ್ದರು.

**ದೆಹಲಿಯ ರಾಷ್ಟ್ರಮಟ್ಟದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಜೆಎಸ್‌ಎಸ್ ಕಾಲೇಜಿನ ವಿದ್ಯಾರ್ಥಿನಿ ಕು. ಎಚ್.ಎಂ. ವೀಣಾ**

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಅಂತಿಮ ಬಿ.ಎ. ವಿದ್ಯಾರ್ಥಿನಿ ಕು. ಎಚ್.ಎಂ. ವೀಣಾ ಅವರು ಈ ವರ್ಷ ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕಿಯಾಗಿ ಭಾಗವಹಿಸಿದ್ದರು. ಇವರು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಹಂಗರಾಪುರ ಗ್ರಾಮದ ಶ್ರೀ ಮಹದೇವಪ್ಪನವರ ಮಗಳು.

□



ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯು ನೀಡುವ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ಜಯಶ್ರೀ ದಂಡೆ ಮತ್ತು ಡಾ. ವೀರಣ್ಣ ದಂಡೆಯವರಿಗೆ ಪ್ರದಾನಿಸಲಾಯಿತು. ಚಿತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಪರಮಪೂಜ್ಯ ಶ್ರೀಗಳವರು, ಶ್ರೀ ಕೆ.ಸಿ. ಶಿವಪ್ಪನವರು ಮತ್ತು ಪ್ರೊ. ಮೊರಬದ ಮಲ್ಲಿಕಾರ್ಜುನ



ಮೈಸೂರಿನಲ್ಲಿ ನಡೆದ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ನಾಲ್ಕನೆಯ ಪದವಿ ಪ್ರದಾನ ಸಮಾರಂಭದಲ್ಲಿ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಡಾ.ಟಿ. ರಾಮಸ್ವಾಮಿ, ಶ್ರೀ ಬಿ.ಎನ್. ಬೆಟ್‌ಕೆರೂರ್, ಡಾ. ಬಿ. ಸುರೇಶ್, ಡಾ. ಬಿ. ಮಂಜುನಾಥ್, ಡಾ. ಆರ್. ವಿಜಯ ಸಿಂಹ ಅವರು ನೂತನ ಪದವೀಧರರೊಡನೆ




ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ನಾಲ್ಕನೆಯ ಪದವಿ ಪ್ರದಾನ ಸಮಾರಂಭದಲ್ಲಿ ಪೂಜ್ಯ ಶ್ರೀಗಳವರು, ನ್ಯಾ.ಮೂ. ಶ್ರೀ ಎಂ.ಎನ್. ವೆಂಕಟಾಚಲಯ್ಯ, ಶ್ರೀ ಬಿ.ಎನ್. ಬೆಟ್‌ಕೆರೂರ್, ಪ್ರೊ. ಎಂ.ಎಚ್. ಧನಂಜಯ ಮತ್ತಿತರರು



ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಸಂಸ್ಥೆಯು ಆಯೋಜಿಸಿದ್ದ ಸಂಗೀತ ಸಮ್ಮೇಳನದಲ್ಲಿ ಪೂಜ್ಯ ಶ್ರೀಗಳವರು ಪ್ರೊ. ಬಿ.ಎಸ್. ವಿಜಯರಾಘವನ್ ಅವರಿಗೆ 'ಸಂಗೀತ ಸೇವಾನಿಧಿ' ಪ್ರಶಸ್ತಿ ಪ್ರದಾನ ಮಾಡಿದರು. ಚಿತ್ರದಲ್ಲಿ ಶಾಸಕ ಶ್ರೀ ವಾಸು, ಶ್ರೀ ಕೆ.ವಿ. ಮೂರ್ತಿ, ಪ್ರೊ. ಬಿ. ತಿಪ್ಪೇಸ್ವಾಮಿ, ವಿದ್ವಾನ್ ಎಸ್. ಮಹಾ ದೇವಪ್ಪ ಮತ್ತು ಶ್ರೀ ಸಿ.ಆರ್. ಹಿಮಾಂಶು ಅವರುಗಳಿದ್ದಾರೆ




ಸಂಗೀತ ಸಮ್ಮೇಳನ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶ್ರೀಗಳವರು ಸಂಗೀತ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದವರನ್ನು ಅಭಿನಂದಿಸಿದರು. ಚಿತ್ರದಲ್ಲಿ ವಿದುಷಿ ಡಾ. ಸುಕನ್ಯಾ ಪ್ರಭಾಕರ್, ವಿದ್ವಾನ್ ಪಿ. ರಾಜ ಗೋಪಾಲ್, ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ, ವಿದ್ವಾನ್ ಟಿ.ಎಚ್. ಆನಂದರಾಮು ವಿಶ್ವಕರ್ಮ ಮತ್ತು ಶ್ರೀ ಕೆ.ಆರ್. ಮೋಹನ್ ಅವರುಗಳು




ಮೈಸೂರಿನಲ್ಲಿ ನಡೆದ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ನಾಲ್ಕನೆಯ ಪದವಿ ಪ್ರದಾನ ಸಮಾರಂಭದಲ್ಲಿ ಡಾ. ವಿ. ದಿವ್ಯಾ ಅವರಿಗೆ ಪ್ರಶಸ್ತಿ ಪತ್ರ ನೀಡಿ ಶ್ರೀಗಳವರು ಅಭಿನಂದಿಸಿದರು. ಚಿತ್ರದಲ್ಲಿ ಶ್ರೀ ಬಿ.ಎನ್. ಬೆಟ್‌ಕೆರೂರ್, ಡಾ. ಟಿ. ರಾಮಸ್ವಾಮಿ ಮತ್ತು ಕುಲಪತಿ ಡಾ. ಬಿ. ಸುರೇಶ್ ರವರಿದ್ದಾರೆ




ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಸಂಸ್ಥೆಯ 20ನೆಯ ಸಂಗೀತ ಸಮ್ಮೇಳನದಲ್ಲಿ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಡಾ. ಆರ್.ವಿ. ರಾಘವೇಂದ್ರರವರಿಗೆ "ಸಂಗೀತ ಸೇವಾನಿಧಿ" ಪ್ರಶಸ್ತಿ ಪ್ರದಾನ ಮಾಡಿದರು. ಚಿತ್ರದಲ್ಲಿ ಶ್ರೀ ಆರ್. ವಾಸುದೇವಮೂರ್ತಿ, ಶ್ರೀ ಕೆ.ವಿ. ಮೂರ್ತಿ, ಪ್ರೊ. ಕೆ.ಎಸ್. ರಂಗಪ್ಪ, ಪ್ರೊ. ಬಿ.ಎಸ್. ವಿಜಯರಾಘವನ್ ಮತ್ತು ಶ್ರೀ ಸಿ.ಆರ್. ಹಿಮಾಂಶು ಅವರುಗಳಿದ್ದಾರೆ




ಶಾರದಾಮಂದಿರ ಪ್ರಕಾಶನ ಸಂಸ್ಥೆಯ ಪ್ರೊ. ಎಚ್.ಎಂ. ಶಂಕರನಾರಾಯಣರಾವ್ ಅವರ 'ನೂರರ ನೆನಪು' ಸಮಾರಂಭ: ಚಿತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳು, ಡಾ. ಪ್ರಧಾನ್ ಗುರುದತ್, ಮಾಜಿ ಶಾಸಕ ಪ್ರೊ. ಎಂ. ಸತ್ಯನಾರಾಯಣರಾವ್, ಡಾ. ಎನ್.ಎಸ್. ತಾರಾನಾಥ, ಡಾ. ಎಚ್.ಎಸ್. ಹರಿಶಂಕರ್ ಮುಂತಾದವರು